ನಾವೆಲ್ಲ ಬದ್ಧರಾಗೋಣ, ಅವರ ತೀರ್ಪಿಗೆ ನಾವು ಬಿಡೋಣ. ದಯವಿಟ್ಟು ಸದನದ ಕಾರ್ಯಕಲಾಪ ಪ್ರಾರಂಭವಾಗಬೇಕು. ಇಲ್ಲವೆಂದರೆ, ಈ ಎರಡು-ಮೂರು ದಿವಸವಾದರೂ ಚೆನ್ನಾಗಿ ನಡೆಯಿತು ಎನ್ನತಕ್ಕ ಮಾತನ್ನು ದಯವಿಟ್ಟು ಅನ್ನಿಸಿಕೊಳ್ಳದಿದ್ದರೆ I think, this leads to something else for the people to have their own opinion. ದಯವಿಟ್ಟು ತಾವು ಅದಕ್ಕೆ ಅವಕಾಶ ಕೊಡದಹಾಗೆ ತಾವೆಲ್ಲರೂ ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಹೇಳಿ ನಾನು ನಂಬಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ, ನಮಸ್ಕಾರ.

ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳಾದಿಯಾಗಿ ಶ್ರೀಮಾನ್ ಬಂಗಾರಪ್ಪನವರು ಮತ್ತು ಇತರೆ ಎಲ್ಲಾ ಪಕ್ಷಗಳ ಸದಸ್ಯರುಗಳು ಹೇಳಇದ ಮಾತುಗಳನ್ನು ನಾನು ಕೇಳಿದ್ದೇನೆ. ನಿಮ್ಮ ಭಾವನೆಗಳು ನನಗೆ ಅರ್ಥವಾಗಿದೆ. ಸನ್ಮಾನ್ಯ ಸಭಾನಾಯಕರು ಹೇಳಿದ್ದುದು ಇವತ್ತು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದುದು ಮತ್ತು ಮಾನ್ಯ ಬಂಗಾರಪ್ಪನವರು ಹೇಳಿದ್ದುದು ಎಲ್ಲಾ ಮಾತಿನ ಅರ್ಥ ಒಂದೇ. ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಸದನದ ಕಲಾಪ ನಡೆಸಿದರೆ ಅದಕ್ಕೆ ಹೆಚ್ಚು ಅರ್ಥ ಮತ್ತು ಗೌರವ ಬರುತ್ತದೆಂದು ಹೇಳಿದರು. ಆಗಲಿ ಒಂದು ವೇಳೆ ಅಣ್ಣತಮ್ಮಂದಿರಲ್ಲಿ ಸ್ವಲ್ಪ ವ್ಯತ್ಯಾಸಗಳು ಬರಬಹುದು, ನೀವು ಎಷ್ಟೇ ಉಗ್ರವಾಗಿ ಮಾತನಾಡಿದರೂ ಕೂಡ ತಾಯಿಗೆ ಅಣ್ಣತಮ್ಮಂದಿರೆಲ್ಲ ಒಂದೇ ಆಗಿರುತ್ತಾರೆ. ಆದ್ದರಿಂದ ಈ ಸ್ಥಾನಕ್ಕೆ ನಾನು ದೊಡ್ಡವನು ಅಲ್ಲದಿದ್ದರೂ ಕೂಡ ಈ ಸ್ಥಾನಕ್ಕೆ ತಾಯಿತನದ ತಾಳ್ಮೆ ಇರಬೇಕಾಗುತ್ತದೆ. ನಾನು ಇನ್ನೊಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡತಕ್ಕ ಹಂತದಲ್ಲಿದ್ದೇನೆ. ದಯಮಾಡಿ ನನ್ನ ಜೊತೆಗೆ ತಾವೆಲ್ಲರೂ ಸಹಕರಿಸಬೇಕೆಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗ ನಮ್ಮ ಸದಸ್ಯರುಗಳು ಯಾರು ಧರಣಿ ಮಾಡುತ್ತಿದ್ದಾರೆ, ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ನಿಮ್ಮ ಭಾವನೆಗಳನ್ನು ಕೂಡ ನಾನು ಗೌರವಿಸಲಿಕ್ಕೆ ಸಿದ್ಧನಿದ್ದೇನೆ. ಇನ್ನೊಂದು ಪ್ರಯತ್ನವನ್ನು ನಾನು ಮಾಡಲಿಕ್ಕೆ ತಾವು ಸಹಕರಿಸಬೇಕು. ತಾವು ತಮ್ಮ ಸ್ವಸ್ಥಾನಗಳಿಗೆ ಹಿಂದಿರುಗಿ. ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆ ಪುನಃ 3 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸಭೆ ಮಧ್ಯಾಹ್ನ 12 ಗಂಟೆ 16 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಷಗೊಳ್ಳಲು ನಿಶ್ಚಯಿಸಲಾಯಿತು.)

(ಸದನವು ಪುನಃ 5 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರು ಅಧ್ಯಕ್ಷಸ್ಥಾನದಲ್ಲಿ ಉಪಸ್ಥಿತರಿದ್ದರು.)

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರೇ, ಬೇಡಿಕೆಗಳ ಮೇಲೆ ಚರ್ಚೆಯನ್ನು ಮುಂದುವರಿಸಿ.

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ (ಮುಂದುವರೆದುದು)

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮೊನ್ನೆ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುವಾಗ ವಸತಿ ವಿಷಯದ ಬಗ್ಗೆ ನಾನು ಚರ್ಚೆಯನ್ನು ಪ್ರಾರಂಭ

ಮಾಡಿದ್ದೆ. ಇದನ್ನು ಮಾಡುವಾಗ ನಮ್ಮ ರಾಜ್ಯದಲ್ಲಿ ವಸತಿ ಯೋಜನೆ ಬಗ್ಗೆ ಒಂದು ಸಮಗ್ರವಾದ ಮತ್ತು ವೈಜ್ಞಾನಿಕವಾದಂಥ ಒಂದು ಯೋಜನೆಯನ್ನು ನಾವು ರೂಪಿಸಬೇಕಾಗಿದೆ ಎನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿದೆ. ಈಗಾಗಲೇ ನಾವು ತಿಳಿದುಕೊಂಡಿರುವ ಹಾಗೆ ಸರ್ಕಾರ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದೆ. ತೀರ್ಮಾನಗಳನ್ನು ತೆಗೆದುಕೊಂಡು ಜಾರಿ ಮಾಡತಕ್ಕಂಥ ಹಂತಕ್ಕೆ ಬಂದಿದೆ. ಇದರಲ್ಲಿ ಮುಖ್ಯವಾಗಿ ನಿವೇಶನ ರಹಿತರು ಮತ್ತು ವಸತಿ ರಹಿತರು ಎಂದು ಎರಡು ಗುಂಪಿನ, ವರ್ಗದ ಜನರನ್ನು ಗುರುತಿಸತಕ್ಕಂಥ ಕಾರ್ಯದಲ್ಲಿ ಸರ್ವೆ ಮಾಡುವುದಕ್ಕಾಗಿ, ಪರಿವೀಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಪರಿವೀಕ್ಷಣೆಯಲ್ಲಿ ಹಲವಾರು ಲೋಪದೋಷಗಳು ಕೂಡ ಕಂಡುಬಂದಿವೆ. ಅವುಗಳು ಯಾವ ಹಂತದಲ್ಲಿ ಕಂಡುಬಂದಿವೆ ಎಂದರೆ ಸರ್ವೆಮಾಡತಕ್ಕಂಥ ಸಂದರ್ಭದಲ್ಲಿ, ಹಳ್ಳಿಗಳಲ್ಲಿ ಸರ್ವೆ ಮಾಡಲಿಕ್ಕೆಂದು ಹಲವಾರು ಸಂದರ್ಭಗಳಲ್ಲಿ ಅವರುಗಳು ಕೆಲಸಕಾರ್ಯಗಳಲ್ಲಿ ಇರತಕ್ಕಂಥ ಸಂದರ್ಭದಲ್ಲಿ, ಮನೆಯಲ್ಲಿ ಜನರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ, ಈ ಸರ್ವೆ ಮಾಡತಕ್ಕಂಥ ಕಾರ್ಯಮಾಡಿ, ನಿಜವಾದಂಥ ವಸತಿಹೀನರು ಮತ್ತು ನಿವೇಶನ ರಹಿತರು ಯಾರು ಎಂದು ಹೇಳ ತಕ್ಕದ್ದರಲ್ಲಿ ಬಹಳ ವ್ಯತ್ಯಾಸವಾಗಿದೆ.

ಈಗ ಸರ್ವೆ ಮಾಡಿರುವುದರಲ್ಲಿ ನಮಗೆ ಹಲವಾರು ದೂರುಗಳು ಬಂದಿವೆ. ಸರ್ವೆ ಮಾಡುವಾಗ ಬಿಟ್ಟುಹೋಗಿರತಕ್ಕಂಥಾದ್ದು ಮತ್ತು ಗಣನೆಗೆ ತೆಗೆದುಕೊಳ್ಳದೇ ಇರತಕ್ಕಂಥಾದ್ದು. ಇನ್ನೊಂದು ಅಂಶವೆಂದರೆ, ಯಾವ ಆಧಾರದ ಮೇಲೆ ಸರ್ವೆ ಮಾಡಬೇಕು? ಮನೆರಹಿತರು ಮತ್ತು ನಿವೇಶನರಹಿತರು ಎಂದು ಇದಕ್ಕೆ ಸರ್ಕಾರ ಒಂದು ಆದಾಯ ಮಿತಿಯನ್ನು ಕೂಡ ನಿಗದಿ ಮಾಡಿದೆ. ಈ ಆದಾಯ ಮಿತಿಯನ್ನು ನಿಗದಿ ಮಾಡಿರತಕ್ಕಂಥಾದ್ದು ಅಷ್ಟು ಸಮಂಜಸವಾಗಿ ಕಂಡುಬರುತ್ತಿಲ್ಲ. ಮತ್ತೆ ಸರ್ಕಾರ ಏನು ಮಾಡುತ್ತಿದೆ ಎಂದರೆ, ಇದು ಬಡವರಿಗೆ ಮನೆಗಳನ್ನು ಹಂಚತಕ್ಕಂಥ ಕಾರ್ಯಕ್ರಮ ಬಹುಶಃ ನಮ್ಮ ದೇಶದ ಇತಿಹಾಸದಲ್ಲಿ ಎಲ್ಲಿಯೂ ನಾವು ನೋಡುತ್ತಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಲಾಟರಿಯನ್ನು ಎತ್ತಿ ಆದರ ಮುಖಾಂತರ ಮನೆಗಳನ್ನು ವಿತರಣೆ ಮಾಡತಕ್ಕಂಥಾದ್ದು ಏನಿದೆ ಇದರ ಬಗ್ಗೆ ಸರ್ಕಾರ ಈಗಾಗಲೇ ಸರ್ಕ್ಯುಲರ್ ಅನ್ನು ಕಳುಹಿಸಿಕೊಟ್ಟಿದೆ. ನಿಜವಾಗಿಯೂ ಕೂಡ ಇದು ಬಹಳ ಅವೈಜ್ಞಾನಿಕವಾದಂಥಾದ್ದು ನಾವೆಲ್ಲರೂ 21ನೇ ಶತಮಾನಕ್ಕೆ ಹೋಗುತ್ತಿದ್ದೇವೆ, ಇದು ವೈಜ್ಞಾನಿಕ ಯುಗ. ಈ ವೈಜ್ಞಾನಿಕ ಯುಗದಲ್ಲಿ ಲಾಟರಿ ಎತ್ತಿ ಮನೆಗಳನ್ನು ಬಡವರಿಗೆ ವಿತರಣೆ ಮಾಡತಕ್ಕಂಥಾದ್ದು ನಿಜವಾಗಿಯೂ ಮೌಢ್ಯತೆಯ ಪರಮಾವಧಿ. ಒಂದು ಕಡೆ ಬಡತನವನ್ನು ಅದೃಷ್ಟದಿಂದ ಪರೀಕ್ಷೆ ಮಾಡತಕ್ಕಂಥಾದ್ದು ಇದೆ. ಇದು ತೀರಾ ಬಡವರಿಗೆ ಅವಮಾನ ಆಗತಕ್ಕಂಥ ವಿಷಯ. ಮತ್ತೆ ಬಡವರನ್ನು ಅವಹೇಳನ ಮಾಡತಕ್ಕಂಥ ವಿಷಯ. ಈಗ ಅದೃಷ್ಟ ಮತ್ತು ದುರಾದೃಷ್ಟದ ಬಗ್ಗೆ ನಾವೇ ಹಲವಾರು ಸಂದರ್ಭಗಳಲ್ಲಿ ಪ್ರತಿಪಾದನೆ ಮಾಡುತ್ತೇವೆ. ಅದೃಷ್ಟ ಇದ್ದವರು ಶ್ರೀಮಂತರಾಗಿದ್ದಾರೆ ಮತ್ತು ದುರಾದೃಷ್ಟ ಉಳ್ಳವರು ಬಡವರಾಗಿದ್ದಾರೆ ಎಂದು. ಇದು ನಾವೇ ಒಪ್ಪಿ ಮಾತನಾಡತಕ್ಕಂಥ ಜನ. ಮತ್ತೆ ಅವರ ಬಡತನವನ್ನು ಅದೃಷ್ಟದಿಂದ ಪರೀಕ್ಷೆ ಮಾಡತಕ್ಕಂಥಾದ್ದು ಇದೆ. ಇದು ಸಂಪೂರ್ಣವಾಗಿ ತಪ್ಪು ಅವೈಜ್ಞಾನಿಕ ಮತ್ತು ಮೌಢ್ಯತೆಯ ಪರಮಾವಧಿ ನಾನು ಸ್ಪಷ್ಟವಾಗಿ ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಈ ಲಾಟರಿ ಎತ್ತತಕ್ಕಂಥ ವಿಷಯವನ್ನು ಸಂಪೂರ್ಣವಾಗಿ ಸರ್ಕಾರ ಹಿಂತೆಗೆದುಕೊಳ್ಳಬೇಕು. ಅದರ ಬದಲಾಗಿ ನಿಜವಾದಂಥ ಬಡವರನ್ನು ಗುರುತಿಸತಕ್ಕಂಥ ಕೆಲಸವನ್ನು ಸರ್ಕಾರಕ್ಕೆ ಶ್ರಮವಾದರೂ ಕೂಡ ಮಾಡಬೇಕು. ಇದರಲ್ಲಿ ಕೆಲವು ಸಂದರ್ಭಗಳಲ್ಲಿ ಲೋಪದೋಷಗಳು ಕೂಡ ಆಡಲಿಕ್ಕೆ ಸಾಧ್ಯತೆ ಇದೆ, ಇಲ್ಲವೆಂದಲ್ಲ. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈಗ ಮನೆಗಳನ್ನು ಹಂಚಲಿಕ್ಕೆ ಬೇರೆಬೇರೆ ರೀತಿಯ ವ್ಯವಸ್ಥೆಗಳು ಇವೆ. ಗ್ರಾಮಪಂಚಾಯತಿ ಇದೆ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿಗಳು ಹಾಗೂ ಶಾಸಕರುಗಳು ಇದ್ದಾರೆ. ಈ ಎಲ್ಲ ಹಂತಗಳಲ್ಲೂ ಇದು ಹಂಚಬೇಕಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಲೋಪದೋಷಗಳು ಬರತಕ್ಕಂಥಾದ್ದು ಕೂಡ ಸಹಜವೇ. ಆದರೆ ಎಲ್ಲೋ ಒಂದು ಕಡೆ ಲೋಪದೋಷಗಳು ಬರುತ್ತವೆ ಎಂದು ಹೇಳಿ ಲಾಟರಿ ಮುಖಾಂತರ ಬಡವರನ್ನು ಗುರುತಿಸುವುದು ಲಾಟರಿ ಮುಖಾಂತರ ಬಡತನವನ್ನು ಪರೀಕ್ಷೆ ಮಾಡಲಿಕ್ಕೆ ಹೋಗತಕ್ಕಂಥಾದ್ದು ಏನಿದೆ, ಇದು ನಮಗೆಲ್ಲರಿಗೂ ಅವಮಾನವಾಗತಕ್ಕಂಥ ವಿಷಯ. ಆದ್ದರಿಂದ ಇದನ್ನು ಕೈಬಿಡಬೇಕು. ಬಡವರು ಈಗಾಗಲೇ ಅವಹೇಳನಕ್ಕೆ ಒಳಗಾಗಿದ್ದಾರೆ. ಅವರು ತಮ್ಮ ಬಡತನದಿಂದಾಗಿ ಅವಹೇಳನಕ್ಕೆ ಗುರಿಯಾಗಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಸರ್ಕಾರ ಯಾವರೀತಿಯಲ್ಲಿ ಆಶ್ರಯ ಯೋಜನೆಯಲ್ಲಿ ಶಾಸಕರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಈ ಮನೆಗಳನ್ನು ಮತ್ತು ನಿವೇಶನಗಳನ್ನು ಹಂಚತಕ್ಕಂಥ ಕೆಲಸ ಏನು ನಡೆಯುತ್ತಿತ್ತು, ಇದು ಕೂಡ ಅದೇ ರೀತಿಯಲ್ಲಿ ನಡೆಯಬೇಕು ಎನ್ನತಕ್ಕಂಥಾದ್ದು ಸರ್ಕಾರಕ್ಕೆ ನನ್ನ ಸ್ಪಷ್ಟವಾದ ಒತ್ತಾಯವಾಗಿದೆ. ಈಗ ಸರ್ಕಾರ ಇದಕ್ಕೆ ವಾದ ಮಾಡುತ್ತಾ ಇರತಕ್ಕಂಥಾದ್ದು ಏನು ಎಂದರೆ, ಗ್ರಾಮಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗೆ ಅವರಿಗೆ ಜವಾಬ್ದಾರಿ ಕೊಡಬೇಕಾಗುತ್ತದೆ ಎಂದು. ನಾನು ಅವರಿಗೆ ಜವಾಬ್ದಾರಿ ಕೊಡಬಾರದು ಎಂಬ ಪ್ರಶ್ನೆಯಿಂದ ವಾದ ಮಾಡುತ್ತಿಲ್ಲ. ಅಲ್ಲಿಯೂ ಕೂಡ ಹಲವಾರು, ಲೋಪದ್ದೋಷಗಳು ಬರಲಿಕ್ಕೆ ಸಾಧ್ಯವಿದೆ; ಇಲ್ಲವೆಂದು ನಾನು ಹೇಳುತ್ತಿಲ್ಲ. ಹಲವಾರು ಸಂದರ್ಭಗಳಲ್ಲಿ ನಾವು ಹಳ್ಳಿಗಳಿಗೆ ಹೋದಾಗ ಕೇಳುತ್ತಿದ್ದೇವೆ, ಗ್ರಾಮಪಂಚಾಯತಿಯಲ್ಲಿ ಸದಸ್ಯರು ಈ ರೀತಿ ಮಾಡಿದರು, ಆ ರೀತಿ ಮಾಡಿದರು, ನಮಗೆ ಈ ರೀತಿ ತೊಂದರೆಯಾಗಿದೆ ಎಂದು. ಆದ್ದರಿಂದ ಇದಕ್ಕೆ ಸರ್ಕಾರ ಒಂದು ತಾಲ್ಲೂಕುಮಟ್ಟದಲ್ಲಿ ನಿವೇಶನಗಳನ್ನು ಮತ್ತು ಮನೆಗಳನ್ನು ಹಂಚತಕ್ಕಂಥ ಕೆಲಸವನ್ನು ಒಂದು ಪ್ರತ್ಯೇಕವಾದಂಥ ಸಮಿತಿಗೆ ವಹಿಸಬೇಕು. ಅದಕ್ಕೆ ಶಾಸಕರ ನೇತೃತ್ವದ ಸಮಿತಿಗಳು ಆಗಬೇಕೆಂದು ನಾನು ಸ್ಪಷ್ಟವಾಗಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ಈ ನಿವೇಶನಗ ಪ್ರಶ್ನೆ ಕೂಡ ಬಹಳ ಗಂಭೀರವಾದಂಥಾದ್ದು. ಈ ನಿವೇಶನಗಳ ಭೂಮಿ ಇಲ್ಲ. ನಿವೇಶನ ಹಂಚಲಿಕ್ಕೆ ಮತ್ತೆ ಯಾವುದೇ ರೀತಿಯಾದಂಥ ಸರ್ಕಾರಕ್ಕೆ ಉಚಿತವಾಗಿ ಸಿಕ್ಕತಕ್ಕಂಥ ಭೂಮಿ ಇಲ್ಲ, ಜಾಗ ಇಲ್ಲ. ಸರ್ಕಾರ ಅನಿವಾರ್ಯವಾಗಿ ಹಲವಾರು ಸಂದರ್ಭಗಳಲ್ಲಿ ಭೂಮಿಯನ್ನು ಖರೀದಿ ಮಾಡಲೇಬೇಕಾಗತ್ತದೆ. ಹೀಗೆ ಖರೀದಿ ಮಾಡಿ ಆ ಭೂಮಿಯನ್ನು ಖರೀದಿ ನಿವೇಶನಗಳನ್ನಾಗಿ ಮಾಡಿ ನೋಡಿದ್ದೇವೆ. ಸರ್ಕಾರ ಕಾನೂನು ಬದ್ಧವಾಗಿ ಭೂಮಿಯನ್ನು ಅಕ್ವೈರ್ ಮಾಡತಕ್ಕಂಥಾದ್ದು, ನೊಟಿಫಿಕೇಶನ್ ಮಾಡತಕ್ಕಂಥಾದ್ದು, ಅವರಿಗೆ ನೋಟೀಸ್ ಕೊಟ್ಟಾಗ ಅವರು ಕೋರ್ಟಿಗೆ ಹೋಗತಕ್ಕಂಥಾದ್ದು. ಇಂತಹ ಕೇಸುಗಳು ವರ್ಷಾನುಗಟ್ಟಲೆ ಕೋರ್ಟಿನಲ್ಲಿ ಪೆಂಡಿಂಗ್

ಇರತಕ್ಕಂಥಾದ್ದು ಮತ್ತು ಕಡೆಗೆ ಬಡವರಿಗೆ ನಿವೇಶನ ಸಿಗದೇ ಇರುವ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಆದರೆ, ಆಶ್ರಯ ಯೋಜನೆಯ ಅಡಿಯಲ್ಲಿ ಯಾವರೀತಿ ನೇರವಾಗಿ ಸರ್ಕಾರವೇ ಭೂಮಿಯ್ನು ಕೊಂಡುಕೊಂಡು ಬಡವರಿಗೆ ನಿವೇಶನಗಳನ್ನು ಹಂಚತಕ್ಕಂಥ ಕೆಲಸ ಏನಿದೆ, ಅದನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನುವಂಥಾದ್ದು. ಮತ್ತೆ ಹಿಂದಿನ ಯೋಜನೆಯಲ್ಲಿ ಒಂದು ಏಕರೆಗೆ 25 ಸಾವಿರ ರೂಪಾಯಿಗಳಷ್ಟು ಹಣವನ್ನು ನಿವೇಶನ ಕೊಂಡುಕೊಳ್ಳುವುದಕ್ಕೆ ಸರ್ಕಾರ ನಿಯೋಜನೆ ಮಾಡಿತ್ತು. ಆದರೆ ಈಗ ಮಾರ್ಕೆಟ್ ವ್ಯಾಲ್ಯು ಬೇರೆ ಬೇರೆ ರೀತಿಯಲ್ಲಿ, ಬೇರೆಬೇರೆ ಕಡೆಗಳಲ್ಲಿ ಏರುಪೇರು ಆಗುತ್ತಿದೆ, ಹೆಚ್ಚಾಗುತ್ತಿದೆ. ಆದ್ದರಿಂದ 25 ಸಾವಿರ ರೂಪಾಯಿಗಳಿಗೆ ಒಂದು ಏಕರೆ ಭೂಮಿಯನ್ನು ತೆಗೆದುಕೊಳ್ಳುವುದು ಕಷ್ಟದ ಪರಿಸ್ಥಿತಿ ಇದೆ. ಆದ್ದರಿಂದ ಅದರ ದರವನ್ನು ಕೂಡ ಸರ್ಕಾರ ಹೆಚ್ಚುಮಾಡಬೇಕಾಗುತ್ತದೆ. ಇದನ್ನು ಮಾಡದೇಹೋದರೆ ನಿವೇಶನಗಳನ್ನು ಪಡೆಯುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಮತ್ತೆ ಈ ಮನೆಗಳಿಗೆ ಇವತ್ತು ಹಿಂದಿನ ಆಶ್ರಯ ಯೋಜನೆಯಲ್ಲಿ ಕೊಡತಕ್ಕಂಥ ರೇಟನ್ನೇ ಈಗಲೂ ಕೂಡ ಸರ್ಕಾರ ನಿಗದಿ ಮಡಿದೆ. ಅವರು ಕೊಟ್ಟಿರುವ ವರದಿಯ ಪ್ರಕಾರ ಪಟ್ಟಣದ ಜನತೆಗೆ 16 ಸಾವಿರ ರೂಪಾಯಿಗಳು ಮತ್ತು ಹಳ್ಳಿಗಳಲ್ಲಿ ಇರತಕ್ಕಂಥವರಿಗೆ ಒಂದು ರೇಟು ಎಂದು ನಿಗದಿ ಮಾಡಿದೆ. ಈಗ ಆ ದರದಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಇವತ್ತು ಏನಾಗಿದೆ ಎಂದರೆ, ಆ ದರಕ್ಕೆ ಮನೆಗಳನ್ನು ಕಟ್ಟಲ್ಲಿಕ್ಕೆ ಬೇಕಾದಂಥ ಎಲ್ಲ ಸಾಮಗ್ರಿಗಳ ಬೆಲೆ ಕೂಡ ಜಾಸ್ತಿಯಾಗಿರುವ ಕಾರಣಕ್ಕೋಸ್ಕರ, ಒಂದು ಸ್ವಚ್ಛವಾದಂಥ, ಭದ್ರವಾದಂಥ ನಾಜುಕಾದಂಥ ಮನೆಗಳನ್ನು ಕಟ್ಟಲಿಕ್ಕೆ ಖಂಡಿತ ಸಾಧ್ಯವಿಲ್ಲ. ಈಗ ಮನೆಗಳಿಗೆ ಏನು ಕೊಡುತ್ತಿದ್ದೀರಿ, ಹಳ್ಳಿಗಾಡಿನಲ್ಲಿ ಕೊಡುತ್ತಾ ಇರತಕ್ಕಂಥಾದ್ದು 14 ಸಾವಿರ ರೂಪಾಯಿ ಏನಿದೆ, ಅದು ಹೆಚ್ಚು ಆಗಬೇಕು. ಕನಿಷ್ಟ ಎಂದರೂ, ನಾವು ಆಂಧ್ರದ್ದು ಉದಾಹರಣೆ ತೆಗೆದುಕೊಳ್ಳಬಹುದು. ಆಂಧ್ರದಲ್ಲಿ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಆ ಮನೆಗಳನ್ನು ನಾವು ನೋಡಿದರೆ, ನಿಜವಾಗಿಯೂ ಕೂಡ ಬಹಳ ಒಳ್ಳೆಯ ಗುಣಮಟ್ಟದ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಅವರು ಒಂದು ಮನೆಗೆ 30 ಸಾವಿರ ರೂಪಾಯಿಗಳೆಂದು ನಿಗದಿಮಾಡಿದ್ದಾರೆ. ಹೀಗೆ 30 ಸಾವಿರ ರೂಪಾಯಿಗಳನ್ನು ನಿಗದಿಮಾಡಿ ಮನೆಗಳನ್ನು ಕಟ್ಟತಕ್ಕಂಥ ಯೋಜನೆಯನ್ನು ಆಂಧ್ರಪ್ರದೇಶ ಸರ್ಕಾರದವರು ಜಾರಿಗೆ ತಂದಿದ್ದಾರೆ. ಆದೇ ರೀತಿಯಲ್ಲಿ ನಮ್ಮ ಕರ್ನಾಟಕದಲ್ಲಿಯೂ ಕೂಡ ಈಗ ಇರತಕ್ಕಂಥ ಹಣವನ್ನು ಎರಡರಷ್ಟು ಹೆಚ್ಚು ಮಾಡಿದರೆ ಒಳ್ಳೆಯ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದೇಹೋದರೆ ಮನೆಯನ್ನು ಇದೇ ರೇಟಿಗೆ ಅಂದರೆ 14 ಸಾವಿರ ರೂಪಾಯಿ ಹಳ್ಳಿಗಾಡಿನ ಪ್ರದೇಶದಲ್ಲಿ ಮತ್ತು 16 ಸಾವಿರ ರೂಪಾಯಿ ಪಟ್ಟಣ ಪ್ರದೇಶದಲ್ಲಿ ಎಂದು ಮಾಡಿದರೆ, ನಾವು ಮನೆಗಳನ್ನು ಕಟ್ಟಲಿಕ್ಕೆ ಈ ಪ್ರಕಾರ ಯೋಜನೆ ಹಾಕಿದರೆ ಒಳ್ಳೆಯ ಗುಣಮಟ್ಟದ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯತೆ ಇಲ್ಲ.

ಹಿಂದೆ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಸಿರುವುದನ್ನೂ ನಾವು ನೋಡಿದ್ದೇವೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಕಡೆ ಆಶ್ರಯ ಯೋಜನೆಯ ಮನೆಯನ್ನು ಕಟ್ಟಿದ್ದಾರೆ. ಅದರಲ್ಲಿ ಬೇರೆ ಬೇರೆ ರೀತಿಯಾದ ಮನೆಗಳನ್ನೂ ಕಟ್ಟಿದ್ದಾರೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಾದ ಮನೆಗಳನ್ನು ಕಟ್ಟಿದ್ದಾರೆ. ಕೆಲವು ಕಡೆ ಆರ್.ಸಿ.ಸಿ. ಹಾಕುತ್ತಾರೆ,

ಕೆಲವು ಕಡೆ ಕಲ್ಲುಚಪ್ಪಡಿ ಕ್ಲ್ಯಾಪ್ಸ ಹಾಕುತ್ತಾರ, ಕೋಸ್ಟಲ್ ಏರಿಯಾದಲ್ಲೆಲ್ಲಾ ಹೆಂಚುಹಾಕುತ್ತಾರೆ. ಈ ಹಿಂದೆ 9 ಅಂಗುಲ ಗೋಡೆ ಎಂದು ನಿಗದಿ ಮಾಡಿದ್ದಾರೆ. ಆ 9 ಅಂಗುಲ ಗೋಡೆಯ ಮೇಲೆ, ನೀವು ಆರೂವರೆ ಇಂಚು ಆರ್.ಸಿ.ಸಿ. ಹಾಕಿದರೆ, ಆ ಗೋಡೆಗೆ ಅದನ್ನು ತಡೆಯುವುದಕ್ಕೆ ಶಕ್ತಿ ಇಲ್ಲ. ಹಾಗಾಗಿ ಹಲವಾರು ಸಂದರ್ಭದಲ್ಲಿ, ಗೋಡೆ ಕುಸಿದು ಹೋಗತಕ್ಕಂಥ ಸಂದರ್ಭ ಇದೆ. ನಾನು ಒಂದು ಸ್ಪಷ್ಟ ಉದಾಹರಣೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿ ಆರಸಿಸಿ ಹಾಕಿ ಒಂದು ಮನೆಯನ್ನು ಕಟ್ಟಿದ್ದಾರೆ. ಅದರ ಪಕ್ಕದಲ್ಲಿ ಯಾರೋ ಒಂದು ಎಮ್ಮೆಯನ್ನು ಕಟ್ಟಿಹಾಕಿದ್ದಾರು. ಆ ಎಮ್ಮೆ ಹೋಗಿ, ಆ ಗೋಡೆಗೆ ತನ್ನ ಮೈಯನ್ನು ಉಜ್ಜಿದ ತಕ್ಷಣ ಆ ಮನೆ ಉರುಳಿ ಬಿದ್ದುಹೋಗಿರುತ್ತದೆ. ಆದ್ದರಿಂದ ಈ ರೀತಿಯ ಹಲವಾರು ಘಟನೆಗಳು ನಡೆದಿವೆ. ಸರ್ಕಾರಕ್ಕೆ ನಿಜವಾಗಿಯೂ, ಪ್ರಾಮಾಣಿಕವಾಗಿ, ಒಳ್ಳೆಯ ರೀತಿಯಲ್ಲಿ ಬಡವರಿಗೆ ಮನೆಗಳನ್ನು ನಿರ್ಮಿಸಿಕೊಡಬೇಕೆನ್ನುವ ಯೋಚನೆ ಮತ್ತು ಆ ಬದ್ಧತೆ ಇದ್ದರೆ, ಈ ಮನೆಗಳ ಗುಣಮಟ್ಟ ಹೆಚ್ಚಾಗಬೇಕು. ಗುಣಮಟ್ಟ ಹೆಚ್ಚಾಗತಕ್ಕ ರೀತಿಯಲ್ಲಿ ಅದಕ್ಕೆ ಬೇಕಾಗಿರತಕ್ಕ ಬೆಲೆಯನ್ನೂ ಹೆಚ್ಚು ಮಾಡಿ, ಒಳ್ಳೆಯ ಮನೆಗಳನ್ನು ಕಟ್ಟಿಕೊಡಬೇಕು. ಇದರ ಜೊತೆಗೆ, ಬಡವರಿಗೆ ಮನೆ ಕಟ್ಟಿಕೊಡತಕ್ಕ ಸಂದರ್ಭದಲ್ಲಿ ನಾನು ಹಿಂದೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿದ್ದೆ. ಇವತ್ತು ಹಳ್ಳಿಗಾಡಿನ ಹೆಣ್ಣುಮಕ್ಕಳಿಗೆ ಶೌಚಾಲಯ ವ್ಯವಸ್ಥೆ ಇಲ್ಲ, ಅವರು ಬಯಲಿಗೆ ಹೋಗಬೇಕು. ನೀವು ಹೇಗೂ ಬಡವರಿಗೆ ಮನೆ ಕಟ್ಟಿಸಿಕೊಡತಕ್ಕ ವಸತಿ ಯೋಜನೆಯನ್ನುನ ಹಾಕಿದ್ದೀರಿ. ಈಗ ಇರತಕ್ಕ ಮನೆ ಜೊತೆಗೆ, ಆ ಮನೆಗೆ ಹೊಂದಿಕೊಂಡಂತೆ, ಅಟ್ಯಾಚ್ಡ ಆಗಿ, ಒಂದು ಶೌಚಾಲಯ ಮತ್ತು ಸ್ನಾನದ ಮನೆ ಇರತಕ್ಕ ರೀತಿಯಲ್ಲಿ, ಮನೆಯನ್ನು ನಿರ್ಮಾಣ ಮಾಡಿಕೊಟ್ಟರೆ, ಕನಿಷ್ಟ ಸ್ವಲ್ಪಮಟ್ಟಿಗಾದರೂ, ಹಳ್ಳಿಗಾಡಿನಲ್ಲಿರತಕ್ಕ ಮಹಿಳೆಯರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆಯಲ್ಲಿ ಸರ್ಕಾರ ಇದನ್ನು ಪರಿಗಣಿಸಬೇಕು ಮತ್ತು ತೀರ್ಮಾನ ತೆಗೆದುಕೊಳ್ಳಬೇಕು. ಬರೀ 20 ಅಡಿ ಉದ್ದ, 18 ಅಡಿ ಅಗಲ ಇರತಕ್ಕ ಮನೆ ಮಾತ್ರ ಕಟ್ಟಿಸಿದ್ದರೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ಕನಿಷ್ಟವಾಗಿ ಬೇಕಾಗಿರತಕ್ಕ ಸವಲತ್ತು, ಒಂದು ಸ್ನಾನದ ಮನೆ ಮತ್ತು ಒಂದು ಶೌಚಾಲಯವನ್ನು, ಆ ಮನೆಯ ಒಂದು ಭಾಗವಾಗಿ ಕಟ್ಟಿಸಿಕೊಡಬೇಕು. ಇದಕ್ಕೆ, ಈಗಿರತಕ್ಕ ನಿವೇಶನವದ ಅಳತೆ ಏನಿದೆ, ಆ ಅಳತೆಯನ್ನೂ ಹೆಚ್ಚುಮಾಡಬೇಕಾಗುತ್ತದೆ. ಈಗಿರುವುದರಲ್ಲಿ 18 ಮತ್ತು 20 ಎಂದು ಇದೆ. ಇದರ ಬದಲಿಗೆ ಉದ್ದ ಮತ್ತು ಅಗಲದಲ್ಲಿ ಇನ್ನೊಂದು 10 ಅಡಿ ಹೆಚ್ಚು ಮಾಡಿ, ಇದರಲ್ಲಿಯೇ ಒಂದು ಬಾತ್ ರೂಮ್ ಮತ್ತು ಶೌಚಾಲಯ ಕಟ್ಟಿಸಿಕೊಡತಕ್ಕಂತಾದ್ದು, ಆರೋಗ್ಯದ ದೃಷ್ಟಿಯಿಂದ, ನೈರ್ಮಲ್ಯದ ದೃಷ್ಟಿಯಿಂದ ಮತ್ತು ಬಡ ಜನತೆಗೆ ಅನುಕೂಲವಾಗತಕ್ಕ ದೃಷ್ಟಿಯಲ್ಲಿ ಅದು ಬಹಳ ಉಪಯುಕ್ತವಾಗುತ್ತದೆ. ಆ ದೃಷ್ಟಿಯಲ್ಲಿ ಮನೆಗಳನ್ನು ಕಟ್ಟಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇಲ್ಲದೇ ಹೋದರೆ, ಏನೋ ಕಾಟಾಚಾರಕ್ಕೆ ಒಂದು ಯೋಜನೆಯನ್ನು ತರುತ್ತಿದ್ದೇವೆ, ಆ ಯೋಜನೆಯನ್ನು ಜಾರಿಮಾಡಬೇಕೆಂಬ ದೃಷ್ಟಿಯಲ್ಲಿ, ಅದು ಜಾರಿಯಾಗುವುದು ಬೇಡ. ಅದಕ್ಕೆ ಸಮಗ್ರವಾದ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆಯಾಗಬೇಕೆಂದು ಹೇಳತಕ್ಕಂತಾದ್ದು ನನ್ನ ಅಭಿಪ್ರಾಯ. ನಾನು ನಿವೇಶನ ದೊಡ್ಡದು ಮಾಡಬೇಕೆಂದು ಹೇಳಿದ್ದೇನೆ. ಈಗಿರತಕ್ಕ ನಿವೇಶನಕ್ಕೆ ಇನ್ನೊಂದು 10 ಅಡಿ ಜಾಸ್ತಿ ಮಾಡಿ, ಹಿಂದುಗಡೆ ಅಥವಾ

ಪಕ್ಕದಲ್ಲಿ ಆ ನಿವೇಶನದಲ್ಲಿಯೇ ಈ ರೀತಿಯ ವ್ಯವಸ್ಥೆ ಮಾಡಿದರೆ ಸರಿಹೋಗುತ್ತದೆ ಆ ರೀತಿ ಮನೆ ಕಟ್ಟಬೇಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರೆಡ್ಡಿಯವರು ಹೇಳುತ್ತಿದ್ದಾರೆ. ಇಲ್ಲಿ ಗೃಹನಿರ್ಮಾಣಕ್ಕೆ ಸಂಬಂಧಪಟ್ಟವರು ಯಾರೂ ಇಲ್ಲವೆಂದು ಕಾಣುತ್ತದೆ. ಅವರೇನು ಮನೆ ಕಟ್ಟುವುದಕ್ಕೆ ಹೋಗಿದ್ದಾರೆಯೋ?....

ಶ್ರೀ ಸಿದ್ಧರಾಮಯ್ಯ : ವಸತಿ ಸಚಿವರು ಕೌನ್ಸಿಲಗೆ ಹೋಗಿದ್ದಾರೆ.....

ಶ್ರೀ ಎಸ್. ಬಂಗಾರಪ್ಪ : ಒಂದು ವಿಚಾರ ಹೇಳುತ್ತಿದ್ದೇನೆ. ಯಾರಾದರೂ ಜವಾಬ್ದಾರಿಯಿಂದ ಇದರ ಬಗ್ಗೆ ನೋಡುತ್ತಿದ್ದೇವೆಂದು ಹೇಳಿದರೆ ಸಾಕು. ಈ ಮನೆಯ ಜವಾಬ್ದಾರಿಯನ್ನು ಯಾರು ವಹಿಸಿಕೊಂಡಿದ್ದೀರಿ. ಮಾನ್ಯ ರಾಯರೆಡ್ಡಿಯವರು ಇಲ್ಲದೇ ಇರಬೇಕಾದರೆ, ಮಾನ್ಯ ದೇಶಪಾಂಡೆಯವರು ವಹಿಸಿಕೊಂಡಿದ್ದಾರೆಯೇ? ಏಕೆಂದರ, ಈಗ ನಿಮ್ಮನ್ನೇ ಹಿಡಿದು ಕೊಳ್ಳಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರೆಡ್ಡಿಯವರು ಒಂದು ಒಳ್ಳೆಯ ವಿಷಯವನ್ನು ಹೇಳಿದ್ದಾರೆ. ನಾನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುವಂಥಾದ್ದು ಏನೆಂದರೆ, ಈ ನಿವೇಶನ ಕೊಡುವ ವಿಷಯ, ಮಾನ್ಯ ದೇವರಾಜ ಅರಸರ ಕಾಲದಲ್ಲಿಯೇ, ಹಳೆಯ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಇದ್ದಾಗಲೇ 20 ಅಡಿ ಅಗಲ 30 ಅಡಿ ಉದ್ದ ಎಂದು ಮಾಡಿದರು. ನಾನು ಗ್ರಾಮೀಣ ಪ್ರದೇಶಗಳ ಬಗ್ಗೆ ಹೇಳುತ್ತಿದ್ದೇನೆ. ಅವರು, ಗ್ರಾಮೀಣ ಪ್ರದೇಶದ ಬಡವರಿಗೆ, ಉಚಿತವಾಗಿ ಕೊಡಬೇಕೆಂದು, ಒಂದು ದೊಡ್ಡ ಯೋಜನೆಯನ್ನು ಮಾಡಿದರು. ತಮಗೆಲ್ಲರಿಗೂ ಗೊತ್ತಿರುವಹಾಗೆ ಇದರ ಬಗ್ಗೆ ನಾನು ಏನಾದರೂ ಹೇಳಿದರೆ, ನಮ್ಮ ಕಾಲದಲ್ಲೇ ಮಾಡಿದೆವು ಎಂದು ಬರುತ್ತದೆಂದು, ನಾನು ಹೇಳಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆಶ್ರಯ ಕಾರ್ಯಕ್ರಮದ ಅಡಿಯಲ್ಲಿ, ಈ ನಿವೇಶನದ ಉದ್ದ ಮತ್ತು ಅಗಲವನ್ನು ನಾವು ಜಾಸ್ತಿ ಮಾಡಿದೆವು. ನಮ್ಮ ಕಾಲದಲ್ಲಿ 30 ಅಡಿ ಅಗಲ, 40 ಅಡಿ ಉದ್ದದ ನಿವೇಶನ ಮಾಡಿ, ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೆವು. ತಾಲ್ಲೂಕುಮಟ್ಟಕ್ಕೆ ನಾವು ಏನು ಸಮಿತಿ ನೇಮಕ ಮಾಡಿದ್ದೇವೆ, ನಿವೇಶನ ಕೊಡತಕ್ಕ ಕಾಲದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ 30x40 ಅಡಿ ನಿವೇಶನ ಕೊಡಬೇಕೆಂದು ಮಾಡಿದೆವು. ಇದು ನಗರ ಪ್ರದೇಶಕ್ಕೆ ಅಲ್ಲ. ಏಕೆಂದರೆ, ನಗರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ನಿವೇಶನಗಳಿಗೆ ತುಂಬಾ ಬೆಲೆಯಾಗುತ್ತದೆ. ಈ ರೀತಿ ಕೊಡುವುದು ಬಹಳ ಕಷ್ಟವಾಗುತ್ತದೆ.

ನಾವು ಯಾವ ಉದ್ದೇಶಕ್ಕಾಗಿ ಮಾಡಿದೆವು ಎಂದರೆ, ಮಾನ್ಯ ರೆಡ್ಡಿಯವರು ಒಳ್ಳೆಯ ಸದುದ್ದೇಶದಿಂದ ಹೇಳುತ್ತಿದ್ದಾರೆ. ಮನೆಯಲ್ಲಿ ಒಂದು ಶೌಚಾಲಯ ಕಟ್ಟಿಸುವುದಕ್ಕೆ ಆ ಯೋಜನೆಯಲ್ಲಿಯೇ ಸೇರಿಸಿಬಿಡಿ. ಇಲ್ಲದೇಹೋದರೆ, ಬಡವರಿಗೆ, ಹೆಣ್ಣುಮಕ್ಕಳು, ಮತ್ತೊಬ್ಬರು, ಮಕ್ಕಳು ಬಹಿರ್ದೆಶೆಗೆ ಹೋಗಬೇಕಾದರೆ, ಎಲ್ಲಿಗೆ ಹೋಗಬೇಕು ಎನ್ನತಕ್ಕ ಪ್ರಶ್ನೆ ಬರುತ್ತದೆ. ಈ ದೃಷ್ಟಿಯಿಂದಲೇ ನಾವು ಇದನ್ನು ಯೋಚನೆ ಮಾಡಿ, 30X40 ಎಂದು ಮಾಡಿದೆವು. ಈ ಶೌಚಾಲಯಗಳನ್ನು ಮನೆ ಒಳಗಡೆ ಇಡುವುದು ಬೇಡ. ಏಕೆಂದರೆ, ಬಹಳ ಜನರು ಪಟ್ಟಣಗಳಲ್ಲಿಯೇ ತಪ್ಪು ಮಾಡುತ್ತಾರೆ. ನಂಬರ್ 2ಗೆ ಹೋಗುತ್ತಾರೆ, ನೀರನ್ನೇ ಹಾಕುವುದಿಲ್ಲ, ಅಲ್ಲಿ ವಾಸನೆ ಬಂದುಬಿಡುತ್ತದೆ. ಅದಕ್ಕೆ, ಮನೆ ಬಿಟ್ಟು

ಹಿಂದುಗಡೆ ಶೌಚಾಲಯ ಇರಬೇಕು. ಈ ಶೌಚಾಲಯ ಮಾತ್ರ ಮನೆ ಬಿಟ್ಟು ದೂರ ಇದ್ದರೆ, ನೀರು ಹಾಕುವುದು ಸ್ವಲ್ಪ ತಡವಾದರೂ ಕೂಡ, ವಾಸ ಮಾಡತಕ್ಕ ಮನೆಗಳಿಗೆ ಧಕ್ಕೆ ಬರುವುದಿಲ್ಲ. ನಾವು ಇದಕ್ಕೆ ನೀರಿನ ವ್ಯವಸ್ಥೆಯನ್ನೂ ಮಾಡಬೇಕು. ಅದಕ್ಕಾಗಿ ನಮ್ಮ ಕಾಲದಲ್ಲಿ ತೀರ್ಮಾನ ಮಾಡಿ, 30X40 ಅಡಿ ಉದ್ದದ ನಿವೇಶನದಲ್ಲಿ, ಹಿಂದುಗಡೆ, ಅಂದರೆ ಒಂದುಕಡೆ ಮೂಲೆಯಲ್ಲಿ ಶೌಚಾಲಯ ಇರಬೇಕು. ಏಕೆಂದರೆ, ಹಳ್ಳಿಗಳಲ್ಲಿ ಜನರು ಹೋಗಿ ಬರುತ್ತಾರೆ. ರಾತ್ರಿಯಾದರೆ, ನಂ. 2ಗೊ ಕಣ್ಣುಮುಚ್ಚಿಕೊಂಡು ಹೋಗಿಬರುವುದಿಲ್ಲವೇ? ಅವರು ನಿವೇಶನದ ಒಳಗಡೆಯೇ ಇರತಕ್ಕ, ಅದರ ವ್ಯಾಪ್ತಿಯಲ್ಲೇ ಇರತಕ್ಕ ಶೌಚಾಲಯಗಳಿಗೆ ಹೋಗಿಬಿಡುತ್ತಾರೆ. ಇದನ್ನು ಯೋಚನೆ ಮಾಡಿ, ವಿಚಾರ ಮಾಡಿಯೇ ನಾವು ತೀರ್ಮಾನ ಮಾಡಿದ್ದೆವು. ಈಗ 20 ಸಾವಿರ ರೂಪಾಯಿಗಳನ್ನು ಮಾಡಿದ್ದಾರೆ. ಏಕೆಂದರೆ, ಮೆಟೀರಿಯಲ್ ಕಾಸ್ಟ, ಎಲ್ಲವೂ ಜಾಸ್ತಿಯಾಗುತ್ತದೆ, ಅದಕ್ಕಾಗಿ ಮಾಡಿದ್ದಾರೆ. ಅದಕ್ಕಾಗಿ, ಈ ಶೌಚಾಲಯಗಳನ್ನು ಮನೆಯೊಳಗೆ ಬೇಡ, ಏಕೆಂದರೆ, ಹಳ್ಳಿಯಲ್ಲಿ ಆ ಎಜುಕೇಷನ್ ಮತ್ತೊಂದು ಬರಬೇಕು, ನೀರಿನ ವ್ಯವಸ್ಥೆ ಇರಬೇಕು. ಪಟ್ಟಣಗಳಲ್ಲಾದರೆ, ನಾವು ನಲ್ಲಿ ತಿರುಗಿಸಿಬಿಡುತ್ತೇವೆ. ಹಳ್ಳಿಯಲ್ಲಿ, ಮನೆ ಮನೆಗೆ ಎಲ್ಲಿ ನಲ್ಲಿ ಇರುತ್ತವೆ. ಆ ದೃಷ್ಟಿಯಿಂದ ಸರ್ಕಾರ ವಿಚಾರ ಮಾಡಬೇಕಾದರೆ, ಯೋಜನೆ ಮಾಡಬೇಕಾದರೆ, 30X40 ನಿವೇಶನ ಇಟ್ಟರೆ ಮಾತ್ರ, ಪ್ರತ್ಯೇಕವಾದ ಶೌಚಾಲಯ ಮತ್ತು ಸ್ನಾನದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸಾಧ್ಯ. ಇಲ್ಲದೇಹೋದರೆ, ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಈಗ ನೀವೇನಾದರೂ ಅಳತೆಯನ್ನು ಬದಲಾವಣೆ ಮಾಡಿದ್ದೀರೋ ಏನೋ ನನಗೆ ಗೊತ್ತಿಲ್ಲ. ನೀವು ಅಧಿಕಾರಕ್ಕೆ ಬಂದಮೇಲೆ, 30X40 ಅಡಿ ಇದೆಯೆಂದೇ ನನ್ನ ಭಾವನೆ. ಇದು ಗ್ರಾಮೀಣ ಪ್ರದೇಶಕ್ಕೆ ಇರಬೇಕು. ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಇದು ದಾಖಲೆಯಲ್ಲಿದೆ, ಸರ್ಕಾರದ ಆದೇಶದ ಮುಖಾಂತರ ಇದನ್ನು ಮಾಡಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಹೇಳಿದಂತೆ, ಈ ನಿವೇಶನದ ಅಳತೆಯನ್ನು ಹೆಚ್ಚು ಮಾಡಬೇಕೆಂದು ನಾನೂ ಕೂಡ ಹೇಳಿದೆ. ಹಾಲಿ ಇರತಕ್ಕಂಥಾದ್ದಕ್ಕೆ, 10 ಅಡಿ ಜಾಸ್ತಿ ಮಾಡಬೇಕೆಂದು ಹೇಳಿದೆ. ಅವರು 30X40 ಅಡಿ ಎಂದು ಏನು ಸ್ಪಷ್ಟವಾಗಿ ಹೇಳಿದ್ದಾರೆ, ಅದನ್ನು ನಾನೂ ಕೂಡ ಒಪ್ಪುತ್ತೇನೆ. ಆ ರೀತಿಯಲ್ಲಿ ಮನೆಯನ್ನು ರೂಪಿಸಬೇಕು, ಕಟ್ಟಬೇಕೆಂದು ಹೇಳತಕ್ಕಂಥಾದ್ದು ನನ್ನ ಅಭಿಪ್ರಾಯ.

ಶ್ರೀ ಡಿ. ನಾರಾಯಣದಾಸ್ : ಹಿಂದೆ, ದೇವರಾಜ ಅರಸರು ಇದ್ದಾಗ, ಈ ಆಶ್ರಯ ಯೋಜನೆಯಲ್ಲಿ 30X40 ನಿವೇಶನವನ್ನೇ ಕೊಡುತ್ತಿದ್ದರು. ಆದರೆ, ಈಗ ಬಹಳ ಸಣ್ಣದು ಮಾಡಿದ್ದಾರೆ. ಹಿಂದೆ, 30X40ರ ನಿವೇಶನವನ್ನೇ ಕೊಟ್ಟಿದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ 20X30 ಎಂದು ಇದ್ದು, ಮನೆಯ ಮುಂದೆ ಜಾಗಬಿಟ್ಟು, ಮನೆಯ ವಿನ್ಯಾಸ ಬರುವುದು 18X20 ಅಡಿಯಲ್ಲಿ ಮಾತ್ರ. ನಾನು ಸ್ಪಷ್ಟವಾಗಿ ಹೇಳುವುದು, ನಿವೇಶನ 30X40 ಅಡಿ ಇರಬೇಕು. ಮನೆಯ ಪಕ್ಕದಲ್ಲಿ ಅಥವಾ ಹಿಂದುಗಡೆ ಶೌಚಾಲಯ, ಮತ್ತು ಬಾತ್

ನನ್ನ ಒತ್ತಾಯ. ಮತ್ತು ಈ ಮನೆಗಳನ್ನು ಕಟ್ಟುವುದಕ್ಕೆ ಹಿಂದೆ ಆಶ್ರಯ ಯೋಜನೆಯಡಿಯಲ್ಲಿ, ಗೃಹನಿರ್ಮಾಣ ಮಂಡಳಿಯವರಿಗೆ ಮತ್ತು ಭೂ ಸೇನಾ ನಿಗಮದವರಿಗೆ ಕೊಡುತ್ತಿದ್ದರು. ನಾನು ಖಂಡಿತವಾಗಿಯೂ ಸರ್ಕಾರಕ್ಕೆ ಹೇಳುತ್ತಿದ್ದೇನೆ. ದಯಮಾಡಿ, ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ಕೊಡಬೇಡಿ. ಫಲಾನುಭವಿಗಳಲ್ಲಿ ಯಾರು ಕಟ್ಟಿಕೊಳ್ಳುತ್ತಾರೋ, ಅವರಿಗಾದರೂ ಕೊಡಿ. ಇಲ್ಲದಿದ್ದರೆ, ಲೋಕಲನಲ್ಲಿರತಕ್ಕ ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೆ ಆಗವುದಿಲ್ಲವೆಂದು ಹೇಳಿದರೆ, ಡಿಪಾರ್ಟಮೆಂಟ್ ಮುಖಾಂತರ ಇದನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಏಕೆಂದರೆ ಹಿಂದಿನ ಅನುಭವದಲ್ಲಿ ಹೇಳುವುದಾದರೆ, ಕರ್ನಾಟಕ ಗೃಹ ಮಂಡಳಿಯವರು ಇವತ್ತಿಗೂ ಕಟ್ಟಿಲ್ಲ. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ವಹಿಸಿದ್ದಂತಹ ಮನೆಗಳು ಈಗಲೂ ಸಹ ಪೆಂಡಿಂಗ್ ಇವೆ. ಇನ್ನು ಲ್ಯಾಂಡ್ ಆರ್ಮಿಯವರು ಕಟ್ಟಿರತಕ್ಕಂಥ ಮನೆಗಳಲ್ಲಿ ಮನುಷ್ಯರಂತೂ ಇರಲಿಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ಯಾರೂ ಹೋಗುವುದಕ್ಕೆ ಆಗುವುದಿಲ್ಲ. ಯಾವಾಗ ಆ ಮನೆಗಳು ಬಿದ್ದು ಹೋಗುತ್ತವೆಯೋ ಎನ್ನುವಂತಹ ಭಯ ಆ ಜನರಲ್ಲಿ ಬಂದುಬಿಟ್ಟಿದೆ. ಆದ್ದರಿಂದ ಅವರು ಆ ಮನೆಗಳಿಗೆ ಹೋಗುವುದನ್ನು ಬಿಟ್ಟಿದ್ದಾರೆ. ಈ ಎರಡೂ ಏಜನ್ಸಿಗಳಿಗೆ ಮಾತ್ರ ಮನೆ ಕಟ್ಟಲಿಕ್ಕೆ ಕೊಡಬೇಡಿ. ಮಾನ್ಯ ಅಧ್ಯಕ್ಷರೇ, ಈ ವರದಿಯಲ್ಲಿ ಹೇಳಿದ್ದಾರೆ ಗ್ರಾಮೀಣ ವಸತಿ ನಿರ್ಮಾಣಕ್ಕೆ ಪ್ರತಿ ಮನೆಗೂ 15 ಸಾವಿರ ರೂಪಾಯಿಗಳಾಗಿದ್ದು ಇದರಲ್ಲಿ 10 ಸಾವಿರ ರೂಪಾಯಿಗಳು ಸಾಲ ಮತ್ತು ಇನ್ನುಳಿದ 5 ಸಾವಿರ ರೂಪಾಯಿಗಳು ಸಹಾಯಧನವಾಗಿರುತ್ತದೆ. ಇದೇ ಪ್ರಕಾರ ನಗರವಸತಿ ನಿರ್ಮಾಣಕ್ಕೆ 16 ಸಾವಿರ ರೂಪಾಯಿಗಳಾಗಿದ್ದು ಇದರಲ್ಲಿ 14 ಸಾವಿರ ರೂಪಾಯಿಗಳು ಸಾಲವಾಗಿದ್ದು ಇನ್ನುಳಿದ 5 ಸಾವಿರ ರೂಪಾಯಿಗಳು ಸಹಾಯಧನ ಎಂದು ಇದೆ. ಇದರಲ್ಲಿ ಈ ಸಾಲ ಎಂದು ನೀವು ಏನು ಕೊಡುತ್ತಿದ್ದೀರಿ, ಬಹುಶಃ ಅದು ಪ್ರಾಕ್ಟಿಕಲ್ ಆಗಿ ಆಲೋಚನೆ ಮಾಡಿದರೆ, ಆ ಸಾಲವನ್ನು ವಸೂಲಿ ಮಾಡುವುದು ಕಷ್ಟವಾಗುತ್ತದೆ. ನೀವು ಹೆಸರಿಗೆ ಸಾಲ ಎಂದು ಹೇಳಿ ಕೊಟ್ಟು ಅಂಕಿಅಂಶಗಳ ಮಟ್ಟಿಗೆ ಸರ್ಕಾರ ಇದನ್ನು ತೋರಿಸಿ, ಇಷ್ಟು ವರ್ಷಗಳಿಗೆ ನಮಗೆ ಬಾಕಿ ಇಷ್ಟು ಬರುತ್ತದೆ ಎಂದು ತೋರಿಸಿ ಒಂದು ಯೋಜನೆಯನ್ನು ಹಾಕಿದರೆ ಖಂಡಿತವಾಗಿ ಅದು ಸಾಧ್ಯವೇ ಇಲ್ಲ. ಆ ಸಾಲದ ಹಣ ವಾಪಸ್ ಬರುವುದಿಲ್ಲ. ಹಿಂದೆ ಜನತಾ ಮನೆಗಳಿಗೆ ಮತ್ತು ಗ್ರೂಪ್ ಹೌಸಸಗಳಿಗೆ ಅಂತ ಹೇಳಿ ಸಾಲವನ್ನು ಕೊಡುತ್ತಿದ್ದರು. ಬಹುಶಃ ನನಗೆ ತಿಳಿದಿರತಕ್ಕಂಥ ತಿಳುವಳಿಕೆ ಪ್ರಕಾರ ಆ ಹಣದಲ್ಲಿ 5 ಪರ್ಸೆಂಟ್ ಹಣ ಕೂಡ ವಾಪಸ್ ಬಂದಿಲ್ಲ ಮತ್ತು ಬರುವುದಿಲ್ಲ. ಸರ್ಕಾರದ ಹತ್ತಿರ ಅಂಕಿಅಂಶಗಳು ಇರುತ್ತದೆ. ನಮಗೆ ಬಾಕಿ ಬರಬೇಕು ಬಾಕಿ ಬರಬೇಕು ಎಂದು ಲೆಕ್ಕ ತೋರಿಸುವಂತಹ ಪರಿಸ್ಥಿತಿ ಆಗುತ್ತದೆ. ಕೆಲವು ಸಂದರ್ಭಗಳಲ್ಲಿ ಸ್ಥಾನಿಕವಾಗಿರತಕ್ಕಂಥ ಅಧಿಕಾರಿಗಳು ಆ ಹಣವನ್ನು ದುರುಪಯಾಗಪಡಿಸತಕ್ಕಂಥ ಸಂದರ್ಭಗಳು ಕೂಡ ಇವೆ. ಅದ್ದರಿಂದ ನೀವು ಹೇಗೂ ಮನೆ ಕೊಡುತ್ತಿದ್ದೀರಿ, ಹೇಗೂ ಸರ್ಕಾರ ಹಣ ಕೊಡುತ್ತಿದೆ. ಆದ್ದರಿಂದ ಸಾಲ ಎಂದು ಹೇಳುವುದು ಬೇಡ, ಸರ್ಕಾರ ಉಚಿತವಾಗಿ ಮನೆಗಳನ್ನು ಕಟ್ಟಿಕೊಡಬೇಕೆಂದು ನಾನು ಹೇಳುತ್ತೇನೆ. ಇದರಲ್ಲಿ ನನಗೆ ಒಂದು ಅರ್ಥವಾಗುತ್ತಿಲ್ಲ. ನಗರ ಪ್ರದೇಶಗಳಿಗೆ 16 ಸಾವಿರ ರೂಪಾಯಿಗಳು ಎಂದು ಇದ್ದು ಅದರಲ್ಲಿ 14 ಸಾವಿರ ರೂಪಾಯಿಗಳು ಸಾಲ, 5 ಸಾವಿರ ರೂಪಾಯಿಗಳು ಸಹಾಯಧನ ಎಂದು ಇದ್ದು ಅದರಲ್ಲಿ

14 ಸಾವಿರ ರೂಪಾಯಿಗಳು ಸಾಲ, 5 ಸಾವಿರ ರೂಪಾಯಿಗಳು ಸಹಾಯಧನ ಎಂದು ಇದೆ. ಅಲ್ಲಿಗೆ ಒಟ್ಟು 19 ಸಾವಿರ ರೂಪಾಯಿಗಳು ಆಗುತ್ತದೆ. ಇಲ್ಲಿ 16 ಸಾವಿರ ರೂಪಾಯಿಗಳು ಒಟ್ಟು ಹಣ ಎಂದು ಇದೆ. ಅದರಲ್ಲಿ 14 ಸಾವಿರ ರೂಪಾಯಿಗಳು ಸಾಲ, 5 ಸಾವಿರ ರೂಪಾಯಿಗಳು ಸಹಾಯ ಧನ ಎಂದು ಇದೆ. ಆದರೆ ಹಳ್ಳಿಗಾಡಿನ ಪ್ರದೇಶಗಳಿಗೆ ಇದು ಸಾಲ ಎಂದು ಇದೆ. ಇದನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗಿದೆ. ಗ್ರಾಮೀಣ ವಸತಿ ನಿರ್ಮಾಣಕ್ಕೆ ಪ್ರತಿ ಮನೆಗೆ 15 ಸಾವಿರ ರೂಪಾಯಿಗಳಾಗಿದ್ದು ಇದರಲ್ಲಿ 10 ಸಾವಿರ ರೂಪಾಯಿಗಳು ಸಾಲ, 5 ಸಾವಿರ ರೂಪಾಯಿಗಳು ಸಹಾಯಧನವಾಗಿರುತ್ತದೆ ಎಂದು ಇದೆ. ಪಟ್ಟಣ ಪ್ರದೇಶಕ್ಕೆ ಬಂದುಬಿಟ್ಟರೆ 14 ಸಾವಿರರೂಪಾಯಿಗಳ ಸಾಲ ಮತ್ತು 5 ಸಾವಿರ ರೂಪಾಯಿಗಳು ಸಹಾಯಧನ ಎಂದು ಇದೆ. ಸರ್ಕಾರ ಇದನ್ನು ಸ್ಪಷ್ಟಪಡಿಸಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ. ಇಲ್ಲಿ ಸೀರಿಯಸ್ ಆಗಿ ಚರ್ಚೆ ನಡೆಯುತ್ತಿರಬೇಕಾದರೆ ಮಾನ್ಯ ಸಚಿವರುಗಳು ಓಡಾಟ ಕಡಿಮೆ ಮಾಡಿಕೊಂಡು ಈ ಕಡೆಗೆ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದು. ತಾವು ಉತ್ತರ ಏನು ಹೇಳುತ್ತೀರಿ ಎಂದು ಈಗಾಗಲೇ ನನಗೆ ಗೊತ್ತಿದೆ. ತಾವು ಅಸೆಂಬ್ಲಿ ಶುರು ಆದ ಮೇಲೆ ಈ ರೀತಿ ಮಾತನಾಡುತ್ತಾ ಕುಳಿತುಕೊಂಡರೆ ಅವರು ಇಲ್ಲಿ ಭಾಷಣ ಏತಕ್ಕೆ ಮಾಡಬೇಕು. ಅದ್ದರಿಂದ ದಯವಿಟ್ಟು ಈ ಕಡೆ ಸ್ವಲ್ಪ ಗಮನಹರಿಸಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಸಹಾಯಧನದಲ್ಲಿ ಗ್ರಾಮೀಣ ಪ್ರದೇಶಕ್ಕೆ ಮತ್ತು ಪಟ್ಟಣ ಪ್ರದೇಶಕ್ಕೆ ಎಂದು ಏನು ಏರುಪೇರು ಇದೆ ಅದನ್ನು ಹೋಗಲಾಡಿಸಿ ಒಟ್ಟಿಗೆ ಹೆಚ್ಚು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಪಟ್ಟಣ ಪ್ರದೇಶಗಳಲ್ಲಿಯೂ ಕೂಡ ಇವತ್ತು 16 ಸಾವಿರ ರೂಪಾಯಿಗಳಿಗೆ ಖಂಡಿತವಾಗಿ ಮನೆ ಆಗುವುದಿಲ್ಲ. ಹಳ್ಳಿಯಲ್ಲಿಯೂ ಆಗುವುದಿಲ್ಲ. ಹಳ್ಳಿಗಾಡು ಪ್ರದೇಶಗಳಲ್ಲಿ ಕೂಡ 30X40 ಅಡಿ ಅಳತೆಯ ಸೈಟ್ ಕೊಟ್ಟು ಆ ಮನೆಗೆ 30 ಸಾವಿರ ರೂಪಾಯಿಗಳನ್ನು ಅದರಲ್ಲಿ ಬಾತ್ ರೂಮ್ ಮತ್ತು ಲ್ಯಾಟರೀನ್ ಸೇರಿ ಕೊಡಬೇಕು. ಪಟ್ಟಣದಲ್ಲಿ ಕಾಸ್ಟ್ ಆಫ್ ಮೆಟೀರಿಯಲ್ಸ ಇನ್ನೂ ಜಾಸ್ತಿಯಾಗುತ್ತದೆ. ಆದ್ದರಿಂದ ಪಟ್ಟಣ ಪ್ರದೇಶದಲ್ಲಿರತಕ್ಕಂಥ ಬಡವರು ಮನೆ ಕಟ್ಟಿಕೊಳ್ಳುವುದಕ್ಕೆ ಈಗ ಏನು ಹಣ ನಿಗದಿ ಮಾಡಿದ್ದೀರಿ ಆ ಹಣವನ್ನು ಕೂಡ ಹೆಚ್ಚು ಮಾಡಬೇಕು ಎಂದು ಸರ್ಕಾರದ ಮೇಲೆ ನನ್ನ ಸ್ಪಷ್ಟವಾದ ಒತ್ತಾಯ ಇದೆ.

ಅಧ್ಯಕ್ಷರು : ಮಾನ್ಯ ಹೌಸಿಂಗ್ ಮಿನಿಸ್ಟರ್ ಮೊನ್ನೆ ಒಂದು ಸ್ಟೇಟಮೆಂಟ್ ಮಾಡಿದರು. ನೀವು ಕೇಳಿಸಿಕೊಂಡಿರೋ ಇಲ್ಲವೋ ನನಗೆ ಗೊತ್ತಿಲ್ಲ. You must compliment that young man. ಈ ಸಲ ಅವರು 15 ಸಾವಿರ ರೂಪಾಯಿಗಳು ಇದ್ದದ್ದನ್ನು 20 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿ ಎಷ್ಟು ಮನೆಗಳನ್ನು ಈ ಸಲ ಕಟ್ಟುತ್ತೇವೆ ಎಂದು ಕೂಡ ಅವರು ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ. ಅಷ್ಟೊ ಮನೆಗಳಿಗೆ ಬಡ್ಜಟರಿ ಪ್ರಾವಿಜನ್ ಮಾಡಿಕೊಂಡು, ಡಿಟೇಲ್ಡ್ ಗೌರ್ನಮೆಂಟ್ ಆರ್ಡರನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಹಣವನ್ನು ಕೂಡ ವ್ಯವಸ್ಥೆ ಮಾಡುತ್ತಿದ್ದಾರೆ. ಹೋದ ವರ್ಷ ಏನಾಗಿತ್ತು ಎಂದರೆ 250 ಕೋಟಿ ರುಪಾಯಿಗಳ ಕಮಿಟ್‌ಮೆಂಟ್ ಮಾಡಿಕೊಂಡು 15 ಕೋಟಿ

ರೂಪಾಯಿಗಳ್ಳು ಮಾತ್ರ ರಿಲೀಜ್ ಮಾಡಿದ್ದಾರೆ. You should compliment the Ministers when they have done good work. ನಮ್ಮ ದೇಶದ ವ್ಯವಸ್ಥೆಯಲ್ಲಿ 30 ಸಾವಿರ ಎಲ್ಲಿ ಕೊಡುವುದಕ್ಕೆ ಆಗುತ್ತದೆ. 20 Thousand that is a big amount. You should be practical also.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಹಳ್ಳಿಗಳಲ್ಲಿ 15 ಸಾವಿರ ರೂಪಾಯಿಗಳು ಇದ್ದದ್ದನ್ನು ಈ ಸಾರಿ ನಾವು 20 ಸಾವಿರ ರೂಪಾಯಿಗಳು ಎಂದು ಮಾಡಿದ್ದೇವೆ. ಪಟ್ಟಣಪ್ರದೇಶಗಳಲ್ಲಿ ಬಡವರಿಗೆ ಕಟ್ಟಿಸಿಕೊಡತಕ್ಕಂಥ ಮನೆಗಳಿಗೆ 25 ಸಾವಿರ ರೂಪಾಯಿಗಳು ಎಂದು ಮಾಡಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇಂದಿರಾ ಅವಾಜ್ ಯೋಜನೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯವರು ಮತ್ತೆ 5 ಸಾವಿರ ರೂಪಾಯಿಗಳು ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಅದೂ ಕೇಂದ್ರ ಸರ್ಕಾರ ಪೂರ್ಣ ಹಣ ಕೊಡುವುದರಿಂದ. ಷೆಡ್ಯೂಲ್ಡ್‌ಕ್ಯಾಸ್ಟ ಆಗಿರುವಂತಹವರಿಗೆ ಕಟ್ಟಿಸಿಕೊಡುವಂತಹ ಮನೆಗಳಿಗೆ 5 ಸಾವಿರ ರೂಪಾಯಿಗಳನ್ನು ಸಮಾಜಕಲ್ಯಾಣ ಇಲಾಖೆಯವರು ಕೊಡುತ್ತಾರೆ. ಆದ್ದರಿಂದ ಅದೂ ಸಹ 20 ಸಾವಿರ ರೂಪಾಯಿಗಳಿಗೆ ಬರುತ್ತದೆ. ಆಶ್ರಯ ಮತ್ತು ಇತರೆ ಯೋಜನೆಗಳಲ್ಲಿ 1 ಲಕ್ಷ 25 ಸಾವಿರ ಮನೆಗಳನ್ನು ಕಟ್ಟಿಸಿಕೊಡುವ ಗುರಿ ಇದೆ. ಇದಕ್ಕೆ ಹಣ ಕೂಡ ಬಿಡುಗಡೆ ಮಾಡಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಈ ವರದಿಯಲ್ಲಿ ಕೊಟ್ಟಿರತಕ್ಕಂಥಾದ್ದನ್ನು ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಈ ಸದನದಲ್ಲಿ ಸ್ಟೇಟಮೆಂಟ್ ಮಾಡುವಾಗ ನಾನೂ ಸಹ ಇದ್ದೆ. ನಾನು ಹೇಳತಕ್ಕಂಥಾದ್ದು ಏನೆಂದರೆ, ಪ್ರಾಕ್ಟಿಕಲ್ ಆಗಿ ನಮ್ಮ ದೇಶದಲ್ಲಿ 30 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ತಾವು ಹೇಳಿದಿರಿ. ಆದರೆ ಪಕ್ಕದ ಆಂಧ್ರಪ್ರದೇಶದಲ್ಲಿ ಕೊಟ್ಟಿದ್ದಾರೆ. ಅವರು ಮನೆಗಳನ್ನು ಕಟ್ಟಿಸಿದ್ದಾರೆ. ನಮ್ಮ ದೇಶದಲ್ಲಿ ಅದು ಸಾಧ್ಯವಿಲ್ಲ ಎನ್ನತಕ್ಕಂಥಾದ್ದನ್ನು ಬಹುಶಃ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಈಗ ಈ ವರದಿಯಲ್ಲಿ ಕೊಟ್ಟಿರತಕ್ಕಂಥಾದ್ದನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ ಆ ರೀತಿಯಾದ ಒಂದು ಯೋಜನೆಯನ್ನು ರೂಪಿಸಬೇಕು ಎಂದು ನಾನು ಹೇಳುತ್ತಿದ್ದೇನೆ. ಆಮೇಲೆ ನೆರಳಿನ ಭಾಗ್ಯ ಮಾನ್ಯ ಅಧ್ಯಕ್ಷರೇ, ಇದಕ್ಕೆ ಒಂದು ಮನೆಗೆ 30 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಈ ವರದಿಯಲ್ಲಿ ಹೇಳಿದ್ದಾರೆ. ಯಾರಿಗೆ ಮನೆ ಇದ್ದು ಇದರಲ್ಲಿ ಪ್ರಿಂಟ್ ಆಗಿರತಕ್ಕಂಥಾದ್ದು 30 ಸಾವಿರ ಅಂತ ಇದೆ. ಆದರೆ ತಾವು 3 ಸಾವಿರ ಎಂದು ಹೇಳುವುದಾದರೆ ಅದನ್ನು ಒಪ್ಪೋಣ. ಆದರೆ ಈ 3 ಸಾವಿರ ರೂಪಾಯಿಗಳನ್ನು ಕೊಡುವಾಗ ಪ್ರಶ್ನೆ ಏನಾಗಿದೆ ಎಂದರೆ ಹಿಂದೆ ನಮಗೆ ಆಗಿರುವ ಅನುಭವದಂತೆ ಈ ಫ್ಲಡ್ ಡ್ಯಾಮೇಜನಲ್ಲಿ ಮನೆಗಳಿಗೆ ಹೆಂಚು ಅದೂ ಇದೂ ಸಪ್ಲೈ ಮಾಡುವಂತಹ ಸಂದರ್ಭದಲ್ಲಿ ಹಲವಾರು ರೀತಿಯಾದ ಲೋಪದೋಷಗಳನ್ನು ನಾವು ಕಂಡಿದ್ದೇವೆ. ಅದನ್ನು ಸರಿಪಡಿಸುವುದಕ್ಕೆ ಸರ್ಕಾರದ ಮುಂದೆ ನಿರ್ದಿಷ್ಟವಾದಂತಹ ಒಂದು ಯೋಜನೆ ಇರಬೇಕು. ನೆರಳಿನ ಭಾಗ್ಯ ಯೋಜನೆಗೆ 3 ಸಾವಿರ ರೂಪಾಯಿಗಳು ಎಂದು ಹೇಳುತ್ತೀರಿ. ಅದು ಹುಲ್ಲು ಮನೆ ಇದ್ದರೆ ಹುಲ್ಲು ತೆಗೆದು ಹೆಂಚು ಹಾಕತಕ್ಕಂಥಾದ್ದು ಅಥವಾ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ರೀತಿಯ ಮೆಟೀರಿಯಲ್ಸ ಹಾಕಬೇಕಾಗುತ್ತದೆ.

ಒಂದೇ ರೀತಿಯಾದ ಮೆಟೀರಿಯಲ್ಸ್‌ನ್ನು ರಾಜ್ಯದ ಎಲ್ಲಾ ಕಡೆ ಉಪಯೋಗಿಸುವುದಕ್ಕೆ ಬರುವುದಿಲ್ಲ. ಬೇರೆ ಬೇರೆ ಕಡೆ ಬೇರೆ ಬೇರೆ ಪ್ರೊಸಿಜರ್ಸ್ ಇದೆ. ಆದರೆ ಇದು 3 ಸಾವಿರ ರೂಪಾಯಿಗಳು ಆದರೆ ಖಂಡಿತವಾಗಿ ಏನೂ ಆಗುವುದಿಲ್ಲ. ಇದಕ್ಕೆ ಹಣ ಹೆಚ್ಚು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪ್ರಯೋಜನ ಆಗುವುದಿಲ್ಲ. ಬಜೆಟನಲ್ಲಿ ಹೇಳಿರತಕ್ಕಂಥಾದ್ದು ಈ ವರದಿ ಪ್ರಕಾರ ಈ ವರದಿಯಲ್ಲಿ ಒಂದು ರೀತಿ ಇದೆ. ಅವರು ಸ್ಟೇಟಮೆಂಟ್ ಮಾಡಿರತಕ್ಕಂಥಾದ್ದು ಇನ್ನೊಂದು ರೀತಿ ಇದೆ. ಅದ್ದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟಪಡಿಸ ಬೇಕಾಗುತ್ತದೆ. ನಾವು ವರದಿಯಲ್ಲಿ ಇರತಕ್ಕಂಥಾದ್ದನ್ನು ಒಪ್ಪಿಕೊಳ್ಳಬೇಕೇ ಅಥವಾ ವಸತಿಮಂತ್ರಿಗಳು ಈ ಸದನದಲ್ಲಿ ಮಾಡಿರತಕ್ಕಂಥ ಸ್ಟೇಟಮೆಂಟನ್ನು ಒಪ್ಪಿಕೊಳ್ಳಬೇಕೇ ಎಂದು ಸ್ಪಷ್ಟಪಡಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈ ಪಟ್ಟಣದಲ್ಲಿರತಕ್ಕಂಥ ಬಡವರ ಪರಿಸ್ಥಿತಿ, ಬಹುಶಃ ಬೆಂಗಳೂರು ನಗರ ಕೂಡ ಈ ಯೋಜನೆಗೆ ಸೇರುತ್ತದೆ ಎಂದು ನನಗೆ ಅನಿಸುತ್ತದೆ. ಪಟ್ಟಣಗಳಲ್ಲಿ ಇರುವಂತಹ ಬಡವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಅದಕ್ಕೆ ಹಲವಾರು ಕಾರಣಗಳು ಇವೆ. ಆ ಕಾರಣಗಳನ್ನೆಲ್ಲ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾದಂತಹ ಪ್ರಶ್ನೆ ಏನೆಂದರೆ, ಹಳ್ಳಿಗಾಡಿನಿಂದ ವಳಸೆ ಬರತಕ್ಕಂಥ ಜನರ ಸಂಖ್ಯೆ ಪಟ್ಟಣಗಳಿಗೆ ಹೆಚ್ಚಾಗುತ್ತಿದೆ. ಇದರಿಂದಾಗಿ ಪಟ್ಟಣಗಳಲ್ಲಿ ಗಂಭೀರವಾದ ವಸತಿ ಸಮಸ್ಯೆ ಪ್ರಾರಂಭವಾಗಿದೆ. ಹಳ್ಳಿಗಳಿಂದ ವಲಸೆ ಬರುವಂಥಾದ್ದನ್ನು ತಡೆಗಟ್ಟಲು ಸರ್ಕಾರ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ರೀತಿಯಾದ ಕಾರ್ಯಾಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಖಂಡಿತವಾಗಿ ಪಟ್ಟಣದಲ್ಲಿರತಕ್ಕಂಥ ವಸತಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯತೆ ಇಲ್ಲ. ಅವರಿಗೆ ಮೂಲಭೂತವಾಗಿ ಇರತಕ್ಕಂಥ ಸೈಟ್ ಮತ್ತು ಹಣ ಕೊಟ್ಟರೂ ಕೂಡ ಇನ್ನು ಹಲವಾರು ರೀತಿಯಲ್ಲಿ ಬೇರೆ ಬೇರೆ ಸಮಸ್ಯೆಗಳು ಉದ್ಭವವಾಗುತ್ತದೆ. ಮೂಲಭೂತವಾದ ಸೌಕರ್ಯಗಳ ಪ್ರಶ್ನೆ ಉದ್ಭವವಾಗುತ್ತದೆ. ನೀರು, ಬೆಳಕು ವಾತಾವರಣ ಇವೆಲ್ಲ ಸಮಸ್ಯೆಗಳು ಗಂಭೀರವಾಗಿ ಬೆಳೆಯುತ್ತಿದೆ. ಅದನ್ನು ತಡೆಯಲು ಒಂದು ಯೋಜನೆ ಬೇಕಾಗಿದೆ. ವಲಸೆ ಬರತಕ್ಕಂಥ ಜನರನ್ನು ತಡೆಯಲಿಕ್ಕೆ ಒಂದು ಯೋಜನೆ ಹಾಕದೇ ಇದ್ದರೆ ತಾವು ವಸತಿಗಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿಟ್ಟರುತ್ತೀರೋ ಅದೆಲ್ಲವೂ ಸಂಪೂರ್ಣವಾಗಿ ಪಟ್ಟಣಪ್ರದೇಶದಲ್ಲಿರತಕ್ಕಂಥಾದ್ದನ್ನು ತಡೆಯಲೂ ಬೇಕಾಗುತ್ತದೆ. ಇಲ್ಲಿದಿದ್ದರೆ ಆ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

5.30 ಪಿ.ಎಂ

ಇನ್ನೊಂದು ಕಡೆ ಸಹಾಯಧನಕ್ಕೆ ಬಡ್ಡಿ ಎಂದು ಇದೆ, ಮರುಪಾವತಿ ಎಲ್ಲಾ ಇದೆ. ಈ ಬಡ್ಡಿಯೂ ಬರುವುದಿಲ್ಲ, ಅಸಲೂ ಬರುವುದಿಲ್ಲ. ಇದು ಸುಮ್ಮನೆ ಸರ್ಕಾರದ ಮೇಲೆ ಕೆಲಸಕ್ಕೆ ಭಾರದ ಹೊರೆ ಆಗುತ್ತದೆ. ಆದ್ದರಿಂದ ಇದನ್ನು ಸಂಪೂರ್ಣವಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಇಷ್ಟನ್ನು ವಸತಿಗೆ ಸಂಬಂಧಪಟ್ಟಂತೆ ಹೇಳಿದ್ದೇನೆ. ಇಲಾಖೆಗೆ ಸಂಬಂಧಪಟ್ಟಂತೆ ನೀರು ಸರಬರಾಜು ಮತ್ತು ನೈರ್ಮಲ್ಯದ ಬಗ್ಗೆ ಹೇಳಿದ್ದಾರೆ. ರಾಜ್ಯದಲ್ಲಿ ಬಹಳಷ್ಟು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಹಿಂದೆ ಮಾನ್ಯ ನಜೀರ್ ಸಾಬರವರು ಇದ್ದಾಗ ಎಲ್ಲಾ ಹಳ್ಳಿಗಳಲ್ಲಿ ಕೊಳವೆ

ಬಾವಿಗಳನ್ನು ಹಾಕಿಸಿ ಕುಡಿಯುವ ನೀರನ್ನು ಒದಗಿಸುವ ಒಂದು ಪರಿಣಾಮಕಾರಿ ಹಾಗೂ ಒಳ್ಳೆಯ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿತ್ತು. ಇವತ್ತು ಭೂಮಿಯಲ್ಲಿನ ನೀರಿನ ಮಟ್ಟ ಆಳಕ್ಕೆ ಹೋಗಿ ಕೊಳವೆ ಬಾವಿಗಳು ಬತ್ತಿಹೋಗತಕ್ಕಂಥ ಸಂದರ್ಭ ಬಂದಿದೆ. ಕೆಲವು ಜಿಲ್ಲೆಗಳಲ್ಲಿ 350 ರಿಂದ 450 ಅಡಿ ಆಳವಾಗಿ ಬೋರ್ ವೆಲ್ ಹಾಕಿದರೂ ಅರ್ಧ ಇಂಚು ಒಂದು ಇಂಚು ನೀರು ಕೂಡ ಸಿಗುತ್ತಿಲ್ಲ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವುದು? ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ಹಾಕಿಯೇ ಜನರುಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತೇವೆಂದು ಸರ್ಕಾರ ಆಲೋಚನೆ ಮಾಡಿದರೆ ಖಂಡಿತಾ ಸಾಧ್ಯವಿಲ್ಲ. ಆಯಾ ಜಿಲ್ಲೆಗಳಲ್ಲಿರತಕ್ಕಂಥ ಪರಿಸ್ಥಿತಿಯನ್ನು ಹೊಂದಿಸಿಕೊಂಡು ಕುಡಿಯುವ ನೀರನ್ನು ಒದಗಿಸುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡಲು ಆಲೋಚನೆ ಮಾಡದಿದ್ದರೆ ಮುಂದಿನ ವರ್ಷಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಕಷ್ಟಕರವಾದ ಪರಿಸ್ಥಿತಿಗೆ ಬರುತ್ತದೆ. ಭೂಮಿಯಲ್ಲಿ ನೀರು ಸಿಕ್ಕುತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆ ನೀವಾರಿಸಲು ಈಗಿನಿಂದಲೇ ಯೋಚನೆಗಳನ್ನು ಸರ್ಕಾರ ಹಾಕಿಕೊಳ್ಳುವುದು ಒಳ್ಳೆಯದು. ಆಮೇಲೆ, ಜಿಲ್ಲೆಗಳಲ್ಲಿ ಸಿಗುತ್ತಿರುವ ನೀರಿನಲ್ಲಿ ಅನಾರೋಗ್ಯಕ್ಕೆ ಕಾರಣವಾಗುವ ಫ್ಲೋರೇಡ್ ಮತ್ತು ನೈಟ್ರೇಟ್ ಲವಣಗಳು ಬೆರೆತಿರುವುದು ಕಂಡು ಬಂದಿದೆ. ಭೂಮಿಯಲ್ಲಿನ ನೀರಿನ ಮಟ್ಟ ಆಳಕ್ಕೆ ಹೋಗುತ್ತಾ ಈ ಲವಣಗಳ ಪರಸೆಂಟೇಜ್ ಕೂಡ ಹೆಚ್ಚಾಗುತ್ತಾ ಹೋಗುತ್ತಿದೆ. ಆರೋಗ್ಯಕರವಾದ ನೀರನ್ನು ಜನರಿಗೆ ಕೊಡುವುಧು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಸುಪ್ರೀಂ ಕೋರ್ಟ ಜಜಮೆಂಟ್ ಕೊಟ್ಟಿರುವುದು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಯವರಿಗೆ ಗೊತ್ತಿರಬಹುದು. ಫ್ಲೋರೇಡಯುಕ್ತ ನೀರು ದೊರೆಯುತ್ತಿರುವ ಬಗ್ಗೆ ಸುಪ್ರೀಮ್ ಕೋರ್ಟನಲ್ಲಿ ರಿಟ್ ಹಾಕಿದರಿಂದ ಅದರ ಬಗ್ಗೆ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದು ಎಲ್ಲಾ ರಾಜ್ಯ ಸರ್ಕಾರಗಳ ಪ್ರಾಥಮಿಕ ಜವಾಬ್ದಾರಿಯಾಗಿರುವುದರಿಂದ ಅದನ್ನು ನಿರ್ವಹಿಸಬೇಕೆಂದು ತೀರ್ಪು ಕೊಡಲಾಗಿದೆ.

ಈ ಫ್ಲೋರೇಡ್ ಸಮಸ್ಯೆ ಬಹಳ ಗಂಭೀರವಾಗಿರುವುದರಿಂದ ನಾನು ಇದರ ಬಗ್ಗೆ ಎರಡು ಮೂರು ಸಾರಿ ಈ ಸದನದಲ್ಲಿ ಪ್ರಶ್ನೆ ಎತ್ತಿದ್ದೇನೆ. ಇದು ನಮ್ಮ ಗಮನಕ್ಕೆ ಬಂದಿದೆ, ಇದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿರುವುದನ್ನು ಬಿಟ್ಟರೆ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಇದರ ಬಗ್ಗೆ ಹಾಕಿಲ್ಲ. ನಮ್ಮ ಜಿಲ್ಲೆಯ ನನ್ನ ಕ್ಷೇತ್ರದಲ್ಲೇ ನೀರಿನಲ್ಲಿ ಫ್ಲೋರೇಡಿನ ಅಂಶ 4.6 ರಷ್ಟು ಇದೆ. ವಿಜ್ಞಾನಿಗಳ ಸರ್ವೆ ಪ್ರಕಾರ ನೀರಿನಲ್ಲಿ 1.2 ರಷ್ಟು ಫ್ಲೋರೇಡ್ ಇದ್ದರೆ ಅಪಾಯಕಾರಿಯಲ್ಲ. 1.2 ಕ್ಕಿಂತ ಹೆಚ್ಚಾದರೆ ಇದು ಅಪಾಯಕಾರಿಯಾಗುತ್ತದೆ. ರಾಜ್ಯದ ಧಾರವಾಡ ಜಿಲ್ಲೆಯ ಹಲವಾರು ತಾಲ್ಲೂಕುಗಳು, ಬಳ್ಳಾರಿ ಜಿಲ್ಲೆಯ ಹಲವಾರು ತಾಲ್ಲೂಕುಗಳನ್ನೊಳಗೊಂಡಂತೆ 15 ಜಿಲ್ಲೆಗಳಲ್ಲಿ ಈ ಫ್ಲೋರೇಡ್ ಅಂಶ ಜಾಸ್ತಿಯಾಗುತ್ತಿರುವುದು ಕಂಡು ಬರುತ್ತಿದೆ. ನಮ್ಮ ಜಿಲ್ಲೆಯ ಕೆಲವು ಭಾಗಗಳಲ್ಲಿ ಫ್ಲೋರೇಡ್ ಮತ್ತು ಇನ್ನು ಕೆಲವು ಭಾಗಗಳಲ್ಲಿ ನೈಟ್ರೇಟ್ ಅಂಶ ಇರುವುದು ಕಂಡು ಬಂದಿದೆ. ಈ ಎರಡೂ ಲವಣಗಳು ಹೆಚ್ಚಾಗುವುದರಿಂದ ಜನರ ಆರೋಗ್ಯಕ್ಕೆ ಹಾನಿ ಮಾಡುತ್ತಿದೆ ಮತ್ತು ಇದು ಅಪಾಯಕಾರಿಯಾದ ಅಂಶವಾಗಿರುತ್ತದೆ. ಇದನ್ನು ಪರಿಹಾರ ಮಾಡುವ ಬಗ್ಗೆ ಸರ್ಕಾರ ಏನು ಯೋಜನೆಗಳು ಹಾಕಿಕೊಂಡಿವೆ ಎಂಬ ಬಗ್ಗೆ ವರದಿಗಳನ್ನು ನಮಗೆ ಕೊಟ್ಟಿಲ್ಲ. ನೀರು ಸಿಗುವ ಹಾಗೆ ಮಾಡುವುದು ಒಂದು ಸಮಸ್ಯೆ

ಆದರೆ, ಸಿಕ್ಕ ನೀರು ಕುಡಿಯಲಿಕ್ಕೆ ಯೋಗ್ಯವಾಗಿದೆಯೇ ಎಂಬುದನ್ನು ನೋಡಬೇಕಾದ ಸಮಸ್ಯೆ ಇನ್ನೊಂದು. ಇವೆರಡೂ ಗಂಭೀರವಾದ ಸಮಸ್ಯೆಗಳೇ ಆಗಿರುತ್ತವೆ. ಎಲ್ಲಾ ಕಾಲಕ್ಕೂ ಕುಡಿಯುವ ನೀರನ್ನು ಬೋರ್ ವೆಲಗಳ ಮೂಲಕ ಒದಗಿಸುತ್ತೇವೆನ್ನುವುದು ಖಂಡಿತವಾಗಿ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವ ಬಗ್ಗೆ ಒಂದು ಪರ್ಯಾಯವಾದ ಯೋಜನೆಯನ್ನು ಹಾಕುವ ಬಗ್ಗೆ ಸರ್ಕಾರ ಯೋಚನೆ ಮಾಡಲೇಬೇಕೆಂದು ನನ್ನ ಒತ್ತಾಯ. ನದಿಗಳ ಮೂಲಕ ಯಾವ ಯಾವ ಜಿಲ್ಲೆಗಳಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೋ ಅಂಥಾ ಕಡೆ ಈ ಬಗ್ಗೆ ಯೋಜನೆ ಮಾಡಬೇಕೆಂದು ನನ್ನ ಸಲಹೆ. ಕೋಲಾರ ಜಿಲ್ಲೆಗೆ ಕಾವೇರಿ ನದಿ ನೀರನ್ನು ಒದಗಿಸಿ ಎಂದು ಹೇಳಿದಾಗ, ಇದಕ್ಕೆ 500 ಕೋಟಿ ಖರ್ಚಾಗುತ್ತದೆ, 1000 ಕೋಟಿ ಖರ್ಚಾಗುತ್ತದೆಂದು ಸರ್ಕಾರ ಹೇಳುತ್ತದೆ. ಇದಕ್ಕೆ ನಾನು ಒಂದು ಉದಾಹರಣೆ ಕೊಡುವುದಾದರೆ, ಒಂದು ಹಳ್ಳಿಯಲ್ಲಿ ಒಂದು ಬೋರವೆಲನ್ನು ಹಾಕಿ ಅದಕ್ಕೆ ಪಂಪ್ ಸೆಟ್ ಅಳವಡಿಸಿ ಕುಡಿಯುವ ನೀರು ಕೊಡಬೇಕಾದರೆ 50 ರಿಂದ 60 ಸಾವಿರ ರೂಪಾಯಿ ಖರ್ಚಾಗುತ್ತದೆ. ಒಂದೆರಡು ವರ್ಷದಲ್ಲಿ ಹಾಕಿರುವ ಬೋರ್ ವೆಲ್ ಬತ್ತಿ ಹೋಗುತ್ತದೆ. ಆಗ ಇನ್ನೊಂದು ಬೋರ್ ವೆಲ್ ಹಾಕಬೇಕಾಗುತ್ತದೆ. ಹೀಗೆ ಪ್ರತಿ ಎರಡು ವರ್ಷ ಮೂರು ವರ್ಷಗಳಿಗೆ ಒಂದೊಂದು ಬೋರ್ ವೆಲೆ ಹಾಕುತ್ತಾ ಹೋದರೆ ಖರ್ಚು ಎಷ್ಟು ಆಗುತ್ತದೆ. ಅದೂ ಅಲ್ಲದೆ ಕೆಲವು ಹಳ್ಳಿಗಳಲ್ಲಿ ಐದಾರು ಬೋರ್ ವೆಲಗಳನ್ನು ಹಾಕಿದರೂ ನೀರು ಸಿಗದೆ ಇರತತ ಪರಿಸ್ಥಿತಿ ಇದೆ. ಒಂದು ತಾಲ್ಲೂಕಿನಲ್ಲಿ ಸುಮಾರು 350 ಹಳ್ಳಿಗಳಿದ್ದು ಒಂದು ಹಳ್ಳಿಗೆ ಕುಡಿಯುವ ನೀರು ಒದಗಿಸಲು ಸರಾಸರಿ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ 350 ಹಳ್ಳಿಗಳಲ್ಲೂ ಬೋರವೆಲ್ ಹಾಕುವುದಕ್ಕೆ ಎಷ್ಟು ಖರ್ಚಾಗುತ್ತದೆಂದು ತಾವು ಲೆಕ್ಕ ಹಾಕಿ. ಆಮೇಲೆ ರಾಜ್ಯದ 15 ಜಿಲ್ಲೆಗಳಲ್ಲಿರುವ ನೀರಿನಲ್ಲಿ ಫ್ಲೋರೇಡ್ ಅಂಶವನ್ನು ಇಲ್ಲದಂತೆ ಮಾಡಲು ಫಿಲ್ಟರ್ ಅಳವಡಿಸುವಂಥ ಕೆಲಸಕ್ಕೆ ಖರ್ಚು ಮಾಡಬೇಕಾಗಿದೆ. ಪಂಜಾಬ್ ರಾಜ್ಯದಲ್ಲಿ ಫ್ಲೋರೇಡಯುಕ್ತ ನೀರನ್ನು ಶುದ್ಧಿ ಮಾಡಲು ಒಂದು ಎಕ್ಸಪರಿಮೆಂಟ್ ಮಾಡಿದ್ದಾರೆ, ಹಾಗೆಯೇ ಆಂಧ್ರಪ್ರದೇಶದಲ್ಲೂ ಒಂದು ಎಕ್ಸಪರಿಮೆಂಟ್ ಮಾಡಿದ್ದಾರೆ. ಈ ಎಕ್ಸಪೆರಿಮೆಂಟ್ ಪ್ರಕಾರ 2 ಸಾವಿರ ಜನರಿಗೆ ಡೀಫ್ಲೋರೇಡ್ ನೀರನ್ನು ಸರಬರಾಜು ಮಾಡಬೇಕಾದರೆ 3 ಲಕ್ಷ ಸಾವಿರ ರೂಪಾಯಿ ಖರ್ಚಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಒಂದು ಗ್ರಾಮದಲ್ಲಿ ಮಿನಿ ಸಪ್ಲೈ ಸ್ಕೀವರಗೆ ಡೀ-ಫ್ಲೋರೇಡ್ ಮಾಡತಕ್ಕಂಥ ಒಂದು ಸಣ್ಣ ಮಿಷನ್ ಅಳವಡಿಸಿದ್ದೇವೆ. ಈ ಪ್ರಯೋಗವು ಯಶಸ್ವಿಯಾದರೆ ಇತರ ದೊಡ್ಡ ಕುಡಿಯುವ ನೀರಿನ ಯೋಜನೆಗಳಿಗೂ ಅಳವಡಿಸಬೇಕೆನ್ನುವ ಯೋಜನೆ ಹಾಕಿಕೊಳ್ಳಲಾಗಿದೆ. ಈ ಗ್ರಾಮದಲ್ಲಿ ಅಳವಡಿಸಿರುವ ಡೀ-ಫ್ಲೋರೇಡ್ ಮೆಷಿನಗೆ ೫೦ ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಗೊತ್ತಿರುವ ಪ್ರಕಾರ, ಡ್ಯಾನಿಡಾ ಸಂಸ್ಥೆಯವರು ಮಾಡಿರತಕ್ಕಂಥ ಸರ್ವೇ ಪ್ರಕಾರ 3 ಲಕ್ಷದ 60 ಸಾವಿರ ಖರ್ಚಾಗುತ್ತದೆಂದು ತಿಳಿದು ಬಂದಿದೆ. ಇದರ ಬಗ್ಗೆ ಪುನಃ ಸರ್ಕಾರದವರು ಪರಿಶೀಲನೆ ಮಾಡಲಿ. ನೀವು ಹೇಳಿದ ಪ್ರಕಾರವೇ ೫೦ ಸಾವಿರ

ರೂಪಾಯಿಗಳೆಂದು ಇಟ್ಟುಕೊಂಡರೂ ಕೂಡ ಮಿನಿ ವಾಟರ್ ಸ್ಕೀಮಗಳನ್ನು ಮಾಡಿರುವ ಹಳ್ಳಿಗಳಲ್ಲಿ ಈ ಡೀ-ಫ್ಲೋರೇಡ್ ಪ್ಲಾಂಟಗಳನ್ನು ಅಳವಡಿಸಿದ ಮೇಲೆ ಅವುಗಳ ಮೇನಟೆನೆನ್ಸ ಕೂಡ ಮಾಡುತ್ತಿರಲೇಬೇಕಾಗುತ್ತದೆ. ಮೇನಟೆನೆನ್ಸ. ಬೋರವೆಲ್ ಮತ್ತು ಡೀ-ಫ್ಲೋರೇಡ್ ಪ್ಲಾಂಟ್ ಇಷ್ಟಕ್ಕೆ ಎರಡು ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಒಂದು ಹಳ್ಳಿಯಲ್ಲಿ 500 ಮನೆಗಳಿರುವ ಕಡೆ 2 ಲಕ್ಷ ಆಗುತ್ತದೆ. ಹಾಗಾದರೆ 350 ಹಳ್ಳಿಗಳಿಗೆ ಹಣ ಎಷ್ಟಾಗುತ್ತದೆಂದು ನೀವು ಲೆಕ್ಕ ಹಾಕಿ ಮತ್ತು duration of availability ಎಷ್ಟು ವರ್ಷ ನಿರಂತರವಾಗಿ ನೀರು ಸಿಗುತ್ತದೆ ಎನ್ನುವುದು ಪ್ರಶ್ನೆ. ಈ ಎಲ್ಲ ಲೆಕ್ಕಹಾಕಿದರೆ ಉದಾಹರಣೆಗೆ ನಾನು ಹೇಳುವುದು, ಬೆಂಗಳೂರಿಗೆ ಕಾವೇರಿ ನೀರು ಬಂದಿದೆ, ಕೋಲಾರಕ್ಕೆ ಕಾವೇರಿ-ಕೊಟ್ಟರೆ ಅದು ದೀರ್ಘಕಾಲದ ಪರಿಹಾರ, ಎಷ್ಟು ದುಡ್ಡು ಖರ್ಚಾಗುತ್ತದೆಂದು ಲೆಕ್ಕಹಾಕಿದರೆ ಒಂದು ಕಡೆ ಆರೋಗ್ಯಕರ ನೀರು ಕೊಡುವ ಸಾಧ್ಯತೆ ಇದೆ, ಇನ್ನೊಂದು ಕಡೆ ಶಾಶ್ವತವಾದ ಪರಿಹಾರ ಮತ್ತು ಪರ್ಯಾಯ ಹುಡುಕುವುದಕ್ಕೂ ಕೂಡ ಸಾಧ್ಯತೆ ಇದೆ. ಅದೇ ರೀತೀ ಹೇಮಾವತಿಯಿಂದ ತುಮಕೂರಿಗೆ ಕುಡಿವ ನೀರಿಗಾಗಿ ಯೋಜನೆ ಬೇಕೆಂದು ಕೇಳುತ್ತಿದ್ದಾರೆ. ಅದೆರೀತಿ ಚಿತ್ರದುರ್ಗಕ್ಕೆ. ಹಾಗೇ ಎಲ್ಲೆಲ್ಲಿ ಸಾಧ್ಯತೆಗಳುಂಟೋ ಆ ಎಲ್ಲ ಕಡೆಗೆ ಸರಫೇಸ್ ವಾಟರನ್ನು ಕುಡಿಯುವುದಕ್ಕಾಗಿ ಸರಬರಾಜು ಮಾಡುವುದು ಬಹುಮುಖ್ಯವಾದ ದೀರ್ಘಕಾಲದ ಒಂದು ಪರಿಹಾರ. ಅದಕ್ಕೆ ಸರ್ಕಾರ ಸ್ಪಷ್ಟವಾದ ಒಂದು ಯೋಜನೆ ಹಾಕಬೇಕಾಗುತ್ತದೆ. ನೀವು ಹಲವಾರು ವಿಷಯಗಳಿಗಾಗಿ ವಿಶ್ವಬ್ಯಾಂಕಿನ ಬಳಿ ಸಾಲಕ್ಕಾಗಿ ಕೇಂದ್ರಸರ್ಕಾರವೂ ಹೋಗುತ್ತದೆ, ರಾಜ್ಯಸರ್ಕಾರವೂ ಹೋಗುತ್ತದೆ. ಡೆನ್ಮಾರ್ಕ ಸರ್ಕಾರ ಸಹಾಯಮಾಡುತ್ತದೆ ಎಂದು ಹೇಳುತ್ತಿದ್ದಾರೆ ಅದು ಎಷ್ಟರಮಟ್ಟಿಗೆ ಎಂದು ನನಗೆ ಗೊತ್ತಿಲ್ಲ. ಈ ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡಲಿಕ್ಕೆ ಆ ಪ್ರಯತ್ನ ಮಾಡಿ ಸರಫೇಸ್ ವಾಟರನ್ನು ಕೊಟ್ಟರೆ ಆರೋಗ್ಯಕರ ನೀರು ಕೊಡುವ ಸಾಧ್ಯತೆ ಇದೆ. ನೀವು ಬೋರ್ ವೆಲಗಳನ್ನೇ ಆಧರಿಸಿ ಹಳ್ಳಿಗಾಡಿನ ಜನರಿಗೆ ನೀರು ಕೊಡಲು ಸಾಧ್ಯವಿಲ್ಲ, ಇದು ಒಂದನೆಯದು. ಎರಡನೆಯದು ಅಂಶ, ಈಗಿರುವ ಬೋರವೆಲ್ ವ್ಯವಸ್ಥೆ ಏನಾಗಿದೆ ಎಂದರೆ, ಒಂದು ಕಡೆ ಬೋರ್ ವೆಲಗಳಲ್ಲಿ ನೀರು ಸಿಗುತ್ತಿಲ್ಲ, ಇನ್ನೊಂದು ಕಡೆ ಅದಕ್ಕೆ ಅಳವಡಿಸುವ ಮೋಟಾರ್, ಪಂಪಸೆಟ್ ಪೈಪಗಳು ಕಳಪೆ ಗುಣಮಟ್ಟದ್ದನ್ನು ಅಳವಡಿಸಿ ಮೂರು ತಿಂಗಳಿಗೊಮ್ಮೊಮ್ಮೆ ಮೆಶಿನ್ ಕೆಟ್ಟುಹೋಗಿಬಿಟ್ಟರೆ ಅದನ್ನು ರಿಪೇರಿ ಮಾಡಿ ಮತ್ತೆ ಹಾಕಲು ಮೂರು ತಿಂಗಳು ತೆಗೆದುಕೊಳ್ಳುತ್ತಾರೆ ಈಗಿನ ವ್ಯವಸ್ಥೆಯಲ್ಲಿ ತಾಲ್ಲೂಕುಮಟ್ಟದ ಅಧಿಕಾರಿಗಳು. ಯಾವುದೇ ಪಂಪಸೆಟ್ ವ್ಯವಸ್ಥೆಯಲ್ಲಿ ಮೋಟರ್ ಸುಟ್ಟು ಹೋಗಿಬಿಟ್ಟರೆ ಹಲವಾರು, ಫಾರ್ಮಾಲಿಟೀಸನ್ನು ಅವನು ನೋಡಬೇಕಾಗುತ್ತದೆ. ಅದನ್ನು ರಿಪೇರಿ ಮಾಡಲು ಒಬ್ಬ ಕಂಟ್ರಾಕ್ಟರನ್ನು ನಿಗದಿಪಡಿಸಿರುತ್ತಾರೆ. ಅವನು ಬೇಗ ಮಾಡಿಕೊಡುವಲ್ಲಿ ಸರ್ಕಾರ ದುಡ್ಡು ರಿಲೀಸ್ ಮಾಡುವುದಿಲ್ಲ. ಅದಕ್ಕೆ ಕಂಟ್ರಾಕ್ಟರ್ ಅವನಿಗಿಷ್ಟ ಬಂದ ದಿವಸ ಯಾವಾಗಲೋ ಮಾಡಿಕೊಡುತ್ತಾನೆ. ಹಾಗಾಗಿ ಒಂದು ಸಲ ಮೆಶಿನ್ ಕೆಟ್ಟರೆ ಸುಟ್ಟರೆ ಅವನು ಬಂದು ರಿಪೇರಿ ಮಾಡಬೇಕಾದರೆ ಕನಿಷ್ಟವೆಂದರೂ ಒಂದೂವರೆ ತಿಂಗಳು ತೆಗೆದುಕೊಳ್ಳುತ್ತಾನೆ. ಇದರಿಂದ ಕುಡಿಯುವ ನೀರಿಗಾಗಿ ಹಾಹಾಕಾರ ಹಳ್ಳಿಗಳಲ್ಲಿ ಪ್ರಾರಂಭವಾಗುತ್ತದೆ. ಇನ್ನು ಕೆಲವು ಕಡೆ ಬೋರವೆಲಗಳಲ್ಲಿ ಕೆಲವು

ಹಳ್ಳಿಗಳಲ್ಲಿ ನೀರೆ ಸಿಗುತ್ತಿಲ್ಲ. ಒಟ್ಟಿಗೆ ಐದಾರು ಪಾಯಿಂಟ್ ಹಾಕಿದರೂ ನೀರು ಸಿಗುತ್ತಿಲ್ಲ. ಇದರಿಂದ ದೂರದಿಂದ ನೀರು ತರುವ ಪರಿಸ್ಥಿತಿ ಹಳ್ಳಿಗಳಿಗೆ ಬರುತ್ತಿದೆ. ಇನ್ನೊಂದೇನಾಗಿದೆ ಎಂದರೆ, ಮಿನಿವಾಟರ್ ಸಪ್ಲೈ ಮತ್ತು ರೆಗ್ಯುಲರ್ ವಾಟರ್ ಸಪ್ಲೈ ಈ ಎರಡನ್ನೂ ಮೇನೇಜ್‌ಮೆಂಟ್ ಮಾಡಲಿಕ್ಕೆ ಪಂಚಾಯಿತಿಗೆ ಕೊಡಲಾಗಿದೆ. ಆದರೆ ಹಣ ಅವರಿಗಿಲ್ಲ. ಇವತ್ತು ಹಲವಾರು ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿ ಮಾಡದೆ ಮೊನ್ನೆ ನೀವು ಒಂದೂವರೆ ಲಕ್ಷ ಒಂದೊಂದು ಪಂಚಾಯಿತಿಗೆ ಬಿಡುಗಡೆ ಮಾಡಿದರೆ ಆದರಲ್ಲಿ 20-30-40 ಸಾವಿರ ಬರಿ ವಿದ್ಯುತ್ ಬಿಲಗೇ ಕಟ್ಟಿಬಿಟ್ಟಿದ್ದಾರೆ. ಮತ್ತು ಆ ವಾಟರ್ ಸಪ್ಲೈಸನ್ನು ಮೇನಟ್ಯೆನ್ ಮಾಡಲಿಕ್ಕೆ ಪಂಚಾಯತಿವರಿಗೆ ಪ್ರತ್ಯೇಕ ನಿಧಿ ಇಲ್ಲ. ಮತ್ತೆ ಜಡಪಿ ಇಂಜಿನಿಯರಿಂಗಗೆ ಹತ್ತಿರ ಬರಬೇಕು, ಅವರು ರಿಪೇರಿ ಮಾಡಿಸಿಕೊಡಬೇಕು ಅದು ತಿಂಗಭಾನುಗಟ್ಟಲೆ ಆಗಿ ನೀರಿನಲ್ಲದ ಪರಿಸ್ಥಿತಿ ಹಳ್ಳಿಗಳಲ್ಲಿ ನೋಡುತ್ತಿದ್ದೇವೆ. ಇದನ್ನು ತಪ್ಪಿಸಬೇಕೆಂದಾದರೆ ಪಂಚಾಯಿತಿಗಳಿಗೆ ಪಂಪಸೆಟ್ ರಿಪೇರಿಗಾಗಿ ಪ್ರತ್ಯೆಕ ಹಣ ಮೀಸಲಿಡಬೇಕಾಗುತ್ತದೆ. ಹಾಗಿಲ್ಲದೆ ಹೋದರೆ ನೀವು ಜಡಪಿಯವರಿಗೆ ಕೊಟ್ಟರೆ ಅದು ಖಂಡಿತ ಸಾಧ್ಯವಾಗುವುದಿಲ್ಲ. ಇನ್ನೊಂದು ರಿಪೇರಿ ಮಾಡುವ ಕಂಟ್ರಾಕ್ಟ ಏನಾಗಿದೆ ಎಂದರೆ, ಇಡೀ ತಾಲ್ಲೂಕಿಗೇ ಒಬ್ಬರೋ ಇಬ್ಬರೋ ಕಂಟ್ರಾಕ್ಟರನ್ನು ಸರ್ಕಾರ ನೇಮಿಸಿದೆ. ಅವರು ರಿಪೇರಿ ಮಾಡುವುದನ್ನು ಮನಾಪಲಿ ಮಾಡಿಕೊಂಡು ಅವರಿಗಿಷ್ಟಬಂದಾಗ ಮಾಡಿಕೊಡುವುದು, ಹಳ್ಳಿಯಲ್ಲಿ ಜನ ನೀರಿನಲ್ಲದೆ ಒದ್ದಾಡುತ್ತಿದ್ದಾರೆ, ಅದಕ್ಕೆ ಸರಿಯಾದ ಸಂದರ್ಭದಲ್ಲಿ ತಕ್ಷಣ ರಿಪೇರಿ ಮಾಡಿಕೊಡುವ ವ್ಯವಸ್ಥೆ ಇಲ್ಲ. ಆದ್ದರಿಂದ ನೀವು ಕಂಟ್ರಾಕ್ಟರ್ ವ್ಯವಸ್ಥೆಯನ್ನು ಬದಲಾಯಿಸದಿದ್ದರೆ ಪಂಪಸೆಟಗಳನ್ನು ರಿಪೇರಿ ಮಾಡಿ....

ಶ್ರೀ ಬಿ. ಮುನಿಯಪ್ಪ : ಇವತ್ತಿನ ಕಲಾಪವ್ನು ನಾಳೆ ಬೆಳಿಗ್ಗೆಗೆ ಮುಂದೂಡಬೇಕು, ಏಕೆಂದರೆ ಬ್ಯಾಂಕ್ವೆ ಹಾಲನಲ್ಲಿ ಶಾಸಕರಿಗೆ ಯೋಗಾಸನ ಪ್ರದರ್ಶನವಿದೆ.

ಅಧ್ಯಕ್ಷರು : ನಾನೂ ಆ ಕಾರ್ಯಕ್ರಮಕ್ಕೆ ಹೋಗಬೇಕಾಗಿತ್ತು, ಆದರೆ ಇವತ್ತು ಡಿಮಾಂಡ್ಸನ್ನು ಮುಗಿಸಿಕೊಡಬೇಕಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ವಿಚಾರದಲ್ಲಿ ಶ್ರೀರಾಮರೆಡ್ಡಿಯವರು ಬೆಳಕು ಚೆಲ್ಲುತ್ತಾ ಹೇಳಿದರು ಹಿಂದೆ ಮಂಡಲ ಪಂಚಾಯ್ತಿ ಇದ್ದಾಗ ಮೋಟರ್ ಹಾಕಿ ಕೊಟ್ಟುಬಿಡಲಾಗುತ್ತಿತ್ತು ಮಂಡಲಪಂಚಾಯ್ತಿಯವರೇ ಅದನ್ನು ಮೇಂಟೆನ್ ಮಾಡುತ್ತಿದ್ದರು. ಆಗ ನೀರು ಬಿಡುವವನಿಗೂ ಕೂಡ ಅವರು ಸಂಬಳ ಕೊಟ್ಟು ವ್ಯವಸ್ಥಿತವಾಗಿ ನಡೆಸುತ್ತಿದ್ದರು. ಈಗ ಏನಾಗಿದೆ ಎಂದರೆ, ಅವರಿಗೇನು 40 ಪರ್ಸೆಂಟ್ ರೆವಿನ್ಯು ಬರುತ್ತದೆ ಅದರಲ್ಲೇ ಅವನಿಗೆ ಸಂಬಳ ಕೊಡಬೇಕು. ಇದು ಬಹಳ ಕಷ್ಟವಾಗುತ್ತದೆ. ಅದಕ್ಕೇ ಶ್ರೀರಾಮರೆಡ್ಡಿಯವರು ಹೇಳಿದಂತೆ ಪಂಚಾಯ್ತಿಗೇನೆ ಮೇಂಟೆನೆನ್ಸ ಮಾಡುವುದಕ್ಕೆ ಹಣ ಕೊಟ್ಟಿದ್ದೇ ಆದರೆ ಕುಡಿಯುವ ನೀರಿನ ಸಮಸ್ಯೆ ಬಂದಾಗ ಕೂಡಲೇ ಎಲ್ಲಿ ರಿಪೇರಿ ಮಾಡಬೇಕು, ಎಲ್ಲಿ ಪೈಪ್ ಹಾಕಬೇಕು ಎನ್ನುವುದನ್ನು ಗಮನಹರಿಸುತ್ತಾರೆ. ಅವರಿಗೂ ಜವಾಬ್ದಾರಿ ಇರುತ್ತದೆ. ಸ್ಥಳೀಯ ಚುನಾಯಿತ ಜನ ಇರುವುದರಿಂದ ಬೇಗನೆ ಕೆಲಸವಾಗುತ್ತದೆ. ಹಿಂದೆ ಮಂಡಲ ಪಂಚಾಯ್ತಿ ಇದ್ದಾಗ ನೀರಿನ ವ್ಯವಸ್ಥೆ ಸರಿ ಇತ್ತು ಆದರೆ ಇವತ್ತು ಬಹಳ ಅವ್ಯವಸ್ಥೆ ಆಗಿದೆ.

ಇವತ್ತು ಜಿಲ್ಲಾಪಂಚಾಯ್ತಿಯಿಂದ ಏನು ಮಾಡುತ್ತೇವೆ ಪಂಪ್ ಹಾಕಿಸುವವರೆಗೆ ನೀವು ನೋಡಿ ಆಮೇಲೆ ಮೇಂಟೆನೆನ್ಸನ್ನು ಗ್ರಾಮಪಂಚಾಯ್ತಿಗೆ ಕೊಡುವುದು ಸರಿ ಎಂದು ನನಗನ್ನಿಸುತ್ತದೆ. ಶ್ರೀರಾಮರೆಡ್ಡಿಯವರು ಹೇಳಿರುವುದರ ಬಗ್ಗೆ ನಿಜವಾಗಿಯೂ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನೀರಿನದು ಇನ್ನೊಂದು ಮುಖ್ಯ ಸಮಸ್ಯೆ ಇದೆ ಗ್ರಾಮಾಣಾಭಿವೃದ್ಧಿ ಸಚಿವರು ಮತ್ತು ನಗರಾಭಿವೃದ್ಧಿ ಸಚಿವರು ಇದನ್ನುನ ಗಮನಿಸಬೇಕು. ಪ್ರತಿ ಘನುಷ್ಯನಿಗೆ ರಾಷ್ಟ್ರೀಯ ಸರ್ವೆ ಪ್ರಕಾರ ಒಂದು ದಿವಸಕ್ಕೆ 120 ಲೀಟರ್ ನೀರಿನ ಅವಶ್ಯಕತೆ ಇದೆ ಅದರಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇರಬಹುದು. ಆದರೆ ಈಗ ಸಿಗುತ್ತಿರುವುದೆಷ್ಟು ಗೊತ್ತಾ? ಗ್ರಾಮೀಣಪ್ರದೇಶಗಳಲ್ಲಿ ಯಾವುದೇ ಸಂದರ್ಭದಲ್ಲಿ 18 ಲೀಟರಗಿಂತ ಹೆಚ್ಚು ನೀರು ಸಿಗುತ್ತಿಲ್ಲ ಪಟ್ಟಣ ಪ್ರದೇಶದಲ್ಲಿ ಯಾವುದೇ ಸಂದರ್ಭದಲ್ಲಿ 16 ರಿಂದ 22 ಲೀಟರಗಿಂತ ಹೆಚ್ಚು ನೀರು ಸಿಗುತ್ತಿಲ್ಲ. 120 ಲೀಟರ್ ನೀರು ಅವಶ್ಯತಕೆ ಇರುವಾಗ ಸ್ವಾತಂತ್ರ್ಯ ಬಂದು 48 ವರ್ಷಗಳ ನಂತರವೂ ನಾರು ಸರಾಸರಿ ಸರಬರಾಜು ಮಾಡುತ್ತಿರುವುದು 18 ಲೀಟರ್ ಮಾತ್ರ. ನಾವು ಇದನ್ನು ಗಂಭೀರವಾಗಿ ಆಲೋಚಿಸಬೇಕಾಗಿದೆ. ಯಾವುದೋ ಒಂದು ಸರ್ಕಾರ ತಪ್ಪು ಮಾಡಿದೆ ಎಂದು ನಾನು ಖಂಡಿತ ಹೇಳುತ್ತಿಲ್ಲ. ಕುಡಿಯುವ ನೀರಿನ ಬಗ್ಗೆ ನಮಗೆ ವೈಜ್ಞಾನಿಕವಾದ ಒಂದು ಯೋಜನೆ ಇಲ್ಲ. ಒಬ್ಬ ಮನುಷ್ಯನಿಗೆ ಎಷ್ಟು ನೀರು ಅವಶ್ಯಕತೆ ಇದೆ, ಯಾವ ಹಳ್ಳಿಯಲ್ಲಿ ಎಷ್ಟು ಜನಸಂಖ್ಯೆ ಇದೆ ಅಲ್ಲಿಗೆ ಎಷ್ಟು ನೀರುಬೇಕು ಅಥವಾ ಪಟ್ಟಣದಲೆಷ್ಟು ಜನಸಂಖ್ಯೆ ಇದೆ ಅದಕ್ಕೆ ನೀರು ಎಷ್ಟು ಬೇಕು ಎಂಬ ಬಗ್ಗೆ ವೈಜ್ಞಾನಿಕ ಯೋಜನೆ ಒಂದು ಇರಬೇಕು. ನಾಳೆಯೇ ಅದು ಕಾರ್ಯಗತವಾಗುತ್ತದೆಂದು ನಾನು ಖಂಡಿತ ಹೇಳುವುದಿಲ್ಲ. ಅಂತಹ ಯೋಜನೆ ಇಲ್ಲದಿದ್ದರೆ 2000 ಇಸವಿ ಬರುವ ಸಂದರ್ಭದಲ್ಲಿ ಒಬ್ಬ ಮನುಷ್ಯನಿಗೆ ನೀರಿನ ಲಭ್ಯತೆ 15 ರಿಂದ 12 ಲೀಟರಗೆ ಇಳಿಯುತ್ತದೆ ಎಂದು ಸ್ಪಷ್ಟವಾಗಿ ಅವರ ವರದಿಯಲ್ಲಿ ಹೇಳಿದ್ದಾರೆ. ಇದನ್ನು ಕೂಡ ಸರ್ಕಾರ ಗಂಭೀರವಾಗಿ ಆಲೋಚಿಸಬೇಕಾಗಿದೆನ ಬೆಂಗಳೂರಿನಂತಹ ನಗರಕ್ಕೆ ನೀವು ಹೋಲಿಕೆ ಮಾಡಿ ನೋಡಿದರೆ ಕಾವೇರಿ 1,2,3ನೇ ಹಂತಗಳು ಆದುರು, 4ನೇ ಹಂತಕ್ಕೆ ಹೋಗುತ್ತಿದ್ದೇವೆ. ಸಾವಿರಾರು ಕೋಟಿ ತೆಗೆದುಕೊಂಡು ಬರುತ್ತಿದ್ದೇವೆ. ಆದರೆ ಇವತ್ತಿಗೂ ಬೆಂಗಳೂರಿನ ಜನಸಂಖ್ಯೆಗೆ ಅವಶ್ಯಕವಾದ ಕನಿಷ್ಟ ನೀರಿನ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಈಗ ನೀವು ವೈಟಫೀಲ್ಡ ಹತ್ತಿರ ಟೆಕ್ನಾಲಜಿ ಪಾರ್ಕ ಮಾಡುತ್ತಿದ್ದೀರಿ. ಬೆಂಗಳೂರಿಗೆ Silicon Valley, ಎಂಬುದು ಹೋಗಿ ಇಂಡಸ್ಟ್ರಿಯಲ್ ವ್ಯಾಲಿ ಎಂದು ಬರುತ್ತಿದೆ. ಬೆಂಗಳೂರು ನಮ್ಮ ರಾಜಧಾನಿ, ಅದರ ಬಗ್ಗೆ ನಮಗೆಲ್ಲರಿಗೂ ಕಾಳಜಿ ಇರಬೇಕಾಗಿದೆ. ಒಂದು ಕಾಲದಲ್ಲಿ ಜಗತ್ತಿನಲ್ಲಿ ಒಳ್ಳೆಯ ಹೆಸರು ಪಡೆದಿದ್ದ ಬೆಂಗಳೂರಿನ ಬಗ್ಗೆ ಇವತ್ತು ನಾವು ಆಲೋಚನೆ ಮಾಡಿದರೆ ಬಹಳ ಗಂಭೀರ ಪರಿಸ್ಥಿತಿ ಇದೆ. ಈ ಹೈಟೆಕ್ ಕೈಗಾರಿಕೆಗಳು ಬರುತ್ತಿದೆ, ಜನಸಂಖ್ಯೆ ದಿನವೂ ಹೆಚ್ಚಾಗುತ್ತಿದೆ ವಲಸೆ ಬರುತ್ತಾರೆ, ಕುಡಿಯುವ ನೀರಿನ, ವಸತಿ ಸಮಸ್ಯೆಗಳು ಬರುತ್ತವೆ. ಆದ್ದರಿಂದ ಕುಡಿಯುವ ನೀರಿನ ಬಗ್ಗೆ ವೈಜ್ಞಾನಿಕವಾದ ದೂರಾಲೋಚನೆ ಇರುವ ಒಂದು ದೀರ್ಘಕಾಲಿಕ ಯೋಜನೆಯು

ಗ್ರಾಮೀಣಾಭಿವೃದ್ಧಿಯಲ್ಲಿ ಮುಖ್ಯರಾದ ನೈರ್ಮಲ್ಯದ ಪ್ರಶ್ನೆ. ಇವತ್ತು ಹಳ್ಳಿಗಳಿಗೆ ಹೋದರೆ ಬಚ್ಚಲುನೀರು ಚರಂಡಿ ನೀರು ಹೋಗಲು ಜಾಗ ಇಲ್ಲ. ಅದೂ ಸಂದಿಯಲ್ಲೇ ಹೋಗುತ್ತದೆ. ಜನ-ದನಗಳೂ ಅಲ್ಲೇ ನಡೆದುಕೊಂಡು ಹೋಗಬೇಕು. ಅದಕ್ಕಾಗಿ ಹಳ್ಳಿಮಟ್ಟದಲ್ಲಿ ಡ್ರೈನ್ ಮಾಡುವುದು ಪಿಚಿಂಗ್ ಮಾಡುವ ಯೋಜನೆ ಒಂದಿದೆ. ಅದಕ್ಕೆ ಸರ್ಕಾರ ಒಂದು ಸರ್ವೆ ಮಾಡಬೇಕೆಂದು ನನ್ನ ಮನವಿ. ಯಾವ ರೀತಿ ಸರ್ವೆ ಮಾಡಬೇಕು ಎಂದರೆ 10 ವರ್ಷಗಳ ಸ್ಯಾಂಪಲತೆಗೆದುಕೊಂಡು, ಆ ಅವಧಿಯಲ್ಲಿ ಡ್ರೈನ್ ಪಿಚಿಂಗಗೆಂದು ಎಷ್ಟು ಹಣ ಖರ್ಚು ಮಾಡಿದೆ. ಅದರ ಉಪಯುಕ್ತತೆ ಎಷ್ಟಾಗಿದೆ ಇವತ್ತು? ಏಕೆಂದರೆ ಇದು ಬಹಳ ಮುಖ್ಯ ಸಮಸ್ಯೆ. ಸರ್ಕಾರ ಸಂತೋಷಪಟ್ಟುಕೊಳ್ಳುವುದೇನೆಂದರೆ ನೈರ್ಮಲ್ಯಕ್ಕಾಗಿ ನಾವು ಹಳ್ಳಿಗಳಿಗೆ ಇಷ್ಟೊಂದು ಹಣ ಖರ್ಚುಮಾಡಿದ್ದೇವೆ ಎಂದು ಬೆನ್ನುತಟ್ಟಿಕೊಳ್ಳುತ್ತದೆ. ವಾಸ್ತವವಾಗಿ ಏನಾಗಿದೆ ಎಂದರೆ, ಆ ಹಳ್ಳಿಯಲ್ಲಿ ಕೊಳವೆ ನೀರು ಇವತ್ತಿಗೂ ಹೋಗುತ್ತಿಲ್ಲ. ಜನ ಅದನ್ನು ತುಳಿದುಕೊಂಡೇ ಹೋಗಬೇಕು. ಮತ್ತೆ ಮಳೆಗಾಲ ಬಂದುಬಿಟ್ಟರೆ ಊರಿನೊಳಗಡೆ ಓಡಾಡಲು ಖಂಡಿತ ಸಾಧ್ಯವಿಲ್ಲ. ಆ ರೀತಿ ಪರಿಸ್ಥಿತಿ ಇದೆ, ಏಕೆ? ಇದು ಗ್ರಾಮೀಣಪ್ರದೇಶದ ನೈರ್ಮಲ್ಯದ ಪ್ರಶ್ನೆ. ಡ್ರೈನಿಲ್ಲ, ಪಿಚಿಂಗ್ ಇಲ್ಲ, ಊರಿನ ರಸ್ತೆಗಳ ಧೂಳು ಅರ್ಧ ಮನೆಯೊಳಗಿರುತ್ತದೆ. ಅವರ ಅಡಿಗೆ ಮನೆಯಲ್ಲರ್ಧ ಮಲಗಿಕೊಳ್ಳುವ ಕಡೆ ಅರ್ಧ ಇರುತ್ತದೆ. ಬಚ್ಚಲು ನೀರು ಅವರು ಓಡಾಡುವಾಗ ಅರ್ಧ ಮನೆಯಲ್ಲಿರುತ್ತದೆ. ಅರ್ಧ ರೋಡಲ್ಲಿರುತ್ತದೆ. ಮಳೆಗಾಲದಲ್ಲಂತೂ ಅವರು ಬದುಕಲಿಕ್ಕೇ ಸಾಧ್ಯವಿರದ ಪರಿಸ್ಥಿತಿ. ಇಂತಹ ಪರಿಸ್ಥಿತಿ ಇಟ್ಟುಕೊಂಡು ಗ್ರಾಮೀಣ ನೇರ್ಮಲ್ಯದ ಬಗ್ಗೆ ನಾವು ಮಾತನಾಡುವುದು ಹಾಸ್ಯವೆನಿಸುತ್ತದೆ. ಈಗ ಪಿಚಿಂಗ್ 100 ಮೀಟರಗೆ 5 ಸಾವಿರವೆಂದು ನಿಗದಿಮಾಡಿದ್ದಾರೆ. ಅದರಿಂದ 200 ಮೀಟರ್ ಮಾಡಬಹುದು ಆದರೆ ಕಂಟ್ರಾಕ್ಟರ್ ಇಂಜಿನಿಯರ್ ಮಹಾಶಯರಿದ್ದಾರಲ್ಲಿ ಇವರು 5 ಸಾವಿರ ರೂಪಾಯಿಗಳಿಗೆ 50 ಮೀಟರ್ ಕೂಡ ಮಾಡುವುದಿಲ್ಲ. ಇದು ಹಲವು ಶಾಸಕಮಿತ್ರರಿಗೆ ಅನುಭವವಾಗಿರುತ್ತದೆ. ಯಾರು ಬಂದರೂ ನನಗೊಂದು ಪಿಚಿಂಗ್ ಕೂಡಿಸಿ ಸಾರ್, ನನಗೊಂದು ಡ್ರೈನ್ ಕೊಡಿಸಿ ಸಾರ್ ಎಂದು ಬರುತ್ತಾರೆ, ಮನೆ ಕಟ್ಟಲಿಕ್ಕೆ ಹೆದರುತ್ತಾರೆ, ಅದರಲ್ಲಿ ಹೆಚ್ಚಿಗೆ ಹಣ ಉಳಿಯುವುದಿಲ್ಲ, ಲಾಭ ಇಲ್ಲ. ಪಿಚಿಂಗ್ ಡ್ರೈನನಲ್ಲಿ ಮಾತ್ರ ಬಹಳ ಲಾಭ ಇದೆ. ಒಂದು ಹಳ್ಳಿಗೆ ವಾಸ್ತವವಾಗಿ 5000 ರೂಪಾಯಿ ಪಿಚಿಂಗ್ ಕೆಲಸ ಕೊಟ್ಟರೆ 2 ಸಾವಿರಗಿಂತ ಹೆಚ್ಚು ಖರ್ಚಾಗುವುದಿಲ್ಲ. ಆದ್ದರಿಂದ ನೀವು ನಿರ್ದಿಷ್ಟವಾಗಿ ನಿಯಂತ್ರಣ ಮಾಡದೇ ಹೋದರೆ ಇನ್ನು 15 ವರ್ಷವಾದರೂ ಅದನ್ನು ಸರಿಪಡಿಸುವ ಸಾಧ್ಯತೆ ಇಲ್ಲ. ಇನ್ನೊಂದು ಪಿಚಿಂಗ್ ಕಲ್ಲುಬಂಡೆ ಉಪಯೋಗಿಸುತ್ತಾರೆ, ಆ ಚಪ್ಪಡಿಗಳಿಗೆ ಇಷ್ಟು ದಪ್ಪ ಇರಬೇಕು ಎಂದು ಅಳತೆ ಇಲ್ಲ. ಎಲ್ಲೆಲ್ಲಿರುವುದನ್ನೋ ತಂದು ಹಾಕಿರುತ್ತಾರೆ. ಇಲ್ಲವೆಂದರೆ ಇನ್ನು ಕೆಲವು ಮಹಾನುಭಾವರಿದ್ದಾರೆ, 20 ವರ್ಷಗಳ ಹಿಂದೆ ಪಿಚಿಂಗ್ ಹಾಕಿರುವ ಚಪ್ಪಡಿಗಳನ್ನೇ ಉಲ್ಟ ಮಾಡಿ ದುಡ್ಡು ಕಿತ್ತುಕೊಳ್ಳುವ ಜನರಿದ್ದಾರೆ. ಅದರಿಂದ ಗ್ರಾಮೀಣ ನೈರ್ಮಲ್ಯ ಖಂಡಿತ ಆಗುತ್ತಿಲ್ಲ. ಮೊದಲನೆಯದಾಗಿ ಈ ಡ್ರೈನೇಜ್ ಪದ್ಧತಿಯನ್ನು ಉತ್ತಮಪಡಿಸಬೇಕು. ಇಲ್ಲದಿದ್ದರೆ ಗ್ರಾಮೀಣ ನೈರ್ಮಲ್ಯ ಕಾಪಾಡಲು ಸಾಧ್ಯವಿಲ್ಲ. ಅದಕ್ಕೆ ಖರ್ಚುಮಾಡುತ್ತಿರುವ ಹಣ ಕೂಡ ಬಹಳ ಕಡಿಮೆ ಇದೆ. ಇನ್ನೊಂದು ಕಡೆ ಖರ್ಚಾಗುತ್ತಿರುವುದರಲ್ಲಿ ಅರ್ಧ ಪೋಲು ಆಗುತ್ತದೆ. ಇವೆರಡನ್ನೂ ಸರ್ಕಾರ ಗಮನಿಸಬೇಕಾಗುತ್ತದೆ. ಪಲಾಗುತ್ತಿರುವುದನ್ನು ಸರ್ಕಾರ ನಿಯಂತ್ರಣ

ಮಾಡದೇಹೋದರೆ ನೀವೆಷ್ಟು ಹಣ ಖರ್ಚುಮಾಡಿದರೂ ಅದರಿಂದ ಗ್ರಾಮೀಣ ನೈರ್ಮಲ್ಯ ಸಾಧಿಸಲು ಸಾಧ್ಯವಿಲ್ಲ. ಅಧ್ಯಕ್ಷರೇ, ಕುಡಿಯುವ ನೀರಿನ ಬಗ್ಗೆ ಆಗಲೇ ನಾನು ಹೇಳಿದ್ದೇನೆ, ಹಲವಾರು ಊರುಗಳಿಗೆ ಸ್ಮಶಾನವಿಲ್ಲ, ಇದರಿಂದೇನಾಗಿದೆ ಎಂದರೆ ಕೆಲವರು ಹೆಣವನ್ನು ಸುಡುತ್ತಾರೆ, ಕೆಲವರು ಹೂಳುತ್ತಾರೆ. ನಿರ್ದಿಷ್ಟ ಸ್ಮಶಾನಗಳಿಲ್ಲದ ಕಾರಣದಿಂದ ಶವಸಂಸ್ಕಾರ ಮಾಡುವುದರಲ್ಲಿ ಬಹಳ ಅನಾರೋಗ್ಯಕರ ಪರಿಸ್ಥಿತಿ ಹಳ್ಳಿಗಳಿಗೆ ಬರುತ್ತಿದೆ. ಯಾವುದಾದರೂ ಸರ್ಕಾರಿ ಭೂಮಿ ಸ್ಮಶಾನ ಭೂಮಿ ಹಳ್ಳಿಯಲ್ಲಿರುವ ಕಡೆ ಅದನ್ನು ಒತ್ತುವರಿ ಮಾಡಿ ಉತ್ತುಕೊಂಡುಬಿಟ್ಟಿದ್ದಾರೆ ಇದರಿಂದಾಗಿ ಸ್ಮಶಾನವಿಲ್ಲ, ಆ ಕಾರಣದಿಂದ ಗ್ರಾಮೀಣನೈರ್ಮಲ್ಯಕ್ಕೆ ಗಂಭೀರ ಹೊಡೆತ ಆಗುತ್ತಿದೆ. ಎರಡನೆಯದು, ಹಿಂದೆ ಸರ್ಕಾರದ ಧೋರಣೆಯೊಂದು ಇರುತ್ತಿತ್ತು, ಪ್ರತಿ ಹಳ್ಳಿಗೂ ಒಂದು ಗುಂಡು ತೋಪು ಇರುತ್ತಿತ್ತು, ಮರಗಿಡಗಳನ್ನು ಹಳ್ಳಿ ಸುತ್ತಮುತ್ತ ಬೆಳೆಸಲಿಕ್ಕೆ. ಅವು ಈಗ ಪತ್ತೇನೆ ಇಲ್ಲ. ಗುಂಡೂ ಇಲ್ಲ ತೋಪೂ ಇಲ್ಲ. ಎಲ್ಲ ಕಡಿದುಬಿಟ್ಟಿದ್ದಾರೆ, ಮರಗಳಂತೂ ಇಲ್ಲ, ಭೂಮಿ ಅಲ್ಲೇ ಇದೆ. ಅದನ್ನು ಉತ್ತ-ಕೊಂಡಿರುವವರೂ ಬಡವರಲ್ಲ, ಎಲ್ಲ ಸಾಹುಕಾರರೇ ಉತ್ತಕೊಂಡಿರುವುದು ಏಕೆಂದರೆ ಅದು ಊರಿನ ಪಕ್ಕದಲ್ಲಿರುತ್ತದೆ, ಜಮೀನಿನ ಪಕ್ಕದಲ್ಲಿರುತ್ತದೆ, ಅವರು ಒತ್ತುವರಿ ಮಾಡಿಕೊಂಡುಬಿಟ್ಟಿದ್ದಾರೆ. ಅ ಮರಗಳಲ್ಲಿದೆ ನೈರ್ಮಲ್ಯ ಪರಿಸರ ಕಾಪಾಡ ಬೇಕು ಎಂದರೆ ಮರಗಿಡಗಳನ್ನು ಬೆಳೆಸದೆ ಗ್ರಾಮವಾಗಲೀ ಪಟ್ಟಣನೈರ್ಮಲ್ಯವನ್ನಾಗಲೀ ಕಾಪಾಡಲು ಸಾಧ್ಯವಾಗುತ್ತದೆ ಎನ್ನುವುದು ನಿಜವಾಗಲೂ ಅದು ತಪ್ಪು, ಆ ಕಲ್ಪನೆಯೇ ತಪ್ಪು ಅದು ಸಾಧ್ಯವಿಲ್ಲ. ಅದಕ್ಕಾಗಿ ನಿರ್ದಿಷ್ಟ ಯೋಜನೆಯೊಂದನ್ನು ಸರ್ಕಾರ ರೂಪಿಸಬೇಕಾಗುತ್ತದೆ. ನಮ್ಮ ಗ್ರಾಮೀಮಾಭಿವೃದ್ಧಿ ಸಚಿವರಿಗೆ ಗೊತ್ತಿದೆ. ಚೈನಾದೇಶಕ್ಕೆ ಹೋಗಿಬಂದಿರುವ ಹಲವಾರು ಸ್ನೇಹಿತರು ಅವರಿಗೆ ಹೇಳಿರಬಹುದು. ನಾನೂ ಸೇರಿ ಹಲವಾರು ಸದಸ್ಯರು ಈ ಸದನದಲ್ಲೇ ಚೈನಾಕ್ಕೆ ಹೋಗಿಬಂದಿರುವವರು ಇದ್ದೇವೆ. ಇವತ್ತು ಇಡೀ ಚೈನಾ ದೇಶವೇ ಒಂದು ಪಾರ್ಕ ಇದ್ದ ಹಾಗೆ ಇದೆ. ಇದು ಅಲ್ಲಿಗೆ ಹೋಗಿರುವವರ ಗಮನಕ್ಕೆ ಬಂದಿರುತ್ತದೆ. ಇದು ಹೇಗೆ ಸಾಧ್ಯವಾಯಿತು? ಜಗತ್ತಿನಲ್ಲೇ ಅತಿ ಹಿಂದುಳಿದ ದೇಶವಾಗಿದ್ದ ಚೈನಾ.

ಅಧ್ಯಕ್ಷರು : ಬಹಳ ಜನ ಚೈನಾಕ್ಕೆ ಹೋಗಿ ವಾಪಸ್ ಬರುವಾಗ ಬ್ಯಾಂಕಾಕ್ ಮೇಲೆ ಬರುತ್ತಾರೆ. ಹೇಗಿತ್ತು ಅಂದರೆ ಚೈನಾ ನೆನಪೇ ಇರುವುದಿಲ್ಲ, ಬರೀ ಬ್ಯಾಂಕಾಗೇ ತುಂಬಿರುತ್ತದೆ.

6.00 ಪಿ.ಎಂ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳುತ್ತಿರುವುದು ಏಕೆಂದರೆ, ಯಾವುದೇ ಯೋಜನೆಯ ಬಗ್ಗೆ ನಾವು ದೀರ್ಘಕಾಲಿಕವಾದ ಯೋಜನೆಯನ್ನು ಹಾಕಿಕೊಳ್ಳೇಬೇಕಾಗುತ್ತದೆ. ಅದು ಇಲ್ಲದೇ ಹೋದರೆ ನೈರ್ಮಲ್ಯದ ಬಗ್ಗೆ ಮಾತನಾಡುವುದು, ಪರಿಸರದ ಬಗ್ಗೆ ಮಾತನಾಡುವುದು ಏನು ಇದೆ ಅದು ಪೂರ್ತಿಯಾಗಿ ಶುದ್ಧ ಬೆಗಳೆಯಾಗುತ್ತದೆ. ಖಂಡಿತವಾಗಿ ಪ್ರಾಮಾಣಿಕತೆ ಇರುವುದಿಲ್ಲ, ನಾವು ನಿರ್ದಿಷ್ಟ ಯೋಜನೆಯನ್ನು ರೂಪಿಸಬೇಕು. ಹಳ್ಳಿಗಳ ಸುತ್ತಲೂ ಮರಗಿಡಗಳನ್ನು ನಿರ್ಮಿಸಬೇಕು. ಸ್ಮಶಾನಕ್ಕೆ ನಿರ್ದಿಷ್ಟವಾದ ಜಾಗ ಇರಬೇಕು. ಕುಡಿಯುವ ನೀರಿನ ವ್ಯವಸ್ಥೆ ಇರಬೇಕು, ಒಳಚರಂಡಿ ವ್ಯವಸ್ಥೆ ಇರಬೇಕು ರಸ್ತೆಗಳು ಇರಬೇಕು. ಇವೆಲ್ಲವನ್ನೂ ಕನಿಷ್ಟವಾಗಿ ಹಳ್ಳಿಗಳಲ್ಲೇನಾದರೂ ಮಾಡಿದರೆ

ಆಗ ಗ್ರಾಮೀಣ ನೈರ್ಮಲ್ಯವನ್ನು ಕಾಪಾಡಲಿಕ್ಕೆ ಸಾಧ್ಯರಾಗುತ್ತದೆ. ಗ್ರಾಮೀಣ ನೈರ್ಮಲ್ಯದಲ್ಲಿ ಮುಖ್ಯವಾಗಿ ಸೇರಿರತಕ್ಕಂತಹ ಅಂಖ ಆರೋಗ್ಯದ ಪ್ರಶ್ನೆ. ಹಲವಾರು ರೋಗ ರುಜಿನಗಳು ಖಾಯಿಲೆಗಳು ಬರತಕ್ಕಂತಹ ಸಂದರ್ಭ ಹಿಂದುಳಿದಿರತಕ್ಕಂತಹಸ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಇರುತ್ತದೆ. ಅಲ್ಲಿಯ ಜನರಿಗೆ ಈ ಎಲ್ಲಾ ಕಾರಣಗಳಿಂದ ಹೆಚ್ಚು ಖಾಯಿಲೆಗಳು ಬರುತ್ತಿರತಕ್ಕಂಥಾದ್ದು ಆದರೆ ದುರದೃಷ್ಟವಶಾತ್ ಅಲ್ಲಿ ಆಸ್ಪತ್ರೆಗಳು ಇಲ್ಲ, ಆಸ್ಪತ್ರೆಗಳು ಇದ್ದರೆ ವೈದ್ಯರು ಇಲ್ಲ. ಡಾಕ್ಟರ್ ಮತ್ತು ಆಸ್ಪತ್ರೆಯನ್ನು ಸರಕಾರ ಮಂಜೂರು ಮಾಡಿದರೆ ಅಲ್ಲಿ ಕಟ್ಟಡ ಇರುವುದಿಲ್ಲ. ಅವರಿಬ್ಬರೂ ಇದ್ದರೆ, ನರ್ಸ, ಫ್ಯಾನ್ ಇರುವುದಿಲ್ಲ ಎಲ್ಲರೂ ಇದ್ದರೆ ಔಷಧಿಗಳು ಇರುವುದಿಲ್ಲ. ಇಂತಹ ಪರಿಸ್ಥಿತಿ ಅಲ್ಲಿ ಇದೆ. ಹಳ್ಳಿಗಳಲ್ಲಿ ಮೂಲಭೂತವಾಗಿ ಜೀವ ರಕ್ಷಕ ಔಷಧಿಗಳು ಸಿಗುತ್ತಿಲ್ಲ. ಇವೆಲ್ಲವೂ ಗ್ರಾಮೀಣ ನೈರ್ಮಲ್ಯಕ್ಕೆ ಹೊಡೆತ ಬೀಳತಕ್ಕಂತಹ ಅಂಶಗಳು ಎನ್ನುವುದನ್ನು ಸರಕಾರ ಗಮನದಲ್ಲಿಟ್ಟು ಇದೆಲ್ಲಕ್ಕೂ ನಿರ್ದಿಷ್ಟವಾದ ಯೋಚನೆಯನ್ನು ರೂಪಿಸದೇ ಹೋದರೆ ಅದು ಯಾವುದೇ ರೀತಿಯಲ್ಲಿ ಗ್ರಾಮೀಣ ನೈರ್ಮಲ್ಯಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಮತ್ತೆ ಮುಂದಿನ ವರ್ಷಕ್ಕೆ ಸರಕಾರ ಲೆಕ್ಕ ತೋರಿಸುತ್ತಾರೆ, ಗ್ರಾಮೀಣ ನೈರ್ಮಲ್ಯಕ್ಕೆ ಇಷ್ಟು ಹಣ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ನೀವು ಇಷ್ಟು ಖರ್ಚು ಮಾಡಿರುವುದು ನೀಜ. ಆದರೆ ಅದರಲ್ಲಿ ಎಷ್ಟು ಸದುಪಯೋಗವಾಗಿದೆ ಎಷ್ಟು ದುರುಪಯೋಗವಾಗಿದೆ ಎನ್ನುವುದು ಪ್ರಶ್ನೆ. ಈ ವ್ಯವಸ್ಥೆಯನ್ನು ನಾವೆಲ್ಲರೂ ನೋಡಿರತಕ್ಕಂಥಾದ್ದು. ಇಲ್ಲಿ ದುರುಪಯೋಗವಾಗತಕ್ಕಂತಹ ಅಂಶಗಳೇ ಹೆಚ್ಚು. ಸದುಪಯೋಗವಾಗತಕ್ಕಂತಹ ಅಂಶಗಳು ಬಹಳ ಕಡಿಮೆ ಇದೆ. ಇದರಲ್ಲಿ ಇನ್ನೊಂದು ವಿಚಾರ ಬೆಂಗಳೂರು ಅಭಿವೃದ್ಧಿ ಎಂದು ಇದೆ. ಬೆಂಗಳೂರು ಅಭಿವೃದ್ಧಿ ಬಗ್ಗೆ ಮಾತನಾಡುವುದು ಬಹಳ ಕಷ್ಟವಾಗುತ್ತದೆ. ಮಾನ್ಯ ರಾಜಣ್ಣನವರು ಮೊದಲೇ ಹೇಳಿದ್ದಾರೆ ಅದನ್ನು ನಮಗೆ ಬಿಟ್ಟು ಬಿಡಿ ಎಂದು.

ಬೆಂಗಳೂರು ಅಭಿವೃದ್ಧಿಯಂತೂ ಆಗಲಿಲ್ಲ ಇಲ್ಲಿ ಅವನಿತಿಯಾಗುತ್ತಿದೆ. ಎಲ್ಲಾ ವಿಧದಲ್ಲೂ ಇದು ಅವನತಿಯಾಗುತ್ತಿದೆ. ಯಾವುದೇ ಅಂಶದಲ್ಲಿ ತೆಗೆದುಕೊಂಡರೂ ಕೂಡ ಅವನಿತಿಯಾಗುತ್ತಿದೆ ಖಂಡಿತ ಅಭಿವೃದ್ಧಿಯಾಗುತ್ತಿಲ್ಲ. ಹಿಂದೆ ಬೆಂಗಳೂರಿನ ಬಗ್ಗೆ ಒಂದು ರೀತಿಯ ವ್ಯಾಮೋಹ ಇತ್ತು. ಪ್ರತಿಯೊಬ್ಬರಿಗೂ ಬೆಂಗಳೂರು ಬೆಂಗಳೂರು ಎಂದು ವ್ಯಾಮೋಹವಿತ್ತು. ಇವತ್ತು ಇದು ನರಕವಾಗಿದೆ. ಬೆಂಗಳೂರಿನಲ್ಲಿ ಸುತ್ತಮುತ್ತ ನಮಗೆ ಗಾಳಿಯಂತೂ ಸಿಗುವುದಿಲ್ಲ. ಬರೀ ಹೊಗೆಯನ್ನುಸ ನಾವು ಪಡೆಯಬೇಕಾಗಿದೆ. ಗಾಳಿ ಕೂಡ ಸಿಗುವುದಿಲ್ಲ, ಅಂತಹ ಪರಿಸ್ಥಿತಿ ಬಂದಿದೆ. ಇಂತಹ ಪರಿಸ್ಥಿತಿ ಏಕೆ ಬಂದಿದೆ ಎಂಬುದನ್ನು ವಿಚಾರ ಮಾಡಬೇಕು. ನೀವು ಯೋಜನೆ ಮಾಡುವಾಗ ಹೈಟೆಕ್ ಟೆಕ್ನಾಲಜಿ ಎಲ್ಲಾ ಬರುತ್ತಿದೆ, ಇತರ ಕೈಗಾರಿಕೆಗಳು ಬರುತ್ತಿವೆ, ಅದಕ್ಕೆಲ್ಲಾ ಏಕೆ ಬೆಂಗಳೂರನ್ನು ಆಯ್ಕೆ ಮಾಡಿಕೊಳ್ಳುತ್ತೀರಿ, ಬೇರೆ ಪ್ರದೇಶಗಳಿಗೆ ಹೋಗಿ. ಅಧಿಕಾರ ವಿಕೇಂದ್ರಿಕರಣ ಏಕೆ ಆಗಬಾರದು. ಬರೀ ಬೆಂಗಳೂರಿನಲ್ಲೇ ಅವರಿಗೆ ಆಗಬೇಕಾದೆ? ಬೆಂಗಳೂರಿನಲ್ಲಿ ಅವರಿಗೆ ಸೌಲಭ್ಯಗಳು ಇಲ್ಲವೆನ್ನುವ ವಾದ ಇದೆ. ಆ ಸೌಲಭ್ಯಗಳು ನಮಗೆ ಇಲ್ಲವೆಂದು ತಾನೇ ನೀವು ಅವರನ್ನು ಕರೆದುಕೊಂಡು ಬರುತ್ತಿರುವುದು. ಅವರು ಮಾಡುತ್ತಾರೆ. ಆ ರೀತಿ ಅನುಮತಿ ಕೊಡುವುದಾದರೆ ಹೈಟೆಕ್ ಟೆಕ್ನಾಲಜಿ ಮತ್ತು ವಿದೇಶಿ ಕಂಪೆನಿಗಳು ಬರುತ್ತಿರುವುದಕ್ಕೆ

ಯೋಜನೆ ಹಾಕಿಕೊಂಡಿದ್ದೀರಿ. ತಂದಂತಹ ಕಾರ್ಖಾನೆಗಳನ್ನು ಅಥವಾ ಇಲ್ಲಿ ಸ್ಥಾಪನೆ ಮಾಡತಕ್ಕಂತಹ ಕಾರ್ಖಾನೆಗಳನ್ನು ಪ್ರತಿಯೊಂದನ್ನು ಏಕೆ ಬೆಂಗಳೂರಿನಲ್ಲಿ ಮಾಡೋಣ ಎಂದು ಆಯ್ಕೆ ಮಾಡಿಕೊಳ್ಳುತ್ತೀರಿ. ಕರ್ನಾಟಕ ರಾಜ್ಯ ಬಹಳ ವಿಶಾಲವಾಗಿದೆ. ಇಡೀ ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಈ ಕಾರ್ಖಾನೆಗಳನ್ನು ನೀವೇಕೆ ಸ್ಥಳಾಂತರ ಮಾಡಬಾರದು. ಸ್ಥಳಾಂತರ ಮಾಡುವುದರಿಂದ ನಿಮ್ಮ ಹಲವಾರು ಸಮಸ್ಯೆಗಳು ಬಗೆಹರಿಯುತ್ತದೆ. ಪಟ್ಟಣ ಪ್ರದೇಶಗಳಲ್ಲಿ ವಲಸೆ ಬರುವುದು ತಪ್ಪುತ್ತದೆ. ವಸತಿ ಸಮಸ್ಯೆ ಬಹಳ ಕಡಿಮೆಯಾಗುತ್ತದೆ. ಅಭಿವೃದ್ಧಿ ದೃಷ್ಟಿಯಿಂದ ಕೂಡ ಬೇರೆ ಬೇರೆ ಕಡೆಗಳಲ್ಲಿ ಅಭಿವೃದ್ಧಿಯಾಗುತ್ತದೆ. ಇನ್ನೊಂದು ಕಡೆ ನೀವು ಪರಿಸರವನ್ನು ನಿಯಂತ್ರಣದಲ್ಲಿಡಲಿಕ್ಕೆ ಸಾಧ್ಯವಾಗುತ್ತದೆ. ಬೆಂಗಳೂರಿನಲ್ಲಿರತಕ್ಕಂತಹ ರಸ್ತೆಗಳ ವ್ಯವಸ್ಥೆ ನೋಡಿ. ಹಿಂದೆ ಒಂದು ಕಾಲದಲ್ಲಿ ಕೆಂಪೇಗೌಡ ರಸ್ತೆಯಲ್ಲಿ ಡಬಲ್ ವೇ ಟ್ರಾಫಿಕ್ ಇತ್ತು. ಆಗ ಆರಾವಾಗಿ ಹೋಗುತ್ತಿದ್ದರು ಈಗ ಒನವೇ ಮಾಡಿದ್ದರೂ ಕೂಡ ವಾಹನಗಳು ಸಲೀಸಾಗಿ ಓಡಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಬೆಂಗಳೂರು ಅಷ್ಟೊಂದು ಬೃಹದಾಕಾರವಾಗಿ ಬೆಳೆಯುತ್ತಿದೆ. ಬೆಳೆಯುತ್ತಿರತಕ್ಕಂತಹ ಬೆಂಗಳೂರಿನಗೆ ಸರಿ ಹೋಗತಕ್ಕಂತಹ ರೀತಿಯಲ್ಲಿ ರಸ್ತೆಗಳ ನಿರ್ಮಾಣ ಇಲ್ಲ. ನೀವು ರಿಂಗ್ ರಸ್ತೆಗಳನ್ನು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ರಿಂಗ್ ರೋಡಗಳನ್ನು ಮಾಡುವುದರಿಂದ ಯಾವ ರೀತಿ ಸಮಸ್ಯೆಯನ್ನು ಪರಿಹಾರ ಮಾಡುತ್ತೀರಿ? ಯಾವ ಯೋಜನೆಯನ್ನು ಹೇಗೆ ಕಾರ್ಯಗತ ಮಾಡುತ್ತೀರೋ, ಯಾವಾಗ ಅದು ಕಾರ್ಯಗತವಾಗುತ್ತದೆಯೇ ಅದು ಬೇರೆ ಪ್ರಶ್ನೆ. ನೀವು ಮಾಡಿದರೂ ಕೂಡ ಯಾವ ರೀತಿ ಸಂಚಾರವನ್ನು, ವಾಹನ ಸಂಚಾರವನ್ನು ನಿಯಂತ್ರಣ ಮಾಡಲಿಕ್ಕೆ ಟ್ರಾಫಿಕ್ ಕಂಟ್ರೋಲ್ ಮಾಡಲಿಕ್ಕೆ ಇದು ಎಷ್ಟು ಸಹಕಾರಿಯಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಬಿ.ಡಿ.ಎ ನವರು ನಗರಸಭೆಯವರು ಎಕ್ಸಟೆನಷನಗಳನ್ನು ಮಾಡುತ್ತಿದ್ದಾರೆ. ಬೆಂಗಳೂರು ಸುತ್ತ್ ಮುತ್ತು ಬೆಂಗಳೂರಿನ ಆಚೆ ಎಕ್ಸಟೆನಷನಗಳನ್ನು ಮಾಡುತ್ತಿದ್ದಾರೆ. ಆ ಎಕ್ಸಟೆನಷನಗಳನ್ನು ಮಾಡುತ್ತಿರತಕ್ಕಂತಹ ಸಂದರ್ಭದಲ್ಲಿ ಈಗಲೂ ಕೂಡ ನಗರಸಭೆಯವರು ಮತ್ತು ಬಿ.ಡಿ.ಎ. ಅವರಿಗೆ ರಸ್ತೆಗಳ ಬಗ್ಗೆ ಕಲ್ಪನೆಯೇ ಇಲ್ಲ. ಈ ರೀತಿ ರಸ್ತೆಗಳ ಬಗ್ಗೆ ಕಲ್ಪನೆ ಇಲ್ಲದೆ ಎಲ್ಲೋ ಒಂದು ಕಡೆ ಎಕ್ಸಟೆನಷನನಲ್ಲಿ ಬಿ.ಡಿ.ಎ. ಅವರು, ಖಾಸಗಿಯವರು ಭೂಮಿ ತೆಗೆದುಕೊಂಡು ನಿವೇಶನ ಡೆವಲಪ್ ಮಾಡುತ್ತಿದ್ದಾರೆ, ಎಕ್ಸಟೆನಷನಗಳನ್ನು ಡೆವಲಪ್ ಮಾಡುತ್ತಿದ್ದಾರೆ. ಕಾರ್ಪೊರೇಷನ್ ಹಾಗೂ ಬಿ.ಡಿ.ಎ. ಅವರು ಕೆಲವು ನಿರ್ಬಂಧವನ್ನು ಹಾಕಿದ್ದಾರೆ. ರಸ್ತೆ ಇಷ್ಟು ಇರಬೇಕು, ಪಾರ್ಕ ಇರಬೇಕು ಇಂಥಾದ್ದು ಇರಬೇಕೆಂದು ಲೈಸನ್ಸ ಕೊಡತಕ್ಕಂಥ ಸಂದರ್ಭದಲ್ಲಿ, ವ್ಯಾಲ್ಯುಯೇಷನ್ ಮಾಡತಕ್ಕಂತಹ ಸಂದರ್ಭಗಳಲ್ಲಿ ನಿಯಮಗಳು ಇದೆ. ಆದರೆ ಯಾವುದೇ ನಿಯಮಗಳು ಸರಿಯಾದ ರೀತಿಯಲ್ಲಿ ಪಾಲನೆಯಾಗುತ್ತಿಲ್ಲ. ಮತ್ತು ಆ ಯೋಜನೆ ಕೂಡ ಡಿಫೆಕ್ಟೀವ್ ಆಗಿದೆ. ಯಾವ ರೀತಿ ಡಿಫೆಕ್ಟ ಆಗಿದೆ ಅಂದರೆ, ರಸ್ತೆಗಳ ವಿಸ್ತಾರ ಅದು 50-100 ವರ್ಷಗಳ ಮುಂದಕ್ಕೆ ಆಲೋಚನೆ ಮಾಡಿದರೆ ಎಷ್ಟು ರಸ್ತೆಗಳು ಆಗ ಬೇಕಾಗುತ್ತದೆಂದು ಎನ್ನತಕ್ಕಂತಹ ಯೋಜನೆ ಮಾಡಬೇಕಾಗುತ್ತದೆ. ಆ ಯೋಜನೆ ಇಲ್ಲ. ನಿಮಗೆ ಲೈಸೆನ್ಸ ಕೊಡಲಿಕ್ಕೆ ಒಂದು ರಸ್ತೆ ಇದೆಯೇ, ಪಾರ್ಕ ಇದೆಯೇ ಎಂದು ವಿಚಾರ ಮಾಡಿ ಕೊಡುತ್ತಾರೆ. ಕ್ರಮೇಣ ಆ ಪಾರ್ಕ ಇಲ್ಲದೇ ಹೋಗುತ್ತದೆ. ರಸ್ತೆ ಕೂಡ ಇಲ್ಲದೇ ಹೋಗುತ್ತದೆ. ರಸ್ತೆಯನ್ನು 40-50 ಅಡಿ ಬಿಟ್ಟಿದ್ದರೆ ಆ ಪಕ್ಕ ಈ ಪಕ್ಕದಲ್ಲಿ ಎಲ್ಲಾ ಪೆಟ್ಟಿಗೆ

ಅಂಗಡಿಗಳು ಏಳುತ್ತವೆ. ಮತ್ತೆ ಅವರನ್ನು ಖಾಲಿ ಮಾಡಿಸಲಿಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಏಕೆಂದರೆ ಅವರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ನಾವೂ ನೀವೂ ಎಲ್ಲರೂ ಸೇರಿ ಬರತಕ್ಕಂಥಾದ್ದು. ನಾನೇನೂ ಅದಕ್ಕೆ ಹೊರತ್ತಿಲ್ಲ. ಅಂತಹ ಒಂದು ಪರಿಸ್ಥಿತಿ ಇದೆ. ಹೆಚ್ಚಿನ ಸಂದರ್ಭಗಳಲ್ಲಿ ಪಟ್ಟಣಗಳಲ್ಲಿ ಬೆಂಗಳೂರಿನಲ್ಲಿರತಕ್ಕಂತಹ ಸಂದರ್ಭಗಳಲ್ಲಿ ಇವತ್ತು ಫುಟ್ ಪಾತನಲ್ಲಿ ವ್ಯಾಪಾರ ಮಾಡುವವರು ಪೆಟ್ಟಿಗೆ ಅಂಗಡಿ ಇಟ್ಟಿರತಕ್ಕಂತಹವರು ಇವೆಲ್ಲವೂ ಕಂಬೈಂಡ್ ಆಗಿ ಬೆಂಗಳೂರು ಸಂಪೂರ್ಣವಾಗಿ ಯಾವುದೇ ಸಂದರ್ಭದಲ್ಲಿ ಅಭಿವೃದ್ಧಿಯಾಗಲಿಕ್ಕೆ ಸಾಧ್ಯತೆಯಾಗುತ್ತಿಲ್ಲ; ಅದರ ಬದಲಿಗೆ ಅವನತಿಯಾಗುತ್ತಿದೆ.

ಅದ್ದರಿಂದ ಬೆಂಗಳೂರು ನಗರದಲ್ಲಿ ಅಭಿವೃದ್ಧಿಯನ್ನು ಹೆಚ್ಚು ಮಾಡಬೇಕು, ಅದರ್ ಸ್ವಚ್ಛತೆಯನ್ನು ಕಾಪಾಡಬೇಕು, ಅದರ ನೈರ್ಮಲ್ಯವನ್ನು ಕಾಪಾಡಬೇಕೆಂಬ ಯೋಚನೆ ತಮಗೆ ಇದ್ದರೆ ಇನ್ನು ಮುಂದೆ ಬೆಂಗಳೂರಿನಲ್ಲಿ ಯಾವುದೇ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬಾರದು. ರಾಜ್ಯದ ಹೊರಗಡೆ ಬೇರೆ ಬೇರೆ ಕಡೆಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲಿಕ್ಕೆ ಸರಕಾರ ಕಾನೂನು ಮಾಡಬೇಕು. ಇಲ್ಲದೆ ಹೋದರೆ ಬೆಂಗಳೂರಿನಲ್ಲಿ ಇದನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಬೆಂಗಳೂರಿಗೆ ಬೇಕಾಗಿರತಕ್ಕಂತಹ ಕನಿಷ್ಠ ಅಭಿವೃದ್ಧಿ ಮಾಡಬೇಕು ಎಂದು ತಾವೇನು ಯೋಚನೆ ಮಾಡಿದ್ದೀರಿ ಅದು ಖಂಡಿತ ಸಾಧ್ಯವಿಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅದಕ್ಕೆ ಈಗಿನಿಂದಲೇ ಒಂದು ಯೋಜನೆ ತಯಾರಾಗಬೇಕಾಗಿದೆ. ಆ ಒಂದು ಯೋಜನೆಯನ್ನು ತಯಾರು ಮಾಡಿ ಅದಕ್ಕೆ ಎಲ್ಲ ರೀತಿಯಾದಂತಹ ಕಾನೂನು ತೊಡಕುಗಳು ಏನೇನು ಇದೆ ಆ ತೊಡಕುಗಳನ್ನೆಲ್ಲ ನಿವಾರಣೆ ಮಾಡಿ ಸರಕಾರ ಒಂದು ಕಾನೂನನ್ನು ಪ್ರತ್ಯೇಕವಾಗಿ ಮಾಡಿ ಬೆಂಗಳೂರನ್ನು ಅಭಿವೃದ್ಧಿ ಪಡಿಸಲಿಕ್ಕೆ ವಿಚಾರ ಮಾಡಬೇಕು. ಮತ್ತೆ ವಿದ್ಯಾ ಕೇಂದ್ರಗಳೂ ಕೂಡ ಬೆಂಗಳೂರಲ್ಲೇ ಎಲ್ಲಾ ಕಾನ್ಸಂಟ್ರೇಟ್ ಆಗತಕ್ಕಂತಹ ಅವಶ್ಯಕತೆ ಇಲ್ಲ. ಬೇರೆ ಬೇರೆ ಕಡೆ ವಿದ್ಯಾ ಕೇಂದ್ರಗಳನ್ನು ಸ್ಥಾಪನೆ ಮಾಡಿ ಏಕೆಂದರೆ ಇವತ್ತು ವಿದ್ಯಾರ್ಥಿಗಳ ಸಂಖ್ಯೆ ಬೆಂಗಳೂರಿನಲ್ಲಿ ದಿನೇದಿನೇ ವಿಪರೀತವಾಗಿ ಬೆಳೆಯುತ್ತಿದೆ.ಈ ರೀತಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಹಲವಾರು ಸಮಸ್ಯೆಗಳು ಇಲ್ಲಿ ಉದ್ಭವವಾಗುತ್ತಿವೆ. ಮತ್ತೆ ಅದರ ಪರಿಣಾಮಗಳನ್ನು ಕೂಡ ನಾವು ನೋಡುತ್ತಿದ್ದೇವೆ. ಒಂದು ಕಡೆ ಕಾರ್ಖಾನೆಗಳು, ಇನ್ನೊಂದು ಕಡೆ ವಿದ್ಯಾ ಸಂಸ್ಥೆಗಳು, ಇವು ಕೂಡ ಬೇರೆ ಬೇರೆ ಕಡೆಗೆ ವರ್ಗಾವಣೆ ಮಾಡುವ ಬಗ್ಗೆ ಸರಕಾರ ನಿರ್ದಿಷ್ಟವಾದ ಯೋಜನೆ ಹಾಕಬೇಕು. ಆ ರೀತಿಯಲ್ಲಿ ಬೆಂಗಳೂರು ನಗರವನ್ನು ಎಲ್ಲ ರೀತಿಯಲ್ಲಿ ಸರ್ವಾಂಗೀಣ ರೀತಿಯಲ್ಲಿ ಅಭಿವೃದ್ಧಿ ಪಡಿಸಲಿಕ್ಕೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ನನಗೆ ಅವಕಾಶ ಕೊಟ್ಟಂತ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಬಿ. ಮುನಿಯಪ್ಪ : ನಾನು ಇದರ ಬಗ್ಗೆ ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು : ನಾಳೆ ಈ ಡಿಮ್ಯಾಂಡ್ ಇರುವುದಿಲ್ಲ.

ಶ್ರೀ ಎಸ್. ರಾಜಣ್ಣ : ನಾನು ಕೂಡ ಮಾತನಾಡಬೇಕೆಂದು ತಮಗೆ ಲೆಟರ್ ಕೊಟ್ಟಿದ್ದೆ.

ಅಧ್ಯಕ್ಷರು : ನೀವು ಮಾತನಾಡುತ್ತೀರೆಂದು ನಿಮ್ಮ ವಿಪ್ ಕೊಡಬೇಕು. ಅವರು ತಮ್ಮ ಹೆಸರು ಬರೆದು ಕೊಟ್ಟಿಲ್ಲ.

ಶ್ರೀ ಎನ್. ರಾಜಣ್ಣ : ನಾನು ನೇರವಾಗಿ ತಮಗೆ ಕಾಗದ ಕೊಟ್ಟಿದ್ದೆ.

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ನೇರವಾಗಿ ಆ ರೀತಿ ಪತ್ರ ಕೊಡಲು ಬರುವುದಿಲ್ಲ. ನೀವು ಮಾತನಾಡುವುದಕ್ಕೆ ನಿಮ್ಮ ವಿಪ್ ಆದ ಮಾನ್ಯ ವರದೇಗೌಡರು ನಿಮ್ಮ ಹೆಸರು ಬರೆದು ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು : ಬಿಜೆಪಿಯವರು ಮತ್ತು ಕಾಂಗ್ರೆಸನವರು ಸಭೆಗೆ ಬಂದಿಲ್ಲ, ಅವರಿಬ್ಬರೂ ಒಂದಾಗಿದ್ದಾರಾ? ಬಿಜೆಪಿಯವರ ಜೊತೆಯಲ್ಲಿ ಕಾಂಗ್ರೆಸನವರೂ ಸೇರಿದ್ದಾರೆಯೇ?

ಅಧ್ಯಕ್ಷರು : ಯಾರು ಒಂದಾಗಿದ್ದಾರೋ ಯಾರು ಎರಡಾಗಿದ್ದಾರೋ ನನಗೇನು ಸಂಬಂಧ. ನನ್ನ ಕೆಲಸ ನಾನು ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಡಿಮ್ಯಾಂಡ್ ಇವತ್ತು ಇಲ್ಲಿ ಆಗುತ್ತಿದೆ. ನಾವು ಎಲ್ಲಾ ವಿಚಾರದ ಬಗ್ಗೆ ಇಲ್ಲಿ ಮಾತನಾಡಬೇಕಾಗುತ್ತದೆ. ದಯಮಾಡಿ ನಾಳೆಯೂ ಇದೇ ಸಬ್ಜೆಕ್ಟ ಮೇಲೆ ಮಾತನಾಡುವುದಕ್ಕೆ ನಮಗೆಲ್ಲ ಅವಕಾಶವನ್ನು ಕೊಡಿ. ನಾಳೆಯೇ ಪಾಸ್ ಮಾಡಲಿ ಎಂದು ಹೇಳುವುದು. ಸಭಾಧ್ಯಕ್ಷರು ಇವತ್ತು ಪಾಸ್ ಮಾಡುವ ಬದಲು ನಾಳೆ ಮಾಡಬಹುದಲ್ಲ!

ಅಧ್ಯಕ್ಷರು : ಇವತ್ತು ಪಾಸ್ ಆಗಬೇಕು. ಬೇಡಿಕೆಗಳು ಇವತ್ತು ಪಾಸ್ ಆಗಬೇಕು.

ಶ್ರೀ ಬಿ. ಮುನಿಯಪ್ಪ : ಬೆಳಿಗ್ಗೆಯೆಲ್ಲಾ ಈ ಕುರ್ಚಿ ಖಾಲಿ ಇರುವವರೆಲ್ಲ ಅದೆ ವೇಗದಲ್ಲಿದ್ದರು. ನಾವು ಮೇಲೆ ಬರಬೇಕು ಎಂದು ಧರಣ ಮಾಡಿದೆವು. ಈಗ ಜಿಂಕೆ ವೇಗದಲ್ಲಿ ಮುಗಿಸುತ್ತಿದ್ದೀರಿ. ನಾವು ರೆಡಿಮಾಡಿಕೊಂಡು ಮಾತನಾಡುವುದಕ್ಕೆ ಎಷ್ಟೋ ವಿಷಯಗಳನ್ನು ಶೇಖರಣೆ ಮಾಡಿದೆವು.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಾರ್, ನಮಗೆ ದಯವಿಟ್ಟು ಅವಕಾಶವನ್ನು ಕೊಡಬೇಕು. ಇಷ್ಟು ಜನ ವಿರೋಧ ಪಕ್ಷದವರು ಇಲ್ಲ ಎನ್ನುವ ಸಂದರ್ಭದಲ್ಲಿಯೂ ದಯಮಾಡಿ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕಲ್ಲ. ಈಗ ಬೆಂಗಳೂರು ನಗರದಲ್ಲಿ ಯಾರೂ ತಿರುಗಾಡುವುದಕ್ಕಾಗುವುದಿಲ್ಲ. ಎಲ್ಲಾ ವಾಹನಗಳೂ ಮೇಲೆ ಬರುತ್ತವೆ. ಈಗ ಆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಬೇಡಿಕೆಯನ್ನು ಇವತ್ತು ಪಾಸ್ ಮಾಡುವ ಬದಲು ನಾಳೆ ಮಾಡಬಹುದಲ್ಲ.

ಅಧ್ಯಕ್ಷರು : ನಿಮ್ಮದು ಯಾವುದೋ ಒಂದು ಸಾಂಸ್ಕೃತಿಕ ಕಾರ್ಯಕ್ರಮ ಇರಬೇಕಲ್ಲ ಈಗ.

(ನಗು)

ಒಬ್ಬ ಮಾನ್ಯ ಸದಸ್ಯರು : ನಾಳೆ ಪಾಸ್ ಮಾಡಬಹುದು.

ಅಧ್ಯಕ್ಷರು : ಇಲ್ಲ. ಇಲ್ಲ. ಇವತ್ತು ಡಿಮ್ಯಾಂಡ್ಸ ಪಾಸ್ ಮಾಡಬೇಕು. ನಿನ್ನೆಯೆಲ್ಲ ವ್ಯರ್ಥವಾಗಿದೆ.

ಶ್ರೀ ಎಂ. ವರದೇಗೌಡ : ಮಾನ್ಯ ರಾಜಣ್ಣ ಅವರಿಗೆ ಮಾತನಾಡುವುದಕ್ಕೆ ನಾಳೆ ಅವಕಾಶ ಕೊಡಿ.

ಅಧ್ಯಕ್ಷರು : ರಾಜಣ್ಣನವರಿಗೆ ತಾನೆ. ನಾಳೆ ಅವಕಾಶಕೊಡಿ ಎಂದು ವರದೇಗೌಡರು ಹೇಳಿದ್ದಾರೆ. ಅದು ಬೇರೆ ವಿಚಾರ, ಬೆಂಗಳೂರಿನದಲ್ಲ. ಬೆಂಗಳೂರಿನದು ಇವತ್ತು ಆಗಿಹೋಗುತ್ತದೆ. ಮತ್ತೆ ಅವರು ನಾಳೆ ಬಂದು ಬೆಂಗಳೂರಿನದು ಶುರುಮಾಡಿಯಾರು. ಈಗ ಮಾನ್ಯ ಮುನಿಯಪ್ಪನವರೇ, ತಮಗೆ ಎಷ್ಟು ಹೊತ್ತು ಸಮಯಬೇಕಾಗುತ್ತದೆ?

ಶ್ರೀ ಬಿ. ಮುನಿಯಪ್ಪ : ಒಂದು ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ಎನ್. ರಾಜಣ್ಣ : ನನಗೆ ಅರ್ಧ ಗಂಟೆ ಬೇಕಾಗುತ್ತದೆ. ರೂರಲ್ ಡೆವಲಪಮೆಂಟ್ ಮತ್ತು ಅರ್ಬನ್ ಡೆವಲೆಪಮೆಂಟ್ ಬಗ್ಗೆ ಮಾತನನಾಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಉಪನಾಯಕರನ್ನು ಕೇಳಬೇಕಾಗುತ್ತದೆ. ಚರ್ಚೆಗೆ ಬನ್ನಿ, ಚರ್ಚೆ ಮಾಡಿ ಬನ್ನಿ ಎಂದು ಅವರನ್ನು ಕರೆಯುತ್ತೀರಿ. ನಾವು ಚರ್ಚೆ ಮಾಡುವುದಕ್ಕೆ ಬಂದರೆ ನೀವು ಬೇಡ ಎಂದು ಹೇಳಿ ಈ ರೀತಿ ಮುಗಿಸಿದದರೆ ಹೇಗೆ?

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಇವತ್ತು ಇರುವ ಬೇಡಿಕೆಗಳು ಏನಿವೆ, ಅದನ್ನು ಇವತ್ತು ಮುಗಿಸೋಣ. ನಮ್ಮಸ್ನೇಹಿತರು ಮಾತನಾಡಬೇಕು ಎಂದು ಅವಸದರದಲ್ಲಿರುವವರು ನಾಳೆ ಇರುವ ಬೇಡಿಕೆಗಳ ಮೇಲೆ ಅವರು ಎಷ್ಟು ಹೊತ್ತು ಬೇಕಾಗಿದ್ದರೂ ಕೂಡ ಮಾತನಾಡಲಿ.

ಅಧ್ಯಕ್ಷರು : ಹೌದು, ಇದೊಂದು ಒಳ್ಳೆಯ ಐಡಿಯಾ.

ಶ್ರೀ ಸಿ. ಭೈರೇಗೌಡ : ಆ ರೀತಿ ಮಾಡಿದರೆ ಸೂಕ್ತ ಎಂದು ಅನಿಸುತ್ತದೆ. ಅದರಿಂದ ದಯವಿಟ್ಟು ಇವತ್ತು ಇರುವ ಬೇಡಿಕೆಗಳನ್ನು ಇವತ್ತೇ ಮತಕ್ಕೆ ಹಾಕುವ ಕೆಲಸವನ್ನು ತಾವು ದಯವಿಟ್ಟು ಮಾಡಬೇಕು ಎಂದು ನಾನು ವಿನಂತಿಸಿ ಕೊಳ್ಳುತ್ತೇನೆ.

ಅಧ್ಯಕ್ಷರು : ಹಾಗೆ ಮಾಡೋಣವೇ ಮುನಿಯಪ್ಪನವರೇ. ಮುನಿಯಪ್ಪನವರೇ, ನಾಳೆ ಬಹಳ ಪ್ರಮುಖವಾದ ಬೇಡಿಕೆಗಳಿದ್ದಾವೆ. ಅವುಗಳ ಮೇಲೆ ಚರ್ಚೆಯಲ್ಲಿ ತಾವು ಪಾಲ್ಗೊಳ್ಳಿ. ಈಗ ಉತ್ತರ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರುಗಳು ಸಲಹೆ ಮಾಡಿರುವ ಎಲ್ಲಾ ಸಲಹೆಗಳನ್ನು ಮತ್ತು ಸರ್ಕಾರದಿಂದ ಏನೇನು ಮಾರ್ಪಾಡು ಮಾಡಬೇಕು, ಅದು ಯಾವುದೇ ಇಲಾಖೆ ಇರಲಿ, ಅದನ್ನೆಲ್ಲ ಗಮನದಲ್ಲಿಟ್ಟುಕೊಂಡಿದ್ದೇವೆ. ತಮಗೆ ತಿಳಿದಿರುವ ಹಾಗೆ, ನಾವು ಪ್ರತಿಯೊಂದು ಇಲಾಖೆಯ ಬಗ್ಗೆಯೂ ವಿವರವಾದ ಉತ್ತರಗಳನ್ನು ಕೊಡುವುದಕ್ಕೆ ಏನೇನೋ ಕಾರಣಗಳು ಅಡ್ಡಿ ಬಂದು ಈ ರೀತಿ ಆಗಿದೆ. ಆದ್ದರಿಂದ ನಾನು ಈ ಬೇಡಿಕೆಗಳನ್ನು ಅಯಾ ಸಂಖ್ಯೆಯ ಪ್ರಕಾರ ತಾವು ಮತಕ್ಕೆ ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಕೇಳಿರುವ ಪ್ರಮುಖವಾದ ವಿಷಯಗಳಿಗಾದರೂ ಉತ್ತರ ಕೊಡದೇ ಹೋದರೆ ಎಲ್ಲಾ ಬೇಡಿಕೆಗಳನ್ನು ಒಂದೇ ಸಲ ಮತಕ್ಕೆ ಹಾಕಿಬಿಟ್ಟರೆ ಕಷ್ಟವಾಗುತ್ತದೆ. ಕನಿಷ್ಟ ಮುಖ್ಯವಾದಂಥ ವಿಷಯಗಳಿಗಾದರೂ ಉತ್ತರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಆಲ್ ರೈಟ್.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಶ್ರೀರಾಮರೆಡ್ಡಿಯವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಎರಡು ಮೂರು ಬಹಳ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಒಂದು, ಕಾರಯುಕ್ತವಾಗಿರುವ ನೀರನ್ನು ಕೊಡತಕ್ಕಂಥದ್ದು ಏನಿದೆ, ಅದನ್ನು ಸರಿಪಡಿಸಬೇಕು ಎಂದು ಹೇಳಿದ್ದಾರೆ. ಮತ್ತೆ ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ ನಾಳೆ ಅಕ್ಟೋಬರ್ 2ನೇ ತಾರೀಖಿನ ದಿವಸ ಒಂದು ಹೊಸ ಕಾರ್ಯಕ್ರಮದ ರೀತಿಯಲ್ಲಿ ಸುಮಾರು 24 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ತೆಗೆದು ಇಟ್ಟಿದ್ದೇವೆ. ಡೆನ್ಮಾರ್ಕ್ ಯೋಜನೆಗಳು ಅಲ್ಲದೇ ಅದರ ಮೂಲಕ ಆಗತಕ್ಕಂಥ ನೆರವಿನ ಯೋಜನೆ ಜೊತೆ ಜೊತೆಗೆ ವಿಶ್ವಬ್ಯಾಂಕಿನ ಯೋಜನೆಯ ಕೆಳಗೆ ಇಲ್ಲಿಯವರೆಗೆ ಏನು ನಿರ್ಬಂಧಗಳು ಇದ್ದವು, ಅವುಗಳನ್ನೆಲ್ಲ ಸಡಿಲ ಮಾಡಿ ಕೆಲಸ ಪ್ರಾರಂಭ ಮಾಡಲಿಕ್ಕೆ ಈಗಾಗಲೇ ಆಜ್ಞೆ ಕೊಟ್ಟಿದ್ದೇವೆ. ಎಲ್ಲಾ ಕಡೆ ವ್ಯಾಪಕವಾಗಿ ನಡೆಯುತ್ತದೆ. ಮತ್ತೆ ಈಗ ಡೆನ್ಮಾರ್ಕ್‌ನ ನೆರವಿನ ಯೋಜನೆಯ ಕೆಳಗೆ ಇಡೀ ಕೋಲಾರ ಜಿಲ್ಲೆಯನ್ನು ಇಡೀ ಬಿಜಾಪುರ ಜಿಲ್ಲೆಯನ್ನು ಹಾಗೂ ಇಡೀ ಚಿತ್ರದುರ್ಗ ಜಿಲ್ಲೆಯಲ್ಲಿರುವ ಎಲ್ಲಾ ತಾಲ್ಲೂಕುಗಳಿಗೆ ಯೋಜನೆಯ ಮೂಲಕವಾಗಿ ಅನುದಾನವನ್ನು ಕೊಡಬೇಕು, ಎಲ್ಲಾ ಗ್ರಾಮಗಳಿಗೆ ಪರಿಸರ ಮಾಲಿನ್ಯವನ್ನು ತಡೆಗಟ್ಟತಕ್ಕಂಥಾದ್ದು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ ಎಂದು ಹೇಳಿ ಅವರಿಗೆ ಕಳುಹಿಸಿರುವ ಯೋಜನೆಯ ಕೆಳಗೆ 300 ಕೋಟಿ ರೂಪಾಯಿಗಳ ಯೋಜನೆಯನ್ನು ಕಳುಹಿಸಿದ್ದೇವೆ. ಅದರಲ್ಲಿ 260 ಕೋಟಿ ರೂಪಾಯಿಗಳ ಯೋಜನೆಯನ್ನು ಕಳುಹಿಸಿದ್ದೇವೆ. ಅದರಲ್ಲಿ 260 ಕೋಟಿ ರೂಪಾಯಿಗಳು ಡೆನ್ಮಾರ್ಕ್ ರಾಷ್ಟ್ರಗಳಿಂದ ಬರುವ ನೆರವಿನ ಯೋಜನೆಯದು. ಉಳಿದಿರತಕ್ಕಂಥದ್ದು ನಮ್ಮ ರಾಜ್ಯಸರ್ಕಾರ ಪ್ರಧಾನಮಂತ್ರಿಗಳು ನಿಮ್ಮ ತಾಲ್ಲೂಕು ಬಾಗೇಪಲ್ಲಿ ತಾಲ್ಲೂಕಿನ ಮೆಟ್ಟಿಮೇರಿಗೆ ಹೋದಂಥ ಸಂದರ್ಭದಲ್ಲಿ ಈ ವಿಚಾರದಲ್ಲಿ ಅವರು ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಹೇಳುತ್ತಾರೆ. ಮತ್ತು ಪ್ರಾಯಶಃ ಅವರು ಒಪ್ಪಿಗೆಯನ್ನು ಕೊಡಬಹುದು ಎನ್ನುವ ವಿಶ್ವಾಸ ಸರ್ಕಾರಕ್ಕೆ ಇದೆ. ಇನ್ನು ಇದೇ ರೀತಿಯಾಗಿ ಗ್ರಾಮೀಣ ಪ್ರದೇಶದಲ್ಲಿರುವ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಕೂಡ ತಾವು ಸಲಹೆಗಳನ್ನು ಕೊಟ್ಟಿದ್ದೀರಿ. ಅವು ಬಹಳ ಯೋಗ್ಯವಾಗಿರತಕ್ಕಂಥ ಸಲಹೆಗಳು. ಬಹಳ ಮಹತ್ವವಾಗಿರುವ ಈ ಖಾತೆಯ ಬಗ್ಗೆ ವಿವರವನ್ನು ಈಗಾಗಲೇ ನಮ್ಮ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದಂತೆ ದೀರ್ಘವಾಗಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ಕುಡಿಯುವ ನೀರಿನ ವಿಷಯದಲ್ಲಿ ಮಾತ್ರ ಯಾವುದೇ ತರಹವಾಗಿರುವ ತೊಂದರೆಯಿಲ್ಲದಂತೆ ಇವತ್ತು ನಮ್ಮ ಹಣಕಾಸಿನ ಸಚಿವರು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಪ್ರತಿ ತ್ರೈಮಾಸಿಕ ಹಣವನ್ನು ಮುಂಗಡವಾಗಿಯೇ ಕೊಡುತ್ತಿದ್ದಾರೆ. ಕಳೆದ ಬಾರಿ ಕೂಡ. ಹೆಚ್ಚು ಹಣವನ್ನು ಕೊಟ್ಟಿದ್ದೆವು. ಈ ಬಾರಿ ಹೆಚ್ಚುವರಿ ಹಣ ಬೇಕಾದರೂ ಕೂಡ ಹಣವನ್ನು ನಾವು ಕೊಡುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತಾ ಈಗೇನು ತಮ್ಮ ಒಪ್ಪಿಗೆಯ ಮೂಲಕ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.96 ರಂದು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : Flouride ಬಗ್ಗೆ ಒಂದು ನಿರ್ದಿಷ್ಟವಾದಂಥ ನಿಲುವನ್ನು ಹೇಳಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : Flouride ವಿಷಯದಲ್ಲಿ ಈಗ ತಾವೇನು ಹೇಳಿದ್ದೀರಿ. 1.5 pass per million ಇರತಕ್ಕಂಥ ಅಂಶಗಳು ಇದ್ದರೆ Flouride ಅದನ್ನು ನಾವು defiderate ಮಾಡಲಿಕ್ಕೆ ಬೇಕಾಗಿರತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಇದು 15 ಜಿಲ್ಲೆಗಳಲ್ಲಿ ವ್ಯಾಪಕವಾಗಿರತಕ್ಕಂಥದ್ದು ಆಗಿರುವುದರಿಂದ ಅದನ್ನು ಗುರುತಿಸಿ, ರಾಜೀವ್ ಗಾಂಧಿ ಟೆಕ್ನಾಲಾಜಿಕಲ್ ಮೆಷಿನನಿಂದ ಕೂಡ ಹಣಕಾಸನ್ನು ತಂದು ಅದರಿಂದ ಕೂಡ ಈ ಸಮಸ್ಯೆಯನ್ನು ಬಗೆಹರಿಸುವಂಥ ಪ್ರಯತ್ನವನ್ನು ಕೂಡ ನಾವು ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಸಿ. ಚನ್ನಿಗಪ್ಪ : ಮನೆಗಳನ್ನು ಸೆಲೆಕ್ಟ ಮಾಡುವುದರಲ್ಲಿ ಲಾಟರಿ ಮುಖಾಂತರ ತೆಗೆಯುವುದು ಏನಿದೆ ಅದರ ಮೇಲೆ ಸ್ವಲ್ಪ ಸ್ಪಷ್ಟನೆಯನ್ನು ಕೊಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ದಯಮಾಡಿ ಆಶ್ರಯ ಕಮಿಟಿಯನ್ನು ನೀವು ರೆವ್ಯೂ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗೇನು ಲಾಟರಿಯ ವ್ಯವಸ್ಥೆ ಇದೆ ಅದರ ಬಗ್ಗೆ ಮಾನ್ಯ ವಸತಿ ಮಂತ್ರಿಗಳು ಆ ಬಗ್ಗೆ ಇರುವ ಒಂದು ಹೇಳಿಕೆಯನ್ನು ತಮಗೆ ಕೊಡುತ್ತಾರೆ ಎಂದು ಹೇಳಿ ನನಗೆ ಸಂಬಂಧಿಸಿದ ಬೇಡಿಕೆಯನ್ನು ಈ ಸಭೆಯು ಅಂಗೀಕರಿಸಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಮನೆಗಳ ವಿಷಯದಲ್ಲಿ ಲಾಟರಿ ಎಂದು ಹೇಳುತ್ತಿದ್ದಾರೆ. ಎಂಎಲ್‌ಎಗಳು ಲಾಟರಿ ಎತ್ತಿ ಬಿಡಲಿ. ಮಿನಿಸ್ಟರ್ ಕೂಡ ಲಾಟರಿಯನ್ನು ಹಾಕಲಿ.

ಅಧ್ಯಕ್ಷರು : ಬೇರೆಯವರು ನಮ್ಮನ್ನು ಆ ರೀತಿ ತಿಳಿದುಕೊಂಡರೆ ನಾವೇನು ಮಾಡುವುದಕ್ಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೇ, ವಸತಿ ಇಲಾಖೆಗೆ ಸಂಬಂಧಪಟ್ಟ ವಿಚಾರದಲ್ಲಿ ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಮಗೆ ಗೊತ್ತಿರುವಂತೆ, ಈ ರಾಜ್ಯದಲ್ಲಿ 1973-74ನೇ ಸಾಲಿನಲ್ಲಿ ಬಡವರಿಗೆ ಜನತಾ ನಿವೇಶನ ಮತ್ತು ಮನೆ ಕೊಡಬೇಕು ಎಂದು ಹೇಳಿ ಹಿಂದಿನ ಸರ್ಕಾರ ತೀರ್ಮಾನ ಮಾಡಿತ್ತು. ಅವತ್ತಿಂದ ಇವತ್ತಿನವರೆಗೆ 22 ವರ್ಷಗಳಲ್ಲಿ ಕೇವಲ 4,97,000 ಮನೆಗಳನ್ನು ಹಿಂದಿನ ಸರ್ಕಾರಗಳು ಕಟ್ಟಿಕೊಟ್ಟಿವೆ. ಆದರೆ ಈ ನಮ್ಮ ಸರ್ಕಾರ ಈ ವರ್ಷ ಅತ್ಯಂತ ಹೆಚ್ಚಿನ ಮನೆಗಳನ್ನು ನಾವು ರಾಜ್ಯದಲ್ಲಿರುವಂಥ ಬಡವರಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದರ ಪ್ರಕಾರ ಈಗಾಗಲೇ ತಮಗೆಲ್ಲಾ ಸದಸ್ಯರಿಗೆ ಗೊತ್ತಿರುವಂತೆ, ವೈಜ್ಞಾನಿಕವಾಗಿ ನಾವು ಒಳ್ಳೆಯ ಮೆಥಡಾಲಜಿಕಲ್ ಆಗಿ ಕೂಡ ಸಮರ್ಪಕವಾಗಿ ಈ ರಾಜ್ಯದಲ್ಲಿ ಪ್ರಪ್ರಥಮಬಾರಿಗೆ ಬಡವರಿಗೆ ಎಷ್ಟು ಜನರಿಗೆ ನಿವೇಶನ ಮತ್ತು ವಸತಿ ಇಲ್ಲ ಎನ್ನುವುದು ಒಂದು ಸರ್ವೆ ಕೂಡ ಮಾಡಿಸಿದ್ದೇವೆ. ಈಗ 11 ಸಾವಿರಕ್ಕಿಂತ ಕೆಳಗೆ ಯಾರು ಬಡತನ ರೇಖೆಗಿಂತ ಕೆಳಗಡೆ ಇದ್ದಾರೆ. ಆ ಜನರಿಗೆ ಒಟ್ಟು ಮನೆಗಳನ್ನು ಕೊಡಬೇಕು ಎಂದು ಹೇಳಿ ನಾವು ತೀರ್ಮಾನ

ಮಾಡಿದ್ದೇವೆ. ಈಗಾಗಲೇ ಸರ್ವೆ ಮಾಡಿದಂತೆ 190,34,000 ಜನರು ಈ ರಾಜ್ಯದಲ್ಲಿ ಬಡವರು ಇದ್ದಾರೆ, ನಿವೇಶನ ಮತ್ತು ವಸತಿ ಇಲ್ಲದಂಥ ಜನರು ಇದ್ದಾರೆ ಎಂದು ತಿಳಿದುಬಂದಿದೆ. ಆದರೆ ಇದೇ ವರ್ಷವೇ ಎಲ್ಲರಿಗೂ ಕೂಡ ಕೊಡುತ್ತೇವೆ ಎನ್ನುವುದು ಅಸಾಧ್ಯದ ಮಾತು. ಆದಾಗ್ಯೂ ಕೂಡ ಸರ್ಕಾರ ಈ ವರ್ಷ ಒಟ್ಟು 1,26,000 ಮನೆಗಳನ್ನು ಕೊಡಲಿಕ್ಕೆ ಇವತ್ತು ತೀರ್ಮಾನವನ್ನು ಮಾಡಿದ್ದೇವೆ. ಇದು ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಅವಾಸ್ ಯೋಜನೆಗಳಲ್ಲಿ ಬರುತ್ತದೆ ಮತ್ತು 1,75,000 ಸೈಟುಗಳನ್ನು ಗ್ರಾಮಾಂತರಪ್ರದೇಶಗಳಲ್ಲಿ ಕೊಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಮತ್ತು ನಗರಪ್ರದೇಶದಲ್ಲಿ ಈ ವರ್ಷ 25,000 ಮನೆಗಳನ್ನು ಮತ್ತು 78 ಸಾವಿರ ಸೈಟುಗಳನ್ನು ಕೊಡಬೇಕು ಎಂದು ಈ ತೀರ್ಮಾನವನ್ನು ಕೂಡ ಸರ್ಕಾರ ಇವತ್ತು ಮಾಡಿದೆ.

ಈ ವರ್ಷ ಈ ಮನೆಗಳನ್ನು ಮತ್ತು ನಿವೇಶನಗಳನ್ನು ವಿತರಣೆ ಮಾಡುತ್ತೇವೆ, ವಿತರಣೆ ಮಾಡಬೇಕಾದರೆ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ಯ ಆಕ್ಟ 1993ರ ಪ್ರಕಾರ ಸೆಕ್ಷನ್ ಮೂರು ಶೆಡ್ಯೂಲ್ ಒಂದು ಮತ್ತು ಶೆಡ್ಯೂಲ್ ಎರಡರ ಪ್ರಕಾರ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ ಬರುತ್ತದೆ. ಹೀಗಾಗಿ ಬಹಳಷ್ಟು ನಮ್ಮ ಶಾಸಕರು ಹಿಂದೆ ಇದ್ದಂತಹ ಸಮಿತಿಗಳನ್ನು ಮುಂದುವರೆಸಿಕೊಂಡು ಸೈಟ್ ಮತ್ತು ಮನೆಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ ಇವತ್ತು ಪಂಚಾಯತ್ ರಾಜ್ ಆಕ್ಟನ್ನು ನಾವು ಒಪ್ಪಿಕೊಂಡಿದ್ದರಿಂದ ಅದನ್ನು ಮಾಡುವುದಕ್ಕೆ ನಮಗೆ ಅವಕಾಶ ಇಲ್ಲ. ಅದಕ್ಕಾಗಿ ಇವತ್ತು ಏನು ಸಾಕಷ್ಟು ಸಂಖ್ಯೆಯಲ್ಲಿ....

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದಿರಿ, ಪಂಚಾಯತ್ ರಾಜ್ ಮಸೂದೆಯ ಪ್ರಕಾರ ಕಮಿಟಿಯನ್ನು ಕಳೆದ ಸಾರಿಯ ತರಹ, ಆಶ್ರಯ ಕಮಿಟಿಯ ತರಹ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತು ಹೇಳುತ್ತಿದ್ದೀರಿ. ಅಂದರೆ ಪಂಚಾಯತಿಗೋ ಅಥವಾ ತಾಲ್ಲೂಕು ಪಂಚಾಯಿತಿಗಳಿಗೋ ಕೊಡಬೇಕು ಅನ್ನುವ ಅರ್ಥದಲ್ಲಿ ಹೇಳುತ್ತಿದ್ದೀರಿ. ದಯಮಾಡಿ ಈಗ ಸಾಕಷ್ಟು ತಿದ್ದುಪಡಿಗಳನ್ನು ತರುತ್ತಾ ಇದ್ದೀರಿ. ನೀವು ತಿದ್ದುಪಡಿ ತರದೇ ಹೋದರೆ ರಾಜ್ಯ ಸರ್ಕಾರದ ದುಡ್ಡು ತೆಗೆದುಕೊಂಡು ಹೋಗಿ ನೀವು ಪ್ರತಿಯೊಂದು ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗೆ ಕೊಟ್ಟು ಬಿಟ್ಟರೆ ಮೂರು ಕಾಸಿನ ಮನೆಯನ್ನು ಕೊಡುವುದಕ್ಕೆ ನಿಮಗೆ ಶಕ್ತಿ ಇಲ್ಲದೆ ಹೋದರೆ ಶಾಸಕರು ಅವರ ಕ್ಷೇತ್ರಕ್ಕೆ ಹೇಗೆ ಹೋಗುತ್ತಾರೆ. ತಾವು ದಯಮಾಡಿ ತಿದ್ದುಪಡಿ ತರಬೇಕು. ಇದು ಎಲ್ಲ ಶಾಸಕರ ಅಭಿಪ್ರಾಯ ಇದೆ. ಈ ಕಡೆ ಪಕ್ಷದ ಶಾಸಕರ ಅಭಿಪ್ರಾಯ ಅಲ್ಲ, ಆ ಪಕ್ಷದ ಶಾಸಕರ ಅಭಿಪ್ರಾಯವೂ ಅದೇ ಆಗಿದೆ. ದಯಮಾಡಿ ಇದರ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನರಿದ್ದಾರೆ, ಈ ಜನರಲ್ಲಿ ಎಲ್ಲರಿಗೂ ಸೈಟಗಳನ್ನು ಮತ್ತು ಮನೆಗಳನ್ನು ಕೊಡುವುದಕ್ಕೆ ಅಸಾಧ್ಯ ಆಗಬಹುದು. ಗ್ರಾಮ ಸಭೆಗಳು ಒಪ್ಪಿಗೆ ಕೊಟ್ಟಂತಹ ಎಲ್ಲರಿಗೂ ಕೊಡುವುದಕ್ಕೆ ಅಸಾಧ್ಯ. ಇವು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂ ಪಂಚಾಯಿತಿಯಲ್ಲಿ ಅರ್ಹ ಫಲಾನುಭವಿಗಳನ್ನು ಸೆಲೆಕ್ಟ್ ಮಾಡುವಂತಹ ಸಂದರ್ಭದಲ್ಲಿ ಹಿಂದೆ ನಡೆದಂತೆ ಅವರಿಗೆ ಕೊಟ್ಟರು, ಆ ಪಕ್ಷದವರಿಗೆ ಕೊಟ್ಟರು, ಅವರ ಹಿಂದೆ ಇದ್ದಂತಹವರಿಗೆ ಕೊಟ್ಟರು

- ಇದೆಲ್ಲಾ ಬರಬಾರದು ಎಂದು ಹೇಳಿ ಸರ್ಕಾರ ಲಾಟರಿ ಮಾಡಬೇಕೆಂದು ತೀರ್ಮಾನ ಮಾಡಿತ್ತು. ಆದರೆ ಬಹಳಷ್ಟು ಕಡೆ....

ಮಾನ್ಯ ಸದಸ್ಯರು : ಲಾಟರಿ ಪದ್ಧತಿ ಇನ್ನು ಮಾಡಿಲ್ಲ, ನೀವು ಏತಕ್ಕೆ ಈ ಸಭೆಯಲ್ಲಿ ಹೇಳುತ್ತೀರಿ, ಇದು ಪುನರ್ ಪರಿಶೀಲನೆಯಲ್ಲಿದೆ.

ಶ್ರೀ ಬಸರವಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ತೀರ್ಮಾನ ಮಾಡಿತ್ತು. ಆದರೆ ರಾಜ್ಯದಲ್ಲಿ ಎಲ್ಲಾ ಕಡೆ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಸದಸ್ಯರುಗಳು, ಶಾಸಕರು ಬಡ ಜನರಿಗೆ ಅನ್ಯಾಯ ಆಗಬಹುದು ಅನ್ನುವ ಮಾತು ಬಂದಿದರಿಂದ ಈ ಲಾಟರಿ ವ್ಯವಸ್ಥೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಒಪ್ಪಿಕೊಂಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಇನ್ನೊಂದು ಸಾರಿ ಈ ಸಭೆಯಲ್ಲಿ ಹೇಳುತ್ತೇನೆ. ಕಳೆದ ವರ್ಷ ಆಶ್ರಯ ಯೋಜನೆಯಲ್ಲಿ ಪ್ರತಿಯೊಂದು ಮನೆಗೆ ಕೇವಲ 15,000 ರೂಪಾಯಿಗಳನ್ನು ಕೊಡುತ್ತಿದ್ದರು. ಅದರಲ್ಲಿ 10,000 ರೂಪಾಯಿ ಸಾಲ, 5,000 ರೂಪಾಯಿ ಸಬ್ಸಿಡಿ ಇತ್ತು. ಆದರೆ ಈ ವರ್ಷ ನಮ್ಮ ಸರ್ಕಾರ 20,000 ರೂಪಾಯಿಗಳಿಗೆ ಏರಿಸಿ ಅದರಲ್ಲಿ 10,000 ರೂಪಾಯಿ ಲೋನ್ ಕಾಂಪೊನೆಂಟ್ 10,000 ರೂಪಾಯಿ ಸಬ್ಸಿಡಿಯನ್ನು ನಾವು ಒದಗಿಸಿ ಕೊಟ್ಟಿದ್ದೇವೆ. ಮತ್ತು ಅದರ ಜೊತೆಗೆ ಆಶ್ರಯ ಯೋಜನೆಯಲ್ಲಿ ಹರಿಜನರಿಗೆ 10,000 ರೂಪಾಯಿ ಲೋನ್ ಪಾರ್ಟ ಉಳಿದಿತ್ತು. ಇದನ್ನು 23 ಪರ್ಸೆಂಟ್ ನಾವು ಆಶ್ರಯ ಯೋಜನೆಯಲ್ಲಿ ಎಸ್.ಸಿ ಎಸ್.ಟಿ.ಜನರಿಗೆ ಕೊಡುತ್ತಿದ್ದೇವು. ಅದರಲ್ಲಿ ಅವರಿಗೂ ಸಹ 10,000 ರೂಪಾಯಿ ಲೋನ್ ಪಾರ್ಟ ಇತ್ತು. ಆದರೆ ನಮ್ಮ ಸರ್ಕಾರ 20,000 ರೂಪಾಯಿ ಲೋನ್ ಸಬ್ಸಿಡಿ ಎಸ್.ಸಿ ಮತ್ತು ಎಸ್.ಟಿ. ಜನರಿಗೆ ಕೊಡುತ್ತಿದೆ. ಮತ್ತು ಅದರ.ಜೊತೆಗೆ ಅಂಬೇಡ್ಕರ್ ಯೋಜನೆಯಲ್ಲಿ 25,000 ಗ್ರಾಮಾಭಿವೃದ್ಧಿ ಇಲಾಖೆಯಿಂದ ಈ ಸಾರಿ ಇಂದಿರಾ ಆವಾಸ್ ಯೋಜನೆಯಲ್ಲಿ 26,000 ಮನೆಗಳನ್ನು ಕಟ್ಟುವುದಕ್ಕೆ ಈ ವರ್ಷ ಸರ್ಕಾರ ವ್ಯವಸ್ಥೆಯನ್ನು ಮಾಡಿದೆ. ಹೀಗೆ ಒಟ್ಟು ಒಂದು ಲಕ್ಷ 26,000 ಮನೆಗಳನ್ನಮು ಮಾಡುತ್ತಿದ್ದೇವೆ. ಮತ್ತು ಇಂದಿರಾ ಅವಾಸ ಯೋಜನೆಯಲ್ಲಿಯೂ ಕೂಡ ಹರಿಜನರಿಗೆ ಏನು ಸಬ್ಸಿಡಿ 5,000 ರೂಪಾಯಿ ಕೊಡಬೇಕಾಗುತ್ತದೆ ಅದನ್ನೂ ಕೂಡ ರಾಜ್ಯ ಸರ್ಕಾರವೇ ಒದಗಿಸಿ ಕೊಡುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಮತ್ತು ನಗರ ಪ್ರದೇಶಗಳಲ್ಲಿ ಕಳೆದ ವರ್ಷ ಒಂದು ಮನೆ ನಿರ್ಮಾಣ ಮಾಡುವುದಕ್ಕೆ 16,000 ರೂಪಾಯಿ ಇತ್ತು. ಈಗ 24,500 ರವರೆಗೆ ನಾವು ಏರಿಸಿದ್ದೇವೆ. ನಗರ ಪ್ರದೇಶಗಳಲ್ಲಿ ಇದರಲ್ಲಿ 25,000 ಮನೆಗಳನ್ನು ರಾಜ್ಯಾದ್ಯಂತ ಈ ವರ್ಷ ನಾವು ತೆಗೆದುಕೊಳ್ಳುತ್ತಿದ್ದೇವೆ. ಮತ್ತು 78,000 ಸೈಟಗಳನ್ನು ನಾವು ನಗರ ಪ್ರದೇಶಗಳಲ್ಲಿ ಜನರಿಗೆ ಉಚಿತವಾಗಿ ಕೊಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮತ್ತು ಈ ಯೋಜನೆಯನ್ನು ಹಿಂದೆ ಗುತ್ತಿಗೆದಾರರಿಗೆ ಗುತ್ತಿಗೆ ಕೊಟ್ಟು ಮಾಡುತ್ತಿದ್ದರು. ಆದರೆ ಈ ವರ್ಷ ಆ ಗುತ್ತಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಿ ಯಾರು ಫಲಾನುಭವಿಗಳು ಇದ್ದಾರೆ ಫಲಾನುಭವಿಗಳೇ ಮನೆಗಳನ್ನು ಕಟ್ಟಬೇಕು, ಅವರೇ ಉಸ್ತುವಾರಿ ನೋಡಿಕೊಳ್ಳಬೇಕೆಂದು ಹೇಳಿ ಕಾನೂನಿಗೆ ಒಂದು ತಿದ್ದುಪಡಿಯನ್ನು

ತಂದಿದ್ದೇವೆ. ಮತ್ತು ಅದರ ಜೊತೆಗೆ ಇಡೀ ಜಿಲ್ಲೆಯಲ್ಲಿ ಒಂದೇ ಕನಸ್ಟ್ರಕ್ಷನ್ ಏಜೆನ್ಸಿ ಇರಬೇಕು. ಏಕೆಂದರೆ ಹೋದ ಸಾರಿ ಲ್ಯಾಂಡ್ ಆರ್ಮಿ 20 ಮನೆ, ಬಿ.ಡಿ.ಒ. 20 ಮನೆ ಹೀಗೆ ಕೊಟ್ಟಿದ್ದರು. ಹೀಗೆ ಒಂದು ಜಿಲ್ಲೆಯಲ್ಲಿ ಒಂದೇ ಸಿಂಗಲ್ ಏಜೆನ್ಸಿ ಮಾಡುವುದರಿಂದ ಉಸ್ತುವಾರಿ ನೋಡುವುದಕ್ಕೆ ಅನುಕೂಲವಾಗುತ್ತದೆ. ಹಾಗಾಗಿ ಆ ಕೆಲಸವನ್ನು ಜಿಲ್ಲಾ ಪಂಚಾಯಿತಿ ಮೂಲಕ ನಾವು ಮಾಡುತ್ತಿದ್ದೇವೆ. ಮತ್ತು ಆರು ಜಿಲ್ಲೆಗಳಲ್ಲಿ ಭೂ ಸೇನಾ ನಿಗಮದವರು ಮಾಡುತ್ತಿದ್ದಾರೆ. ಬೇರೆ ಬೇರೆ ಜಿಲ್ಲೆ ಜಿಲ್ಲಾ ಪಂಚಾಯಿತಿಯವರು ಮಾಡಿ ಈ ಮನೆಗಳನ್ನು ಈ ವರ್ಷವೇ ಏನು ಒಂದು ಲಕ್ಷ 26 ಸಾವಿರ ಮನೆ ಇದೆ ಇದಕ್ಕೆ ಸಂಪೂರ್ಣ ಹಣವನ್ನು ಕೂಡ ನಾವು ಬಿಡುಗಡೆ ಮಾಡುತ್ತೇವೆ. ಮತ್ತು ಈ ವಿಷಯವನ್ನು ವಸತಿ ಇಲಾಖೆಯಿಂದ ಮಂಥ್ಲೀ ಮೀಟಿಂಗ್ ರಿವ್ಯೂಗೆ ತಂದಿದ್ದೇವೆ. ಮಂಥ್ಲೀ ಮೀಟಿಂಗ್ ರೆವ್ಯೂ ಇದುವರೆಗೆ ಇರಲಿಲ್ಲ. ಈಗ ಮಂಥ್ಲೀ ಮೀಟಿಂಗ್ ರಿವ್ಯೂಗೆ ತಂದಿರುವುದರಿಂದ ಪ್ರತಿ ತಿಂಗಳು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಇದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಉನ್ನತ ಮಟ್ಟದ ಸಭೆಯನ್ನು ಮಾಡಿ ಮಂಥ್ಲೀ ಮೀಟಿಂಗ್ ರಿವ್ಯೂವನ್ನು ನಾವು ಮಾಡುತ್ತಿದ್ದೇವೆ. ಆದ್ದರಿಂದ ಈ ವರ್ಷವವೇ ಸಂಪೂರ್ಣ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಬೇಡಿಕೆಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖೇನ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ : ಮನೆ ಕೊಡತಕ್ಕಂತಹ ವ್ಯವಸ್ಥೆ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಸಮಿತಿಗೆ ಕೊಡತಕ್ಕಂತಹ ಮಾತನ್ನು ಏನು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ದಯಮಾಡಿ ಅದನ್ನು ತಿದ್ದುಪಡಿ ಮಾಡಿ; ಆಶ್ರಯ ಸಮಿತಿ ಮಾಡಬೇಕು ಎನ್ನತಕ್ಕಂತಹ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ನಮಗೆ ಎರಡು-ಮೂರು ವಿಷಯಗಳ ಬಗ್ಗೆ ಸ್ಪಷ್ಟನೆ ಬೇಕಾಗಿದೆ. ಎರಡು-ಮೂರು ವಿಷಯಗಳ ಬಗ್ಗೆ ಸ್ಪಷ್ಟನೆ ಉತ್ತರ ಅವರಿಂದ ಬರಲಿಲ್ಲ. ಒಂದು ಆಶ್ರಯ ಯೋಜನೆ ಕಮಿಟಿ ಮಾಡಬೇಕು. ಅದಕ್ಕೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಅನ್ನುವುದು ನಮ್ಮ ಒತ್ತಾಯ. ಎರಡನೆಯದು ನಾನು ಒಂದು ಸಲಹೆ ಕೊಟ್ಟೆ ಏನೆಂದರೆ, ಇವತ್ತು ಮನೆಗಳನ್ನು ಕಟ್ಟತಕ್ಕಂತಹ ಸಂದರ್ಭದಲ್ಲಿ ನಿವೇಶನದ ಅಳತೆಯನ್ನು ಹೆಚ್ಚು ಮಾಡಬೇಕು. 30X40 ಅಡಿ ಇರತಕ್ಕಂತಹ ನಿವೇಶನವನ್ನು ಕೊಡಬೇಕು ಮತ್ತು ಲ್ಯಾವೆಟರಿ ಬಾತ್ ರೂಮ್ ಅದರಲ್ಲಿ ಕಟ್ಟತಕ್ಕಂತಹ ವ್ಯವಸ್ಥೆ ಆಗಬೇಕು ಎನ್ನತಕ್ಕಂತಹ ವಿಷಯವನ್ನು ನಾನು ಪ್ರಸ್ತಾಪ ಮಾಡಿದೆ. ಅದು ಒಂದಕ್ಕೆ ಸ್ಪಷ್ಟವಾದ ಉತ್ತರ ನಮಗೆ ಅವರಿಂದ ಸಿಕ್ಕಲಿಲ್ಲ. ಮತ್ತು ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ನಿವೇಶನಗಳನ್ನು ಪಡೆಯುವುದಕ್ಕೆ ಸರ್ಕಾರ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಏನು 25,000 ರೂಪಾಯಿ ನಿಗಧಿ ಮಾಡಿದ್ದಾರೆ ಆ 25,000 ರೂಪಾಯಿಗಳಿಗೆ ಈಗ ಎಕರೆ ಭೂಮಿ ಹಳ್ಳಿಗಳಲ್ಲಿ ಸಿಗುವುದಿಲ್ಲ. ಅದಕ್ಕೆ ರೇಟ್ ಹೆಚ್ಚು ಮಾಡಿದರೆ ಮಾತ್ರ ನಿಮಗೆ ನಿವೇಶನಗಳನ್ನು ಕೊಳ್ಳುವುದಕ್ಕೆ ಹೆಚ್ಚು ಜಮೀನು ಸಿಗುತ್ತದೆ, ಇಲ್ಲದೆ ಇದ್ದರೆ ಸಿಗುವುದಿಲ್ಲ ಎನ್ನುವ ಮೂರು ಅಂಶಗಳನ್ನು

ನಾನು ಸ್ಪಷ್ಟವಾಗಿ ಹೇಳಿದೆ. ಇದಕ್ಕೆ ಉತ್ತರ ಇಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾವು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಆಶ್ರಯ ಯೋಜನೆ ಕಮಿಟಿಯನ್ನು ಮಾಡಿ ಶಾಸಕರನ್ನು ಅದರ ಅಧ್ಯಕ್ಷರನ್ನಾಗಿ ಮಾಡಬೇಕು, ಇಲ್ಲದೇ ಇದ್ದರೆ ತಾಲ್ಲೂಕು ಮಟ್ಟದಲ್ಲಿ ಶಾಸಕರಿಗೆ ಯಾವುದೇ ರೀತಿಯಾದ ಜವಾಬ್ದಾರಿ ಇರುವುದಿಲ್ಲ. ತಾವೂ ಕೂಡ ಅಧಿಕಾರ ಪಕ್ಷದಲ್ಲಿರತಕ್ಕಂತಹ ಶಾಸಕ ಮಿತ್ರರೂ ಆಲೋಚನೆ ಮಾಡಬೇಕು. ನಿಮ್ಮ ಹತ್ತಿರ ಯಾರಾದರೂ ಒಂದು ಮನೆ ಕೊಡಿ ಎಂದು ಬಂದರೆ, ನೀವು ತಾಲ್ಲೂಕು ಪಂಚಾಯಿತಿಯವರನ್ನೋ, ಗ್ರಾಮ ಪಂಚಾಯಿತಿಯವರನ್ನೋ ತೋರಿಸಬೇಕಾಗುತ್ತದೆ. ನಿಮಗೆ ಯಾವ ರೀತಿ ಪರಿಸ್ಥಿತಿ ಬರುತ್ತದೆ ಎಂದು ನೀವು ಆಲೋಚನೆ ಮಾಡಿ. ಅದನ್ನು ನೀವು ಗಂಭೀರವಾಗಿ ಆಲೋಚನೆ ಮಾಡಬೇಕು. ಸರ್ಕಾರ ಆ ಕಾನೂನಿಗೆ ಹಲವಾರು ತಿದ್ದುಪಡಿಗಳನ್ನು ತಂದಿದೆ, ಈಗ ಪಕ್ಷಾಂತರ ನಿಶೇಧ ಕಾಯಿದೆಗೆ ತಿದ್ದುಪಡಿ ತಂದಿರಿ, ಇನ್ನು ಒಂದು ತಿದ್ದುಪಡಿಯನ್ನು ತಂದಿರಿ. ಪಂಚಾಯಿತಿ ಆಕ್ಟಿಗೆ ಏಕೆ ತಿದ್ದುಪಡಿಯನ್ನು ತರಬಾರದು. ತಿದ್ದುಪಡಿಯನ್ನು ತಂದು ಮಾಡಿ ಏನೂ ದೊಡ್ಡ ತೊಂದರೆಯಾಗುವುದಿಲ್ಲ. ಗ್ರಾಮ ಪಂಚಾಯಿತಿಯವರಿಗೆ, ತಾಲ್ಲೂಕು ಪಂಚಾಯಿತಿಯವರಿಗೆ ಹಲವಾರು ಕೆಲಸಗಳಿವೆ, ಅವರಿಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಆಕ್ಷನ್ ಪ್ಲಾನ್ ಇದೆ, ರೋಸಗಾರ್ ಯೋಜನೆ ಇದೆ, ಬೇರೆ ಬೇರೆ ಕೆಲಸಗಳನ್ನು ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ನೇರವಾಗಿ ದುಡ್ಡು ಹೋಗುತ್ತದೆ ಅವರಿಗೆ ಎಲ್ಲಾ ವ್ಯವಸ್ಥೆ ಇದೆ. ಕನಿಷ್ಟ ಶಾಸಕರಿಗೆ ಮನೆ ಮತ್ತು ನಿವೇಶನ ಹಂಚತಕ್ಕಂತಹ ಒಂದು ಕೆಲಸ, ಭೂಮಿ ಹಂಚತಕ್ಕಂತಹ ಕೆಲಸ ಕೂಡ ಇಲ್ಲದೆ ಹೋದರೆ ಅದು ಖಂಡಿತವಾಗಿಯೂ ಪ್ರಜಾ ಪ್ರಭುತ್ವದಲ್ಲಿ ಶಾಸಕರಿಗೆ ಆಗತಕ್ಕಂತಹ ಅವಮಾನ. ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡದೆ ಇದ್ದರೆ ನಾವೂ ಕೂಡ ಪ್ರತಿಭಟನೆ ಮಾಡಿ ಈ ಸಭೆಯಲ್ಲಿ ಧರಣಿ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ.

Sri S. Rajendran : What is that policy in not making MLA's as the Chairman of Ashraya Committee. If a poor man request for 20,000 rupees we are not eligible to recommend. What is the reason sitting here as MLA. ದಯವಿಟ್ಟು ಸರ್ಕಾರದವರು ನಮ್ಮ ಬಗ್ಗೆ ಪರಿಶೀಲನೆ ಮಾಡಿ ಶಾಸಕರಿಗೆ ನೀವು ಛೇರ್ಮನಶಿಫ ಏನೂ ಕೊಡುವುದಿಲ್ಲ, ಡಿಸ್ಟ್ರಿಕ್ಟ ಕಮಿಷನರ್ ಏನೂ ಕೊಡುವುದಿಲ್ಲ. At least you consider us in the Ashraya Committee to work as Chairman so that we can have some holding, we can just mingle with the public. If you are not considering, this is wounding us, I therefore, appeal to the Government to consider us to work as Chairman in various Committees.

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಮೊದಲು ಆಶ್ರಯ ಕಮಿಟಿ ಏನು ಇತ್ತು ಅದಕ್ಕೆ ಶಾಸಕರು ಅಧ್ಯಕ್ಷರಾಗುವ ರೀತಿಯಲ್ಲಿ ಕಾನೂನಿನ ತೊಡಕು ಇತ್ತು ಎಂದರೆ ಅದನ್ನು ತಿದ್ದುಪಡಿ ಮಾಡಿ ಎನ್ನುವುದು ಬಹು ಪಾಲು ಶಾಸಕರ ಅಭಿಪ್ರಾಯವಾಗಿರುತ್ತದೆ. ಈಗಾಗಲೇ ಗೆಳೆಯರು ಹೇಳಿದ್ದಾರೆ, ಅದನ್ನೇ ನಾನು ಮತ್ತೆ ಮತ್ತೆ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಅದಕ್ಕೆ ದಯವಿಟ್ಟು ತಿದ್ದುಪಡಿ ಮಾಡಬೇಕು. ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

6.30 ಪಿ.ಎಂ

ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿರುವವರು ಮಾಡುವ ಕೆಲಸಗಳನ್ನು ಮಾಡುತ್ತಾರೆ. ಶಾಸಕರುಗಳಿಗೂ ಸಹ ಗೌರವ ಬರಬೇಕಾಗಿರುವುದರಿಂದ ಸರ್ಕಾರ ದಯವಿಟ್ಟು ಸ್ಪಷ್ಟವಾದ ಉತ್ತರ ಕೊಡಬೇಕು ಮತ್ತು ಅವಶ್ಯಕತೆಯಿದ್ದರೆ ಕಾನೂನಿಗೆ ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಈಗ 'ಆಶ್ರಯ' ಯೋಜನೆ ಏನಿದೆ, ಇದು ಅತ್ಯಂತ ಪರಿಣಾಮಕಾರಿ ಯೋಜನೆಯಾಗಿ ಪರಿವರ್ತನೆ ಹೊಂದಿದೆ. ನಮ್ಮನಾಯಕರಾದ ಶ್ರೀಮಾನ್ ಎಸ್. ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಶಾಸಕರುಗಳಿಗೆ ಮಹತ್ವಪೂರ್ಣರಾದ ಅಧಿಕಾರ ಕೊಟ್ಟಿದ್ದರು. ಇವೊತ್ತು ಸರ್ಕಾರದ ಪರವಾಗಿ ಇರುವ ಶಾಸಕರುಗಳಿಗೂ ಕೂಡ ಅತ್ಯಂತ ಅವಶ್ಯಕತೆಯಿರುವ, ಗ್ರಾಮಾಂತರ ಪ್ರದೇಶಗಳಿಗೆ ನಾವೇನಾದರೂ ಹೋದಾಗಕ ಅಲ್ಲಿನ ಜನರು ನಮ್ಮನ್ನು ಕೇಳಿದಾಗ ನಾವು ಇದರ ಬಗ್ಗೆ ಹೇಳಬೇಕಾಗುತ್ತದೆ. ಈಗ ಸನ್ಮಾನ್ಯ ಸಚಿವರು ಮಾತನಾಡುತ್ತಾ, ಲಾಟರಿ ಆಧಾರದ ಮೇಲೆ ಆಯ್ಕೆ ಮಾಡುವಂಥ ವಿಧಾನವನ್ನು ನಾವು ಹಿಂತೆಗೆಯುತ್ತೇವೆ ಎಂದು ಹೇಳಿರುವುದಕ್ಕೆ ನಮ್ಮ ಸಂಪೂರ್ಣ ಒಪ್ಪಿಗೆ ಇದೆ. ಏಕೆಂದರೆ, ಲಾಟರಿ ಆಧಾರದ ಮೇಲೆ ಬಡತನವನ್ನು ಪರೀಕ್ಷಿಸುವುದಕ್ಕಾಗುವುದಿಲ್ಲ. ಅಲ್ಲದೆ, ಗ್ರಾಮಾಂತರ ಪ್ರದೇಶದ ಜನರಿಗೆ ಶಾಸಕರುಗಳ ಮೇಲೆ ಒಂದು ರೀತಿಯಯ ಗೌರವವಿದೆ. ಹಿಂದಿನ ಸರ್ಕಾರವಿದ್ದಾಗ ಶಾಸಕರುಗಳಿಗೆ ಕೊಟ್ಟಿರತಕ್ಕ ಅಧಿಕಾರವನ್ನು ಈಗ ನೀವು ಕಸಿದುಕೊಳ್ಳುವುದು ಸರ್ವಥಾ ಸಲ್ಲದೆಂದು ನಮ್ಮ ಪಕ್ಷದ ಅಭಿಪ್ರಾಯವಾಗಿದೆ. ಮತ್ತು 'ಆಶ್ರಯ' ಸಮಿತಿಯ ಅಧ್ಯಕ್ಷ ಸ್ಥಾನವನ್ನು ಶಾಸಕರಿಗೆ ಕೊಡುವಲ್ಲಿ ಏನಾದರೂ ಕಾನೂನು ತೊಡಕುಗಳಿದ್ದರೆ, ಕಾನೂನಿಗೆ ತಿದ್ದುಪಡಿ ತರಬಹುದು. ತಿದ್ದುಪಡಿ ತರುವುದು ಅಷ್ಟೇನೂ ದೊಡ್ಡ ವಿಚಾರವಲ್ಲ. ಎಷ್ಟೋ ತಿದ್ದುಪಡಿಗಳನ್ನು ತಾವು ಸದನದಲ್ಲಿ ಮಂಡಿಸಿದ್ದೀರಿ. ಶಾಸಕರುಗಳನ್ನು ಆಶ್ರಯ ಸಮಿತಿಗೆ ಅಧ್ಯಕ್ಷರುಗಳನ್ನಾಗಿ ಮಾಡಿದರೆ ಅವರಿಗೆ ಗೌರವ ಸಿಗುವುದಷ್ಟೇ ಅಲ್ಲದೆ ಜನರಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವಾಗ ಯಾವುದೇ ರೀತಿಯ ಕುಂದು-ಕೊರತೆ, ಅಚಾತುರ್ಯಗಳಾಗಬಾರದೆನ್ನುವ ದೃಷ್ಟಿಯಿಂದಲೇ ಹೊರತು ಬೇರೆ ಯಾವುದೂ ಅಲ್ಲ. ನಮ್ಮ ಪಕ್ಷದ ಅನೇಕ ಸದಸ್ಯರುಗಳು ನಮ್ಮ ಬಳಿ ಬಂದು ನೀವು ಮಾತನಾಡಿ ಹೇಳಿದರೆ ಆಗುತ್ತದೆಂದು ಕೇಳುತ್ತಿರುವುದರಿಂದ ಆಶ್ರಯ ಸಮಿತಿಯ ಅಧ್ಯಕ್ಷ ಸ್ಥಾನವನ್ನು ದಯವಿಟ್ಟು ಶಾಸಕರುಗಳಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಸರ್ಕಾರದ ಗಮನಸೆಳೆಯುತ್ತಿದ್ದೇನೆ.

ಶ್ರೀ ಮಾಮನಿ ಚಂದ್ರಶೇಖರ್ ಮಲ್ಲಿಕಾರ್ಜುನ : ಸನ್ಮಾನ್ಯ ಅಧ್ಯಕ್ಷರೆ, ವಸತಿ ನಿವೇಶನ ಕುರಿತು ಹೇಳುವುದಾದರೆ, ಎಲ್ಲೆಲ್ಲಿ ಸ್ಥಳಾವಕಾಶ ಹೆಚ್ಚಾಗಿದೆಯೋ, ಅಲ್ಲಿ 30x40 ಅಳತೆಯಲ್ಲಿ ಮನೆ ಕಟ್ಟಿಕೊಟ್ಟರೆ ಗ್ರಾಮೀಣ ಪ್ರದೇಶದಲ್ಲಿರುವ ಜನರು ಹಸು, ಎಮ್ಮೆಗಳನ್ನು ಕಟ್ಟಿಕೊಂಡು ಹೇಗಾದರೂ ಜೀವನ ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಸ್ಥಳಾವಕಾಶ ಜಾಸ್ತಿ ಇರುವೆಡೆಯಲ್ಲಿ 30X40 ಅಳತೆಯ ನಿವೇಶನ ಮಾಡಿಕೊಡಬೇಕೆಂದು ನನ್ನ ವಿನಂತಿಯಾಗಿದೆ.

ಇದರ ಜೊತೆಗೆ ತಾವು ಎಷ್ಟೋ ಸಂಖ್ಯೆಯಲ್ಲಿ ಮನೆಗಳನ್ನು ಕಟ್ಟುತ್ತೀರಿ, ಹಾಗೆ ನೂರು ಮನೆಗಳನ್ನು ಕಟ್ಟುವಲ್ಲಿ ಐವತ್ತು ಆರ್.ಸಿ.ಸಿ. ಮನೆಗಳನ್ನು ಕಟ್ಟಿದರೆ ಅದು ಗಟ್ಟಿಮುಟ್ಟಾಗಿದ್ದು, ದೀರ್ಘ

ಬಾಳಿಕೆ ಬರುತ್ತದೆಂದು ನನ್ನ ಸಲಹೆ. ಏಕೆಂದರೆ, ಕಟ್ಟಿಗೆ ಹಾಕಿ ಹೆಂಚುಗಳನ್ನು ಹೊದಿಸಿದ ಹಾಗೂ ಸೂಕ್ತ ಸರಿಯಾದ ಸಾಮಗ್ರಿಗಳನ್ನು ಉಪಯೋಗಿಸಿದೆ ಮನೆಗಳನ್ನು ಕಟ್ಟಿದರೆ ಅಂತಹ ಮನೆಗಳಿಗೆ ಉಪಯೋಗಿಸಲಾಗಿರುವ ಕಟ್ಟಿಗೆಗಳಲ್ಲಿ ಹುಳು-ಹುಪ್ಪಟೆ ಹಿಡಿದು ಮನೆ ಹಾಳಾಗುವುದರಿಂದ, ಆರ್.ಸಿ.ಸಿ ಮನೆಗಳನ್ನೇ ಕಟ್ಟುವ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ವಸತಿ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದಲ್ಲದೆ, ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಆಶ್ರಯ ಯೋಜನಾ ಸಮಿತಿಗೆ ಶಾಸಕರುಗಳನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಏನು ಹೇಳಿದ್ದಾರೆ, ಅದಕ್ಕೆ ನಾನೂ ಕೂಡ ಸಮರ್ಥಿಸುತ್ತಾ, ಈ ಕುರಿತು ವಸತಿ ಸಚಿವರು ಈಗಲೇ ತಮ್ಮ ನಿರ್ಣಯ ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರುಗಳ ಮನಸ್ಸಿನಲ್ಲಿ ಏನಿದೆ, ಅವರಿಗಾಗಿರುವ ಅನುಭವ ಆಧಾರದ ಮೇಲೆ ಹೇಳಿದ್ದಾರೆ. ಈ ಕುರಿತು ಹೇಳುವುದಾದರೆ ಸದರಿ ವಿಷಯವಾಗಿ ಕಾನೂನಿಗೆ ತಿದ್ದುಪಡಿಯನ್ನು ಈ ಸದನದಲ್ಲಿ ತರದಹೊರತು ಹಾಗೆಯೇ ಮಾಡಲು ಸಾಧ್ಯವಾಗುವುದಿಲ್ಲ. ಕಾನೂನಿಗೆ ತಿದ್ದುಪಡಿ ತರುವುದನ್ನು ಪರಿಶೀಲಿಸಬಹುದೇ ಹೊರತು, ಹಾಗೆಯೇ ವಸತಿ ಸಚಿವರು ಇದನ್ನು ಹೇಗೆ ಮಾಡುತ್ತಾರೆ?

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಉಪ ಮುಖ್ಯಮಂತ್ರಿಗಳು ಈ ಬಗ್ಗೆ ಇನ್ನೂ ಪರಿಶೀಲನೆ ಮಾಡದೆ ಏಕೆ ಗೊಂದಲವುಂಟು ಮಾಡುತ್ತಿದ್ದಾರೋ, ನನಗರ್ಥವಾಗುತ್ತಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಸನ್ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇವೆ. ಕಾನೂನಿಗೆ ತಿದ್ದುಪಡಿ ತರುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ, ಅದರ ಬಗ್ಗೆ ಪರಿಶೀಲಿಸುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಮಿತಿ ಮಾಡುತ್ತೇವೆಂದು ಸರ್ಕಾರ ತಕ್ಷಣವೇ ಪ್ರಕಟಿಸಬೇಕೆಂದು ನಾವು ಕೇಳುತ್ತಿಲ್ಲ. ಕಾನೂನಿಗೆ ತಿದ್ದುಪಡಿ ತರುತ್ತೇವೆಂದು ನೀವು ಆಶ್ವಾಸನೆ ಕೊಡಿ. ಆಶ್ರಯ ಯೋಜನಾ ಸಮಿತಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ನೇಮಿಸುವ ಬಗ್ಗೆ ತಿದ್ದುಪಡಿ ತರಬೇಕೆಂದು ಮಾತ್ರ ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು : ಆ ಕುರಿತು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಬಹುತೇಕ ಸದಸ್ಯರುಗಳ ಅಭಿಪ್ರಾಯದಂತೆ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ನಮ್ಮ ಪಕ್ಷ ಸ್ಪಷ್ಟವಾದ ನಿಲುವು ತಾಳಿದೆ ಹಾಗೂ ಈ ವಿಚಾರದಲ್ಲಿ ನಮ್ಮ ಅನೇಕ ಶಾಸಕರುಗಳು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ, ಅಧಿಕಾರ ವಿಕೇಂದ್ರೀಕರಣದ ಸೂತ್ರವನ್ನು ಎಷ್ಟು ದುರ್ಬಲಗೊಳಿಸಬೇಕೆಂಬುದರ ಬಗ್ಗೆ ಕೂಡ ನಾವು ನಮ್ಮ ರಾಜಕೀಯ ಸಂಕಲ್ಪವನ್ನು ನಿರ್ಧರಿಸಬೇಕಾಗುತ್ತದೆ ಮತ್ತು ಕಾನೂನಿನಲ್ಲಿರುವ ತೊಡಕನ್ನು ಸರಿಪಡಿಸಬೇಕೆಂದು ಸದರಿ ವಿಷಯವಾಗಿ ಶಾಸಕರುಗಳು ಏನು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ, ಇದಕ್ಕಾಗಿ

ಈಗಾಗಲೇ ಪರಿಣಿತರ ಒಂದು ಸಮಿತಿಯನ್ನು ಕೂಡ ರಚಿಸಲಾಗಿದೆ. ಆದುದರಿಂದ, ನಾವು ವ್ಯಾಪಕವಾಗಿ ಕಾನೂನಿಗೆ ತಿದ್ದುಪಡಿಗಳನ್ನು ತರಬೇಕಾಗಿದೆ ಹಾಗೂ ರಾಜಕೀಯ ಸಂಕಲ್ಪದ ನಿರ್ಧಾರ ಕೂಡ ಮಾಡಬೇಕಾಗುತ್ತದೆ. ಈ ಕಾರಣದಿಂದ ತತಕ್ಷಣದಲ್ಲಿ ಪಂಚಾಯಿತಿ ಕಾನೂನಿಗೆ ನಾವು ತಿದ್ದುಪಡಿ ಮಾಡುತ್ತೇವೆಂದು ಹೇಳುವುದಕ್ಕಿಂತ ಪರಿಶೀಲನೆ ಮಾಡುತ್ತೇವೆಂದು ನಮ್ಮ ಉಪ ಮುಖ್ಯಮಂತ್ರಿಗಳು ಹೇಳಿರುವಂತೆ ಈ ವಿಷಯ ಪರಿಣಿತರ ಸಮಿತಿ ಮುಂದೆ ಕೂಡ ಹೋಗುವುದರಿಂದ ಆ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಪರಿಶೀಲನೆ ಮಾಡುತ್ತಿದೆಯೆಂದು ಹೇಳಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಶ್ರಯ ಯೋಜನಾ ಸಮಿತಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಬಹುತೇಕ ಅಭಿಪ್ರಾಯ ನಿಮ್ಮ ಕಡೆಯ ಶಾಸಕರಲ್ಲೂ ಇದೆ, ನಮ್ಮ ಕಡೆಯ ಶಾಸಕರಲ್ಲೂ ಇದೆ ಹಾಗೂ ವಿರೋಧ ಪಕ್ಷಗಳಲ್ಲೂ ಕೂಡ ಇದ್ದು ನಾವು ಆ ಕುರಿತು ಒತ್ತಾಯಪಡಿಸುತ್ತಿದ್ದೇವೆ. ನಾವು ಹೇಳುತ್ತಿರುವುದೇನೆಂದರೆ, ಈಗ ನೀವು ಏನು ಸಮಿತಿ ರಚಿಸಿದ್ದೀರಿ, ಶಾಸಕರುಗಳನ್ನು ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸುವುದರ ಬಗ್ಗೆ ತರುವ ತಿದ್ದುಪಡಿ ಕುರಿತು ಪರಿಶೀಲಿಸುತ್ತೇವೆಂದು ಹೇಳಿದರೆ, ಆ ಸಮಿತಿಯ ವರದಿ ಬಂದು, ಅನಂತರ ಸಮಿತಿ ಮಾಡಿರುವ ಶಿಫಾರಸ್ಸುಗಳೇನಿವೆ, ಅವುಗಳನ್ನು ನೀವು ಪರಿಶೀಲನೆ ಮಾಡುವ ಹೊತ್ತಿಗೆ ಒಂದು ವರ್ಷ ಮುಗಿದಿಹೋಗಿರುತ್ತದೆ. ಆದುದರಿಂದ, ನಾವು ಹೇಳುತ್ತಿರುವುದೇನೆಂದರೆ, ಈಗಾಗಲೇ ನೀವು ಈ ಸದನದಲ್ಲಿ ಪಂಚಾಯಿತಿ ಕಾನೂನಿಗೆ ಹಲವಾರು ತಿದ್ದುಪಡಿಗಳನ್ನು ತಂದಿದ್ದೀರಿ. ಅದೇ ರೀತಿ ಸದರಿ ಕಾನೂನಿಗೆ ತಿದ್ದುಪಡಿ ತಂದು ಆಶ್ರಯ ಸಮಿತಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ನೇಮಿಸುತ್ತೇವೆಂದು ನೀವು ಆಶ್ವಾಸನೆ ಕೊಡಬೇಕೆಂಬುದೇ ನಮ್ಮ ಸ್ಪಷ್ಟ ಅಭಿಪ್ರಾಯವಾಗಿದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೆ, ವಸತಿ ವಿಚಾರದಲ್ಲಿ ಒಂದು ಸ್ಪಷ್ಟ ತೀರ್ಮಾನವಾಗಬೇಕಾಗಿದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲೂ ಕೂಡ ಪಂಚಾಯಿತಿ ಕಾನೂನು ಅಸ್ತಿತ್ವದಲ್ಲಿದ್ದು, ಅವರು ಇತ್ತೀಚೆಗೆ ಬಹುಶಃ ಮೂರು ಲಕ್ಷ ಮನೆಗಳನ್ನು ಕಟ್ಟತಕ್ಕಂಥ ಒಂದು ಯೋಜನೆ ರೂಪಿಸಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಕಟ್ಟಿರತಕ್ಕ ಮನೆಗಳಲ್ಲಿ ಅರ್ಧದಷ್ಟು ಬಿದ್ದುಹೋಗಿವೆ. ಆದುದರಿಂದ, ನಾನು ಸರ್ಕಾರಕ್ಕೆ ಸೂಚಿಸುವುದೇನೆಂದರೆ, ಈ ಕುರಿತು ಒಂದು ಸಮಿತಿ ರಚಿಸಿ, ಆಂಧ್ರಪ್ರದೇಶದಲ್ಲಿ ವಸತಿ ನಿರ್ಮಿಸುವುದಕ್ಕೆ ಯಾವ ರೀತಿ ಯೋಜನೆ ರೂಪಿಸಿದ್ದಾರೆಂಬುದರ ಬಗ್ಗೆ ಅಲ್ಲಿಗೆ ನೇರವಾಗಿ ಹೋಗಿ ಅಧ್ಯಯನ ಮಾಡಿಕೊಂಡು ಬರಬೇಕು. ವಸತಿ ವಿಷಯವಾಗಿ ಆಂಧ್ರಪ್ರದೇಶದಲ್ಲಿ ಹಮ್ಮಿಕೊಂಡಿರುವ ಯೋಜನೆಯನ್ನು ರಾಜ್ಯದಲ್ಲಷ್ಟೇ ಅಲ್ಲ ಇಡೀ ಭಾರತದಾದ್ಯಂತ ಇರುವ ಎಲ್ಲಾ ರಾಜ್ಯ ಸರ್ಕಾರಗಳೂ ಕೂಡ ಅದೇ ರೀತಿ ಅನುಸರಿಸಿ, ಕಾರ್ಯಕ್ರಮ ಹಮ್ಮಿಕೊಳ್ಳುವ ಪರಿಸ್ಥಿತಿ ಇದೆ. ಈ ಬಗ್ಗೆ ಒಂದು ಸಮಿತಿ ರಚಿಸಿ ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ಈಗತಾನೇ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಮಾತನಾಡುತ್ತಾ, ಅಧಿಕಾರ

ವಿಕೇಂದ್ರೀಕರಣದ ಹೆಸರಿನಲ್ಲಿ ಹೊಸ ಆಂದೋಲನ ಮಾಡಿದ್ದೇವೆ ಮತ್ತು ಹೊಸ ತಿದ್ದುಪಡಿಗಳನ್ನು ತಂದು ಮಂಡಲ ಪಂಚಾಯಿತಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತು ಹಾಗೂ ಜಿಲ್ಲಾ ಪಂಚಾಯಿತಿಗಳನ್ನು ಮಾಡಿದ್ದೇವೆ ಎಂದು ಹೇಳಿದರು. ಇದು ಸ್ವಾಗತಾರ್ಹವಾದುದಾಗಿರುವುದರಿಂದ ಬೇಡವೆಂದು ನಾವು ಹೇಳುವುದಿಲ್ಲ. ಸದರಿ ಕಾನೂನಿಗೆ ತಿದ್ದುಪಡಿ ತಂದಿದ್ದು ಶ್ರೀಮಾನ್ ವೀರಪ್ಪ ಮೊಯಿಲಿಯವರ ಸರ್ಕಾರರೇ ಹೊರತು ನಿಮ್ಮ ಸರ್ಕಾರವಲ್ಲವೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಾಲ್ಲೂಕು ಮಟ್ಟದಲ್ಲಿ ಶಾಸಕರುಗಳ ಗೌರವ ಎಷ್ಟರಮಟ್ಟಿಗೆ ಕುಸಿದಿದೆಯೆಂಬ ಬಗ್ಗೆ ಕೂಡ ಈ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿದೆ. ತಾವೆಲ್ಲರೂ ಅಧಿಕಾರದಲ್ಲಿದ್ದೀರಿ, ಮಂತ್ರಿಗಳಾಗಿದ್ದೀರಿ. ಇದರ ಬಗ್ಗೆ ತಾವು ಯೋಚಿಸಬೇಕು. ಶಾಸಕರುಗಳಿಗಾಗಿರುವ ನೋವು ಏನೆಂದು ನಿಮಗೆ ಗೊತ್ತಾಗುತ್ತಿಲ್ಲ. ಶಾಸಕರುಗಳಿಗೆ ಗೌರವ ತೋರಿಸುವ ವಿಚಾರದಲ್ಲಿ ಎಲ್ಲಾ ಶಾಸಕರುಗಳು ಎಲ್ಲಾ ವೇದಿಕೆಗಳಲ್ಲೂ ಕೂಡ ಚರ್ಚೆಗೊಳಗಾಗಿದ್ದೇವೆ. ಶ್ರೀಮಾನ್ ಎಸ್. ಬಂಗಾರಪ್ಪನವರ ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಆಶ್ರಯ ಯೋಜನಾ ಸಮಿತಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ನೇಮಿಸಿದಂಥ ಸಂದರ್ಭದಲ್ಲಿ ಎಷ್ಟು ಜನ ಶಾಸಕರುಗಳು ಏನಾದರೂ ಭ್ರಷ್ಟಾಚಾರ ಮತ್ತು ತಪ್ಪು ಎಸಗಿದ್ದಾರೆಯೇ ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ. ಇವೊತ್ತು ಕಾನೂನುಗೆ ತಿದ್ದುಪಡಿ ತರುವುದರ ಕುರಿತು ಏಕಾಏಕಿ ಸಕಾರಣ ಹೇಳುತ್ತಿದ್ದೀರರಲ್ಲಾ, ಇದರ ಬಗ್ಗೆ ತಾವು ದಯಮಾಡಿ ಯೋಚಿಸಬೇಕು. ತಾಲ್ಲೂಕಿನ ಒಂದು ಕೇಂದ್ರಕ್ಕೆ ಹೋಗಿ ಅಲ್ಲಿ ಯಾರಾದರೂ ತಮಗೆ ಒಂದು ಮನೆ ಕಟ್ಟಿಕೊಡಬೇಕೆಂದು ಕೇಳಿದರೆ ನಿಮಗೆ ಮನೆ ಕೊಡಿಸುವುದಕ್ಕೆ ಶಕ್ತಿ ಇಲ್ಲ. ಈಗ ಅದಕ್ಕೆ ಒಂದು ತೀರ್ಮಾನವನ್ನು ಹೇಳಬೇಕೇ? ಬೇಡವೇ? ಇವೊತ್ತು ವಿರೋಧ ಪಕ್ಷದವರೆಲ್ಲರೂ ಇದ್ದರೆ ದಯಮಾಡಿ ಹೇಳುತ್ತೇನೆ. ಇದಕ್ಕೆ ಸರ್ಕಾರ ಮಣಿಯಬೇಕಾಗಿತ್ತು. ತಮ್ಮಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಆಶ್ರಯಯ ಯೋಚನಾ ಸಮತಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂಬ ಎಲ್ಲಾ ಸದಸ್ಯರುಗಳ ಒಕ್ಕೊರಲಿನ ಬೇಡಿಕೆ ಏನಿದೆ, ಇದನ್ನು ಸರ್ಕಾರ ಒಪ್ಪಿಕೊಂಡರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮನೆ ಕಟ್ಟಿಕೊಳ್ಳಲು ಸರ್ಕಾರ ರೂ.20,000, 25,000ಗಳನ್ನು ಕೊಡುತ್ತಿದೆ, ಇದನ್ನು ಮಂಡಲ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಸರಿಯಾಗಿ ನಿರ್ವಹಿಸುವುದಕ್ಕಾಗುವುದಿಲ್ಲ. ಇದನ್ನು ನಿರ್ವಹಣೆ ಮಾಡಲು ತಾಲ್ಲೂಕು ಮಟ್ಟದಲ್ಲಿ ಏನಾದರೂ ಒಂದು ಸಮಿತಿ ಇದ್ದರೆ, ಸಮಿತಿಯಲ್ಲಿ ಶಾಸಕರೇನಾದರೂ ಇದ್ದರೆ, ಅವರು ಯಾವುದಾದರೂ ಸಂದರ್ಭದಲ್ಲಿ ಹೋದಾಗ ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆ. ಸದನದಲ್ಲಿ ಈಗ ಸನ್ಮಾನ್ಯ ಸಭಾ ನಾಯಕರು ಹಾಗೂ ಉಪ ನಾಯಕರಿದ್ದೀರಿ. ಸದನದ ಮುಂದೆ ಎಷ್ಟೋ ತಿದ್ದುಪಡಿಗಳನ್ನು ಮಂಡಿಸುತ್ತಿದ್ದೀರಿ. ಆದುದರಿಂದ, ಎಲ್ಲಾ ಸದಸ್ಯರ ಒಮ್ಮತ ಅಭಿಪ್ರಾಯದಂತೆ ಈ ಕುರಿತು ತಿದ್ದುಪಡಿಯನ್ನು ಸಹ ತರಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರುಗಳು ಹೇಳಿರುವುದನ್ನೆಲ್ಲಾ ನಾವು ಕೇಳಿದ್ದೇವೆ. ರಾಜಕೀಯ ಮತ್ತು ವಿತ್ತೀಯ ಶಕ್ತಿಯನ್ನು ವಿಕೇಂದ್ರೀಕರಣಗೊಳಿಸುವುದಕ್ಕೆ ತಾವೆಲ್ಲರೂ ಒಪ್ಪಿದ್ದೀರಿ.

ವಿಕೇಂದ್ರಿಕರಣದ ಕುರಿತು ಚರ್ಚಿಸುವಾಗ ಏನು ಮಾಡಬೇಕು, ಈಗಾಗಲೇ ನಾವು ತಾಲ್ಲೂಕು ಪಂಚಾಯಿತಿಯನ್ನು ನಿರ್ಮಾಣ ಮಾಡಿದ್ದೇವೆ. ಕಾನೂನಿನ ಪ್ರಕಾರ the bodies are existing now. ಯಾವ್ಯಾವುದನ್ನು ವಿಕೇಂದ್ರೀಕರಣಗೊಳಿಸಬೇಕು? ಮತ್ತು ಯಾವ ಅಧಿಕಾರ ಹಂಚಿಕೆ ಮಾಡಬೇಕು? ಎಂಬ ಬಗ್ಗೆ ಪಂಚಾಯಿತಿ ಕಾನೂನಿಗೆ ಸಂಬಂಧಿಸಿದಂತೆ ಈಗಾಗಲೇ ತಜ್ಞರ ಒಂದು ಸಮಿತಿ ರಚಿಸಲಾಗಿದೆ. ಈಗಿರುವ ತಾಲ್ಲೂಕು ಪಂಚಾಯಿತಿ ಕಾನೂನು ಪ್ರಕಾರ, ಮಾನ್ಯ ಸದಸ್ಯರಾದ ಕೃಷ್ಣಾರೆಡ್ಡಿಯವರಿಗೆ ಗೊತ್ತಿರುವಂತೆ, ಹಿಂದದೆ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ತಾಲ್ಲೂಕು ಪಂಚಾಯಿತಿಗಳು ಇರಲಿಲ್ಲ. ನಾವು ಹಿಂದೆ ಡೀಸೆಂಟ್ರಲೇಸೇಷನ್ ಮಾಡಿದೆವು, ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯಿತಿಗಳು ಆಗ ಇತ್ತು. ತಾಲ್ಲೂಕು ಪಂಚಾಯಿತಿಗಳಿರಲಿಲ್ಲ. ಫಲಾನುಭವಿಗಳನ್ನು ಗ್ರಾಮದವರೇ ಆಯ್ಕೆ ಮಾಡುತ್ತಿದ್ದರು. ಆದ್ದರಿಂದ ತಾವು ಹೇಳಿರುವುದನ್ನು ಆದಷ್ಟು ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ. ಏಕೆಂದರೆ ವಿಧಾನಸಭೆಯಲ್ಲಿ ಸರ್ಕಾರವೇನಾದರೂ ಒಂದು ವಿಚಾರದ ಬಗ್ಗೆ ಅಂಡರಟೇಕಿಂಗ್ ಮಾಡಿಕೊಂಡರೆ ಅದನ್ನು ನಾವು ಮಾಡಲೇ ಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೇನೆ. ಅದಕ್ಕಿಂತ ಇನ್ನೇನು ಹೇಳಬೇಕೆಂಬುದು ತಿಳಿಯುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ವಿಕೇಂದ್ರಿಕರಣದ ತತ್ವವನ್ನು ದುರ್ಬಲಗೊಳಿಸಬೇಕು ಎನ್ನುವ ಯಾವುದೇ ವಿಷಯವನ್ನು ನಾವು ಹೇಳುತ್ತಿಲ್ಲ. ವಿಕೇಂದ್ರಿಕರಣದ ಕಾನೂನಿನ ಅಡಿಯಲ್ಲಿ ಈಗ ಗ್ರಾಮ ಪಂಚಾಯಿತಿಗಳಿಗೆ ಸಾಕಷ್ಟು ಅಧಿಕಾರವಿದೆ, ಕಾರ್ಯಗಳನ್ನು ಕೊಡತಕ್ಕಂಥ ನಿವೇಶನಗಳನ್ನು ಕೊಡತಕ್ಕಂಥ ಕೆಲಸ ಅಷ್ಟೇ ಅಲ್ಲ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕಂಥ, ಫಲಾನುಭವಿಗಳನ್ನು ಗುರುತಿಸತಕ್ಕಂಥ ಎಲ್ಲ ಅಧಿಕಾರಗಳು ಗ್ರಾಮಪಂಚಾಯಿತಿಗೆ ಇದೆ. ಗ್ರಾಮಪಂಚಾಯಿತಿಗೆ ಇರತಕ್ಕ ಅಧಿಕಾರವನ್ನು ಮೊಟಕುಗೊಳಿಸಬೇಕು, ಅದನ್ನು ದುರ್ಬಲಗೊಳಿಸಬೇಕು ಎನ್ನುವ ಬಗ್ಗೆ ನಾವು ಖಂಡಿತವಾಗಿಯೂ ಮಾತನಾಡುತ್ತಿಲ್ಲ. ಆ ರೀತಿ ಎಲ್ಲಾ ಅಧಿಕಾರ ಅದಕ್ಕಿದ್ದರೆ ಶಾಸಕರಾದ ನಮ್ಮ ಕೆಲಸವೇನು? ಗ್ರಾಮಪಂಚಾಯಿತಿಗೆ ಆಶ್ರಯ ಯೋಜನೆ ಇದೆ, ರೋಜಗಾರ್ ಯೋಜನೆಯ ಕಾರ್ಯಕ್ರಮವಿದೆ, ನಾವು ಕೇಳುತ್ತಿರುವುದು ಮನೆ ಮತ್ತು ನಿವೇಶನಗಳನ್ನು ಹಂಚುವ ಬಗ್ಗೆ ಮಾತ್ರ.

ಅಧ್ಯಕ್ಷರು : ಸಾಕು. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರಲ್ಲ. ತಾವು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಿದ್ದರೆ ನಾನು ಕೇಳುವುದಕ್ಕೆ ಬೇಜಾರಾಗುತ್ತದೆ. ನಿಮಗೆ ಹೇಳುವುದಕ್ಕೆ ಚೆನ್ನಾಗಿರುತ್ತದೆ. ಆದರೆ ತಾವು ಹೇಳಿದ್ದೇ ಹೇಳುತ್ತಿದ್ದರೆ ನಾನು ಕೇಳಬೇಕಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ಸ್ಪಷ್ಟವಾದ ಉತ್ತರ ಇದರ ಬಗ್ಗೆ ಬೇಕಲ್ಲ.

ಅಧ್ಯಕ್ಷರು : ಸ್ಪಷ್ಟವಾಗಿ ಹೇಳಿದ್ದಾರಲ್ಲ. ಕೌಜಲಗಿಯವರೆ ಬೇಡಿಕೆಯನ್ನು ಮೂವ್ ಮಾಡಿ.

ಶ್ರೀ ಶಿವಾನಂದ ಎಸ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಬಗ್ಗೆ ಸದಸ್ಯರುಗಳು ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ.

ಮುಖ್ಯವಾಗಿ ರಾಜ್ಯದಲ್ಲಿ ರಸ್ತೆಗಳ ದುರಸ್ಥಿಯ ಬಗ್ಗೆ ಹೆಚ್ಚು ಜನರು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮುಖ್ಯವಾಗಿ ರಾಜ್ಯದಲ್ಲಿ ರಸ್ತೆಗಳ ದುರಸ್ಥಿಯ ಬಗ್ಗೆ ಹೆಚ್ಚು ಜನರು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಸಲುವಾಗಿ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ಅದರ ಪ್ರಕಾರ ಪ್ರತಿಯೊಂದು ಕ್ಷೇತ್ರದಲ್ಲಿ ಮೂವತ್ತು ಲಕ್ಷ ರೂಪಾಯಿಗಳನ್ನು ರಸ್ತೆಗಳ ರಿಪೇರಿಗಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ. ಎರಡನೆಯದಾಗಿ ಸರ್ಕಾರ ಅಧಿಕಾರಕ್ಕೆ ಬಂದ ಹೊಸದರಲ್ಲಿ ಸುಮಾರು 73 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ ಇತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಸರ್ಕಾರದ ನಿಲುವನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಸಿ.ಪಿ.ಎಂ. ಪಕ್ಷದ ಸದಸ್ಯರುಗಳಾದ ಶ್ರೀ ಶ್ರೀರಾಮರೆಡ್ಡಿಯವರು ಮತ್ತು ಎಸ್. ರಾಜೇಂದ್ರನರವರು ಸಭಾತ್ಯಾಗ ಮಾಡಿದರು)

ಶ್ರೀ ಎಲ್.ಆರ್. ಶಿವರಾಮೇಗೌಡ : ಲೋಕೋಪಯೋಗಿ ಸಚಿವರು ಸ್ವಲ್ಪ ಈಲ್ಡ ಆಗುವುದಾದರೆ ಹೇಳುತ್ತೇವೆ. ತಮಗೆ ಸ್ವಲ್ಪ ಇರುಸುಮುರುಸಾಗಬಹುದು. ಆದರೆ ವಿಧಿಯಿಲ್ಲ, ನಾವು ನಮ್ಮ ನಿಲುವನ್ನು ಹೇಳಿದ್ದೇವೆ. ತಮಗೆ ತಿಳಿಸಿದ್ದೇವೆ. ನಾವು ನಮಗೇನು ಕೇಳುತ್ತಿಲ್ಲ. ಇಡೀ ರಾಜ್ಯದ ಎಲ್ಲಾ ಶಾಸಕರಿಗೂ ಕೇಳುತ್ತಿದ್ದೇವೆ. ಒತ್ತುವರಿ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಲು ನಮಗೆ ಸಾಧ್ಯವಿಲ್ಲವೆಂದು ಹೇಳುತ್ತೀರಿ. ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲು ಆಗುವುದಿಲ್ಲವೆಂದು ವಸತಿ ಸಚಿವರಾದ ಬಸವರಾಜರಾಯರೆಡ್ಡಿಯವರು ಹೇಳುತ್ತಾರೆ. ಆ ರೀತಿ ಇದ್ದ ಮೇಲೆ ಸರ್ಕಾರದ ನಿಲುವನ್ನು ಪ್ರತಿಭಟಿಸಿ ನಾವೂ ಅವರ ಜೊತೆಯಲ್ಲಿ ಸಭಾತ್ಯಾಗ ಮಾಡುತ್ತೇವೆ.

(ಪಕ್ಷೇತರ ಸದಸ್ಯರಾದ ಎಲ್.ಆರ್. ಶಿವರಾಮೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಬೇಡಿಕೆಯ ಬಗ್ಗೆ ನನ್ನ ಮಾತನ್ನು ಮುಂದುವರೆಸುತ್ತೇನೆ. ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ. ಮತ್ತು 43, 44, 45ನೇ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರುಗಳು ನನ್ನ ಹೆಚ್.ಯು.ಡಿ. ಇಲಾಖೆಗೆ ಸಂಬಂಧಪಟ್ಟಂತೆ ಸಲಹೆಗಳನ್ನು ಕೊಟ್ಟಿದ್ದಾರೆ. ಅವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಆ ಸಮಸ್ಯೆಗಳ ಬಗೆಹರಿಸಲು ಪ್ರಯತ್ನ ಪಡುತ್ತೇನೆಂದು ಹೇಳಿ ನನ್ನ ಇಲಾಖೆಗೆ ಬೇಡಿಕೆಗಳ ಒಪ್ಪಿಗೆ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ

"31.3.1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ : 30, 31, 32, 54, 55, 33, 43, 44 ಮತ್ತು 45ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ

ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು."

ಪ್ರಸ್ತಾಪವನ್ನು ಅಂಗೀಕರಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ - 30 - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 51,49,26,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 38,93,84,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ - 31- ನಗರಾಭಿವೃದ್ಧಿ- (ಬೆಂಗಳೂರು ಅಭಿವೃದ್ಧಿ ಯೋಜನೆಯಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತು ಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 164,15,08,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 108,21,76,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ - 32 - ಬೆಂಗಳೂರು ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ಬೆಂಗಳೂರು ಅಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,43,508,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,10,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 54 - ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 222,11,96,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ - 55 - ಗ್ರಾಮೀಣ ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣ ಅಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 577,07,61,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ - 34 - ಭಾರಿ ಮತ್ತು ಮಧ್ಯಮ ನೀರಾವರಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ("ಭಾರಿ ಮತ್ತು ಮಧ್ಯಮ ನೀರಾವರಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 397,81,50,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 909,43,46,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ - 33 - ಸಣ್ಣನೀರಾವರಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಸಣ್ಣ ನೀರಾವರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 46,58,22,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 62,03,98,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂದ - 43 - ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯಾಗಿ ಕಾಮಗಾರಿ (ನಿರ್ಮಾಣ ಹೊರತು)"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 197,50,62,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂದ - 44 - ಕಟ್ಟಡಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಕಟ್ಟಡಗಳು "ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,89,01,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 113,14,69,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂದ - 45 - ರಸ್ತೆಗಳು ಮತ್ತು ಸೇತುವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ರಸ್ತೆಗಳು ಮತ್ತು ಸೇತುವೆಗಳಿಗೆ " ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 157,93,29,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 96,71,96,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡುವುದು.

ಅಧ್ಯಕ್ಷರು : ಅಭಿಯಾಚನೆ ಕ್ರಮಾಂಕ : 37, ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ, ಅಭಿಯಾಚನೆ ಕ್ರಮಾಂಕ 38, ಸಚಿವಾಲಯ, ಅಭಿಯಾಚನೆ ಕ್ರಮಾಂಕ : 40, ಸಾಮಾನ್ಯ ಆಡಳಿತ ಇತ್ಯಾದಿ, ಅಭಿಯಾಚನೆ ಕ್ರಮಂಕ : 51, ವಕ್ಫ ಬೇಡಿಕೆಗಳನ್ನು ಮಂಡಿಸುವುದು.

ಬೇಡಿಕೆಯ ಸಂಖ್ಯೆ : 37 - ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಯವರು ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ರಾಜ್ಯಪಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 640,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡುಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ : 38 - ಸಚಿವಾಲಯ

ಮಾನ್ಯ ಅಧ್ಯಕ್ಷರೆ, ರಾಜ್ಯಪಲರ ಶಿಫಾರಸ್ಸಿನ ಮೇರೆಗೆ 31.3.1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 35,26,04,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡುಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ : 40 - ಸಾಮಾನ್ಯ ಆಡಳಿತ ಇತ್ಯಾದಿ

ಮಾನ್ಯ ಅಧ್ಯಕ್ಷರೆ, ರಾಜ್ಯಪಲರ ಶಿಫಾರಸ್ಸಿನ ಮೇರೆಗೆ 31.3.1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಸಾಮಾನ್ಯ ಆಡಳಿತ ಇತ್ಯಾದಿ " ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 48,55,27,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡುಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ : 51 - ವಕ್ಫ್

ಮಾನ್ಯ ಅಧ್ಯಕ್ಷರೆ, ರಾಜ್ಯಪಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ವಕ್ಫ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,55,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡುಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಕ್ರಮಾಂಕ - 39 - ಜಿಲ್ಲಾಡಳಿತ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : " ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಜಿಲ್ಲಾಡಳಿತಗಳಿಗೆ " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 93,06,45,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 49 - ಮುದ್ರಾಂಕಗಳು ಮತ್ತು ನೋಂದಣಿ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಮುದ್ರಾಂಕಗಳು ಮತ್ತು ನೋಂದಣಿ "ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,27,45,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 50 - ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮತೀಯ ಮತ್ತು ಧರ್ಮದಾಯ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,74,52,000 ರೂ.ಗಳಿಗಿಂತ ಮೀರದ ಮೊತ್ತವನ್ನು

(ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ 48 - ಭೂ ಕಂದಾಯ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ಭೂ ಕಂದಾಯ ಇತ್ಯಾದಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 82,15,03,000 ರೂ.ಗಳಿಗಿಂತ ಮೀರದ ಮೊತ್ತವನ್ನ ಮತ್ತು ಬಂಡವಾಳ ಖಾತೆಯಲ್ಲಿ 601,75,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಕ್ರಮಾಂಕ - 15 : ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು.

ಶ್ರೀ ಸಿದ್ಧರಾಮಯ್ಯ (ಹಣಕಾಸು ಹಾಗೂ ಯೋಜನಾ ಸಚಿವರು) :" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ"ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 82,11,20,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ - 16 : ವಿಶ್ರಾಂತಿ ಮತ್ತು ಇತರ ನಿವೃತ್ತಿ ಸೌಲಭ್ಯಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 549,39,40,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ 17 - ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,07,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 19,51,40,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ - 18 : ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿಗಳು, ವಿಮ್ಮೆ ಖಜಾನೆ ಮತ್ತು ಲೆಕ್ಕ ಆಡಳಿತ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿಗಳು, ವಿಮ್ಮೆ ಖಜಾನೆ ಮತ್ತು ಲೆಕ್ಕಪತ್ರ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71,88,42,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ -19 : ಇತರೇ ವಿವಿಧ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರೇ ಸೇವೆಗಳಿಗೆ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 46,58,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,85,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ - 41 - ಯೋಜನೆ ಮತ್ತು ಸಾಂಸ್ಥಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯನ್ನು ಹೊರತುಪಡಿಸಿ)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಸ್ಥಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯನ್ನು ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,57,59,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 34,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾಪವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 5 : ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)

ಶ್ರೀ ಆರ್.ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ" ಉದ್ಯಮಗಳು(ಜವಳಿ, ಸಕ್ಕರೆ ಮತ್ತು

ರೇಷ್ಮೆ ವ್ಯವಸಾಯದ ಹೊರತು)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34,04,65,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 38,77,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 24 - ಅರಕ್ಷಕ ಸೇವೆಗಳು

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ಅರಕ್ಷಕ ಸೇವೆಗಳಿಗೆ " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 391,37,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 42 - ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯದಿ

ಶ್ರೀ ವೈಜನಾಥ್ ಪಾಟೀಲ್ : (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ" ಹಿಂದುಳಿದ ಪ್ರದೇಶಗಭ ಅಭಿವೃದ್ಧಿ ಇತ್ಯಾದಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 110,32,25,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 35 - ವಿಧಾನ ಮಂಡಲ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ವಿಧಾನ ಮಂಡಲಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,10,62,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಅಭಿಯಾಚನೆ ಕ್ರಮಾಂಕ - 36 - ನ್ಯಾಯ ಪರಿಪಾಲನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 64,20,44,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ." ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 22 - ರಾಜ್ಯದ ಅಬಕಾರಿ

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯದ ಅಬಕಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,65,89,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 23 - ಸಾರಿಗೆ ಸೇವೆಗಳು

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ಸಾರಿಗೆ ಸೇವೆ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 50,25,30,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50,25,30,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ಒಂದು ಕ್ಷೇತ್ರಕ್ಕೆ ಇಷ್ಟು ಬಸ್ ಕೊಡುತ್ತೇವೆಂದು ಹೇಳಿದ್ದರು. ಯಾವ್ಯಾವ ಕ್ಷೇತ್ರಕ್ಕೆ ಎಷ್ಟು ಬಸ್ ಕೊಟ್ಟಿದ್ದಾರೆಂದು ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು : ಡಿಮಾಂಡ್ ಮೂವ್ ಮಾಡುತ್ತಾರೆ, ನಾಳೆ ಉತ್ತರ ಹೇಳುತ್ತಾರೆ.

ಅಭಿಯಾಚನೆ ಕ್ರಮಾಂಕ - 28 - ವೈದ್ಯಕೀಯ ಶಿಕ್ಷಣ

ಶ್ರೀ ಎ.ಬಿ. ಪಾಟೀಲ್ : (ವೈದ್ಯಕೀಯ ಶಿಕ್ಷಣ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳುವ ಆರ್ಥಿಕ ವರ್ಷದಲಿ "ವೈದ್ಯಕೀಯ ಶಿಕ್ಷಣ"ಕೆ ಸಂದಾಯ

ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 120,60,03,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 29 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಡಾ. ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 120,60,03,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ - 7 - ಚಿಕ್ಕ ಪುಟ್ಟ ಉದ್ಯಮಗಳು

ಶ್ರೀ ಎನ್.ಎಂ. ನಬಿ (ಕೈಗಾರಿಕಾ ರಾಜ್ಯ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕ ಪುಟ್ಟ ಉದ್ಯಮಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 119,11,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,20,17,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ -52 - ಸಹಕಾರ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 156,02,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 23,24,72,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

7.00 ಪಿ.ಎಂ

ಬೇಡಿಕೆ ಸಂಖ್ಯೆ - 20 - ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 234,75,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 21 - ಅರಣ್ಯ

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 178,85,17,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 6 - ಗಣಿ ಮತ್ತು ಭೂ ವಿಜ್ಞಾನ

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿಗಳು ಮತ್ತು ಭೂ ವಿಜ್ಞಾನ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,44,66,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 53 - ಕೃಷಿ ಮಾರುಕಟ್ಟೆ

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕ್ರಮಪಡಿಸಿದ

ಮಾರುಕಟ್ಟೆಗಳಿಗಾಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 19,31,08,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 8 ರೇಷ್ಮೆ ವ್ಯವಸಾಯ

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ವ್ಯವಸಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 118,69,44,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 9 - ಸಕ್ಕರೆ, ಜವಳಿ ವಿಜ್ಞಾನ ಮತ್ತು ಯಂತ್ರ ಕಲೆ ಹಾಗೂ ಪರಿಸರ ಶ್ರೀ ಪಿ.ಸಿ. ಸಿದ್ಧನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ಯಂತ್ರ ಕಲೆ ಹಾಗೂ ಪರಿಸರ ಖಾತೆ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "(ಸಕ್ಕರೆ, ಜವಳಿ, ವಿಜ್ಞಾನ ಮತ್ತು ಯಂತ್ರ ಕಲೆ ಹಾಗೂ ಪರಿಸರ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,82,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 56 - ಕಾರ್ಮಿಕ ಮತ್ತು ಉದ್ಯೋಗ

ಶ್ರೀ ಮೀರಾಜುದ್ದೀನ ಎನ್. ಪಾಟೀಲ್ (ಬಂದೀಖಾನೆ, ಗೃಹರಕ್ಷಕದಳ, ನಾಗಲೀಕ ರಕ್ಷಣೆ, ಸೈನಿಕ ಕಲ್ಯಾಣ ಖಾತೆ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ ಮತ್ತು ಉದ್ಯೋಗ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 64,88,83,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ - 60 - ಮಲೆನಾಡು ಪ್ರದೇಶ ಅಭಿವೃದ್ಧಿ

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಲೆನಾಡು ಪ್ರದೇಶ ಅಭಿವೃದ್ಧಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಪೂರಕ ಅಂದಾಜುಗಳು 1995-96

ಶ್ರೀ ಸಿದ್ಧರಾಮಯ್ಯ (ಹಣಕಾಸು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನ 205(1)ನೇ ಅನುಚ್ಛೇದದ ಮೇರೆಗೆ, 1995-96ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳ (ಮೊದಲನೇ ಕಂತು) ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಪ್ರಕಟಣೆ

ಅಧ್ಯಕ್ಷರು : 1) ದಿನಾಂಕ 18ನೇ ಸೆಪ್ಟೆಂಬರ್, 1995ರಂದು ಪ್ರಶ್ನೋತ್ತರ ನಡೆಯದ ಕಾರಣ 24ನೇ ಪಟ್ಟಿಯಲ್ಲಿರುವ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ, 10 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ತಡೆಹಿಡಿಯಲಾದ 2 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 57 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

2) ದಿನಾಂಕ 19ನೇ ಸೆಪ್ಟೆಂಬರ್, 1995ರ 25ನೇ ಪಟ್ಟಿಯಲ್ಲಿರುವ 14 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ತಡೆಹಿಡಿಯಲಾದ 6 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 36 ಪ್ರಶ್ನೆಗಳ ಪೈಕಿ 27 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ವರಾಹಿ ಜಲ ವಿದ್ಯುತ್ ಯೋಜನೆಯಲ್ಲಿ ಮನೆ, ಜಮೀನು ಕಳೆದು ಕೊಂಡವರಿಗೆ ವಿದ್ಯುತ್ ನಿಗಮದಲ್ಲಿ ಉದ್ಯೋಗ.

347 - ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?